ಸಂಪುಟ: 06 ಸಂಚಿಕೆ: 209 ಪುಟಗಳು: 08 ಬುಧವಾರ 14 ಅಕ್ಟೋಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 + 91 8035621249 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ



ಯಾ ದೇವಿ ಸರ್ವ ಭೂತೇಷು
ಕುಷ್ಮಾಂಡ ರೂಪೇಣ ಸಂಸ್ಥಿತಾ
ನಮಸ್ತಸ್ಯೈ ನಮಸ್ತಸ್ಯೈ
ನಮಸ್ತಸ್ಯೈ ನಮೋ ನಮಃ

## ಪ್ರವಾಸೋದ್ಯಮದ ಅಭಿವೃದ್ಧಿ, ಆವಿಷ್ಕಾರಕ್ಕೆ ಟೂರಿಸಂ ಸ್ಟಾರ್ಟಪ್ ಪ್ರಮೋಷನ್ ಪಾಲಿಸಿ: ಸಚಿವ ಕೆ. ಜೆ. ಜಾರ್ಜ್

• ಉದಯವಾಹಿನಿ, ಬೆಂಗಳೂರು

ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗೆ ಹೊಸ ತಂತ್ರಜ್ಞಾನ, ಉತ್ಪನ್ನಗಳು ಮತ್ತು ನವೀನ ಪರಿಹಾರಗಳನ್ನು ರೂಪಿಸಲು ಸ್ಟಾರ್ಟ್ ಅಪ್‌ಗಳ ಸಾಮರ್ಥ್ಯವನ್ನು ಬಳಸಿಕೊಳ್ಳುವ ಉದ್ದೇಶದಿಂದ ರಾಜ್ಯ ಪ್ರವಾಸೋದ್ಯಮ ಇಲಾಖೆ 'ಟೂರಿಸಂ ಸ್ಟಾರ್ಟಪ್ ಪ್ರಮೋಷನ್ ಪಾಲಿಸಿ' ರೂಪಿಸಲಿದೆ ಎಂದು ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು. ಪ್ರವಾಸೋದ್ಯಮ ಕ್ಷೇತ್ರದ ನೈಜ ಸಮಸ್ಯೆಗಳು ಮತ್ತು ಅಗತ್ಯಗಳನ್ನು ಗುರುತಿಸಿ, ಅವುಗಳಿಗೆ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಸ್ಟಾರ್ಟ್‌ಅಪ್‌ಗಳು, ಯುವ ಉದ್ಯಮಿಗಳು ಮತ್ತು ನವೋದ್ಯಮಿಗಳಿಗೆ ಅವಕಾಶ ಕಲ್ಪಿಸುವುದು ಉದ್ದೇಶಿತ ನೀತಿಯ ಪ್ರಮುಖ ಆಶಯವಾಗಿದೆ. ಪ್ರವಾಸಿಗರ ಅನುಭವ, ಡಿಜಿಟಲ್ ಸೇವೆಗಳು, ಪ್ರವಾಸಿ ತಾಣಗಳ ನಿರ್ವಹಣೆ, ಸುಸ್ಥಿರ ಪ್ರವಾಸೋದ್ಯಮ, ಸ್ವಚ್ಛತೆ, ಸಂಚಾರ, ಸುರಕ್ಷತೆ, ಪ್ರವೇಶಸೌಲಭ್ಯ, ಪ್ರವಾಸಿ ಮಾಹಿತಿ ಹಾಗೂ ಸ್ಥಳೀಯ ಅನುಭವಗಳ ಅಭಿವೃದ್ಧಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹೊಸ ಪರಿಹಾರಗಳನ್ನು ರೂಪಿಸಲು ನೀತಿಯಡಿ ಅವಕಾಶ ಕಲ್ಪಿಸುವ ಕುರಿತು ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಕರ್ನಾಟಕವು ದೇಶದ ಪ್ರಮುಖ ಸ್ಟಾರ್ಟ್‌ಅಪ್ ಕೇಂದ್ರವಾಗಿದೆ. ಈ ನಾವಿನ್ಯತೆಯ ಶಕ್ತಿಯನ್ನು ಪ್ರವಾಸೋದ್ಯಮದೊಂದಿಗೆ ಜೋಡಿಸಬೇಕು. ಪ್ರವಾಸೋದ್ಯಮ ಇಲಾಖೆಯ ಅಗತ್ಯಗಳು ಮತ್ತು ಸವಾಲುಗಳನ್ನು ಸ್ಟಾರ್ಟ್‌ಅಪ್‌ಗಳ ಮುಂದೆ ಇಟ್ಟು, ಅವರು ಹೊಸ ಪರಿಹಾರ, ಉತ್ಪನ್ನ ಮತ್ತು ಸೇವೆಗಳನ್ನು ಅಭಿವೃದ್ಧಿಪಡಿಸಲು ಅವಕಾಶ ನೀಡುವುದು ನಮ್ಮ ಉದ್ದೇಶ. ಉತ್ತಮ ಆಲೋಚನೆಗಳನ್ನು ಪ್ರಾಯೋಗಿಕವಾಗಿ ಪರೀಕ್ಷಿಸಿ, ಫಲಿತಾಂಶ ನೀಡುವ ಪರಿಹಾರಗಳನ್ನು ಪ್ರವಾಸೋದ್ಯಮ ವ್ಯವಸ್ಥೆಯಲ್ಲಿ ಬಳಸಿಕೊಳ್ಳುವಂತಹ ವಾತಾವರಣವನ್ನು ರೂಪಿಸಲು ಈ ನೀತಿ ನೆರವಾಗಲಿದೆ ಎಂದು ಸಚಿವ ಕೆ.ಜೆ. ಜಾರ್ಜ್ ಹೇಳಿದರು.

## ಸಿಇಸಿ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಬೆಂಗಳೂರಿನಲ್ಲಿ ವಕೀಲರ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಸಿಇಸಿ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿ ದೆಹಲಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ವಕೀಲರು ಮತ್ತು ವಿದ್ಯಾರ್ಥಿಗಳನ್ನು ಬಂಧಿಸಿದ ಕ್ರಮ ವಿರೋಧಿಸಿ ಇಂದು ಬೆಂಗಳೂರಿನಲ್ಲೂ ವಕೀಲರು ಪ್ರತಿಭಟನೆ ನಡೆಸಿದರು. ಹೈಕೋರ್ಟ್‌ನ ಗೇಟ್‌ನ 1ರ ಹೊರಗೆ ಪ್ರತಿಭಟಿಸಿದ ಅವರು, ಮತದಾರರ ಹೆಸರು ಡಿಲೀಟ್ ಆರೋಪ ಮತ್ತು ಪ್ರತಿಭಟನಾಕಾರರ ವಿರುದ್ಧ ಪೊಲೀಸ್ ಕ್ರಮದ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಜ್ಞಾನೇಶ್ ಕುಮಾರ್ ತಮ್ಮ ಸಾಂವಿಧಾನಿಕ ಹುದ್ದೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ನಾಗರಿಕರನ್ನು ಮತ ಹಕ್ಕಿನಿಂದ ವಂಚಿಸಲಾಗುತ್ತಿದೆ. ನಮೂನೆ 6ಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ಗೆ ಕುಮಾರ್ ನೀಡಿದ ಹೇಳಿಕೆಗಳನ್ನು ಪ್ರಶ್ನಿಸಿದ ಅವರು, ಅಗತ್ಯ ಮಾಹಿತಿಯನ್ನು ತಪ್ಪಾಗಿ ಬಿಂಬಿಸಲಾಗಿದೆ. ಅಲ್ಲದೆ, ಅಲ್ಪಸಂಖ್ಯಾತರನ್ನು ಗುರಿಯಾಗಿಸಲು ನಮೂನೆ 7 ಅನ್ನು ಬಳಸಲಾಗುತ್ತಿದೆ ಎಂದೂ ವಕೀಲ ಎಸ್ ಬಾಲನ್ ಆರೋಪಿಸಿದರು. ಕುಮಾರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದ ಅವರು, ಮುಖ್ಯ ಚುನಾವಣಾ ಆಯುಕ್ತರ ಹುದ್ದೆಯಿಂದ ತೆಗೆದುಹಾಕಲಿ ಸಾಂವಿಧಾನಿಕ ಸಂಸ್ಥೆಗಳಲ್ಲಿ ರಾಜಕೀಯ ಹಸ್ತಕ್ಷೇಪ ನಡೆಯುತ್ತಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಟೀಕಿಸಿದರು.

## ಸಿದ್ದರಾಮಯ್ಯರನ್ನು ಕೋರ್ಟ್ ಮೆಟ್ಟಿಲೇರುವಂತೆ ಮಾಡಿ, ಕಾಂಗ್ರೆಸ್ Use & Throw ಮಾಡಿದೆ : ಅಶೋಕ್

• ಉದಯವಾಹಿನಿ, ಬೆಂಗಳೂರು

ಕೃತಜ್ಞತೆ ಇಲ್ಲದ ಕಾಂಗ್ರೆಸ್ ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಬೆನ್ನಿಗೆ ಚೂರಿ ಹಾಕಿದೆ. ಈಗ ಕೋರ್ಟ್ ಮೆಟ್ಟಿಲೇರುವಂತೆ ಮಾಡಿ, ಯೂಸ್ ಆಂಡ್ ಥ್ರೋ ಮಾಡಿದ್ದಾರೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಾನು ಬಹಳ ನೋವಿನಿಂದ, ಒಲ್ಲದ ಮನಸ್ಸಿನಿಂದ ಹೇಳ್ತಿದ್ದೀನಿ. ಸಿದ್ದರಾಮಯ್ಯ ದೇವರಾಜ ಅರಸು ಅವರ ದಾಖಲೆ ಮುರಿದವರು.

ಸಿಎಂ ಸ್ಥಾನವನ್ನೇ ತ್ಯಾಗ ಮಾಡಿದವರು, ಅನ್ನರಾಮಯ್ಯ ಅವರು. ಆದರೆ ಇವತ್ತು ಸಿದ್ದರಾಮಯ್ಯ ಅವರಿಗೆ ಕೋರ್ಟ್ ಮೆಟ್ಟಿಲೇರುವ ನೋವು ಕೊಟ್ಟಿದ್ದೆ ಕಾಂಗ್ರೆಸ್. ಕೃತಜ್ಞತೆ ಇಲ್ಲದ ಕಾಂಗ್ರೆಸ್, ಕಪಟ ಕಾಂಗ್ರೆಸ್, ಬೆನ್ನಿಗೆ ಚೂರಿ ಹಾಕಿದ ಕಾಂಗ್ರೆಸ್ ಇದು. ತಡೆಯಾಜ್ಞೆ ಕೋರಿ ಸಿದ್ದರಾಮಯ್ಯ ಕೋರ್ಟ್ ಮೆಟ್ಟಿಲೇರುವ ದಯನೀಯ ಸ್ಥಿತಿಗೆ ತಂದಿದ್ದಾರೆ. ಅವರನ್ನು ಯೂಸ್ ಆಂಡ್ ಥ್ರೋ ಮಾಡಿದ್ದಾರೆ.

## ಸೌಜನ್ಯ ಪ್ರಕರಣದಲ್ಲಿ ತಂದೆ, ತಾಯಿ ಹಣ ಮಾಡಿಕೊಂಡಿದ್ದಾರೆ : ಗಂಭೀರ ಆರೋಪ

• ಉದಯವಾಹಿನಿ, ಬೆಂಗಳೂರು

ಸೌಜನ್ಯ ಪ್ರಕರಣದಲ್ಲಿ ಆಕೆಯ ತಂದೆ, ತಾಯಿ ಹಣ ಮಾಡಿಕೊಂಡಿದ್ದಾರೆ ಎಂದು ಹೈಕೋರ್ಟ್ ವಕೀಲ ಅಮೃತೇಶ್ ಗಂಭೀರ ಆರೋಪ ಮಾಡಿದ್ದಾರೆ. ಸೌಜನ್ಯ ಪ್ರಕರಣ ಸಂಬಂಧ ಸುದ್ದಿಗೋಷ್ಠಿ ನಡೆಸಿದ ಅವರು ಸುಪ್ರೀಂ ಕೋರ್ಟ್ ತೀರ್ಪಿಗೆ ಕಾರಣವಾದ ಪ್ರಮುಖ ಅಂಶಗಳ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಜೊತೆಗೆ ಪ್ರಕರಣದ ಮುಂದಿನ ತನಿಖೆ ಮತ್ತು ನ್ಯಾಯದ ನಿರೀಕ್ಷೆ ಬಗ್ಗೆ ಚರ್ಚೆ ನಡೆಸಿದ್ದಾರೆ ಹಾಗೂ ಪ್ರಕರಣದಲ್ಲಿ ಯರ‍್ಯಾರು ಎಷ್ಟು ಹಣ ಪಡೆದುಕೊಂಡರು ಎನ್ನುವ ಆಡಿಯೋ ರಿಲೀಸ್ ಮಾಡಿದ್ದಾರೆ. ಸೌಜನ್ಯ ಪ್ರಕರಣ ಸಂಬಂಧ ಸುದ್ದಿಗೋಷ್ಠಿ ನಡೆಸಿದ ಅವರು ಸುಪ್ರೀಂ ಕೋರ್ಟ್ ತೀರ್ಪಿಗೆ ಕಾರಣವಾದ ಪ್ರಮುಖ ಅಂಶಗಳ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಜೊತೆಗೆ ಪ್ರಕರಣದ ಮುಂದಿನ ತನಿಖೆ ಮತ್ತು ನ್ಯಾಯದ ನಿರೀಕ್ಷೆ ಬಗ್ಗೆ ಚರ್ಚೆ ನಡೆಸಿದ್ದಾರೆ ಹಾಗೂ ಪ್ರಕರಣದಲ್ಲಿ ಯರ‍್ಯಾರು ಎಷ್ಟು ಹಣ ಪಡೆದುಕೊಂಡರು ಎನ್ನುವ ಆಡಿಯೋ ರಿಲೀಸ್ ಮಾಡಿದ್ದಾರೆ.

# ಕರ್ನಾಟಕ ಸಾರಿಗೆ ನಿಗಮಗಳ ನೌಕರರಿಗೆ ಪಿಎಫ್ ಸಂಕಷ್ಟ!

• ಉದಯವಾಹಿನಿ, ಬೆಂಗಳೂರು





ಕರ್ನಾಟಕದ ನಾಲ್ಕು ಸಾರಿಗೆ ನಿಗಮಳು ಆರ್ಥಿಕ ಸಂಕಷ್ಟ ಎದುರಿಸುತ್ತಿವೆ. ಕೆಲ ನಿಗಮಗಳಲ್ಲಿ ಸರಿಯಾಗಿ ಡೀಸೆಲ್ ಪೂರೈಕೆಯಾಗುತ್ತಿಲ್ಲ. ಇನ್ನೊಂದೆಡೆ ಸಾರಿಗೆ ನೌಕರರಿಗೆ ಸರಿಯಾದ ಸಮಯಕ್ಕೆ ವೇತನ ಸಿಗುತ್ತಿಲ್ಲ. ಇದರ ಮಧ್ಯೆ ಸಾರಿಗೆ ನೌಕರರಿಗೆ ಮತ್ತೊಂದು ಬಿಗ್ ಶಾಕ್ ಎದುರಾಗಿದೆ. ಡ್ರೈವರ್, ಕಂಡಕ್ಟರ್, ಸೇರಿದಂತೆ 1 ಲಕ್ಷದ 10 ಸಾವಿರ ಸಾರಿಗೆ ನೌಕರರ ಪಿಎಫ್ ಹಣವನ್ನು ಗುಳಂ ಆಗಿರುವ ಆರೋಪ ಕೇಳಿಬಂದಿದೆ. ನಿಗಮಗಳು ತನ್ನ ಸ್ವಂತ ಖರ್ಚಿಗೆ ಡಿಸೇಲ್, ನೌಕರರ ಸಂಬಳಕ್ಕೆ ಬಳಕೆ ಮಾಡಿಕೊಂಡಿದ್ಯಂತೆ. ಇನ್ನೊಂದೆಡೆ ನೌಕರರ ಸಂಬಳದಲ್ಲಿ ಕಟ್ ಮಾಡುವ 12% ರಷ್ಟು ಪಿಎಫ್ ಹಣವನ್ನು ಪಿಎಫ್ ಟ್ರಸ್ಟ್ ಪಾವತಿ ಮಾಡಿಲ್ಲ. ಹೀಗಾಗಿ ನೌಕರರ ಪಿಎಫ್ ಹಣ ನಿಗಮಕ್ಕೆ ಬಳಕೆ ಆಗಿದೆಯಾ ಅಥವಾ ಅಧಿಕಾರಿಗಳ ಜೇಬು ಸೇರಿದೆಯಾ ಎನ್ನುವ ಅನುಮಾನಗಳು ವ್ಯಕ್ತವಾಗಿವೆ. ನೌಕರರ ಸಂಬಳದಲ್ಲಿ ಕಟ್ ಮಾಡುವ 12% ರಷ್ಟು ಬರೋಬ್ಬರಿ ಎರಡೂವರೆ ಸಾವಿರ ಕೋಟಿ ರೂ. ಪಾವತಿ ಪಿಎಫ್ ಹಣವನ್ನು ಪಿಎಫ್ ಟ್ರಸ್ಟ್ ಪಾವತಿ ಮಾಡಿಲ್ಲ. ಸಾವಿರಾರು ಕೋಟಿ ರುಪಾಯಿ ಪಿಎಫ್ ಬಾಕಿ ಹಣ ಬಾಕಿ ಉಳಿಸಿಕೊಂಡಿರುವ ಹಿನ್ನೆಲೆ ಕಳೆದ ಎರಡು ತಿಂಗಳಿನಿಂದ ಸಾರಿಗೆ ನೌಕರರಿಗೆ ಪಿಎಫ್ ಹಣವೇ ಕ್ಲೈಮ್ ಆಗಿಲ್ಲ. ಮಕ್ಕಳ ಸ್ಕೂಲ್ ಫೀಸ್ ಕಟ್ಟಲು, ಅನಾರೋಗ್ಯದ ಸಮಸ್ಯೆ, ಮಕ್ಕಳ ಮದುವೆ ಹೀಗೆ ಸಾಕಷ್ಟು ಸಮಸ್ಯೆಗಳ ಹಿನ್ನೆಲೆ ಪಿಎಫ್ ಅಪ್ಲೈ ಮಾಡುತ್ತಿದ್ದಾರೆ. ಆದರೆ ಆಗಸ್ಟ್ ನಿಂದ ನೌಕರರ ಹಣ ಬರುತ್ತಿಲ್ಲ. ಹೀಗಾಗಿ ನೌಕರರ ಪಿಎಫ್ ಹಣ ಎಲ್ಲೋಯ್ತು ಎನ್ನುವುದೇ ಪ್ರಶ್ನೆಗಯಾಗಿದೆ. ಈಗಾಗಲೇ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸೇರಿದಂತೆ ನಾಲ್ಕು ನಿಗಮಕ್ಕೆ ನೌಕರರ ಪಿಎಫ್ ಹಣವನ್ನು ಪಾವತಿ ಮಾಡುವಂತೆ ಸೂಚನೆ ನೀಡಲಾಗಿದೆ. ಆದರೆ ಸಾರಿಗೆ ನಿಗಮದಲ್ಲಿ ಹಣವಿಲ್ಲದೆ 1.10 ಲಕ್ಷ ನೌಕರರ ಎರಡೂವರೆ ಸಾವಿರ ಕೋಟಿ ರೂ. ಪಾವತಿ ಮಾಡಿಲ್ಲ. ಇದರಿಂದ ಸಾರಿಗೆ ನೌಕರರ ಮುಖಂಡರು ಆಕ್ರೋಶಗೊಂಡಿದ್ದ, ಕೂಡಲೇ ನೌಕರರ ಹಣ ಪಾವತಿ ಮಾಡಿ ಎಂದು ಆಗ್ರಹಿಸಿದ್ದಾರೆ.

# ಸ್ಟ್ರಾಂಗ್ ಲೀಡರ್‌ಗಳ ಸ್ಟಿಂಗ್ ವಿವಾದ



● ಮಾಜಿ ಸಿಎಂರನ್ನು ಸ್ಟೇ ತರುವ ಸ್ಥಿತಿಗೆ ದೂಡಿದ್ದಾರೆ ● ಸ್ಟಿಂಗ್ ಆಪರೇಷನ್ ಬಗ್ಗೆ ಸಿಬಿಐ ತನಿಖೆ ಆಗಬೇಕು: ಹೆಚ್.ಡಿ. ಕುಮಾರಸ್ವಾಮಿ ● ಸಿಬಿಐ ತನಿಖೆಗಾಗಿ ಕೇಂದ್ರ ಗೃಹ ಸಚಿವರ ಭೇಟಿ ● ಸಿಎಂರನ್ನು ಕುರ್ಚಿಯಿಂದ ಎಳೆದು ಹಾಕುತ್ತಾರೆ ● ಸ್ಟಿಂಗ್ ಆಪರೇಷನ್ ಆರೋಪಕ್ಕೆ ಡಿಕೆಶಿ ಶಾಕಿಂಗ್ ರಿಯಾಕ್ಷನ್! ● ಏನ್ ಏನ್ ದಾಖಲೆ ಇದೆ ತರಿಸುತ್ತೇನೆ' ಎಂದ ಸಿಎಂ

### ಬಲಾಢ್ಯರ ಬಡಿದಾಟ

•ಉದಯವಾಹಿನಿ, ಬೆಂಗಳೂರು

ಮಾಜಿ ಸಿಎಂ ಅವರು ಸ್ಟೇ ತರುವುದು ಬೇಡ, ಧೈರ್ಯವಾಗಿ ಸ್ಟಿಂಗ್ ಆಪರೇಷನ್ ಬಗ್ಗೆ ಧ್ವನಿ ಎತ್ತಲಿ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು. ಜೆ.ಪಿ.ಭವನದಲ್ಲಿ ಮಂಗಳವಾರ ಮಾಧ್ಯಮಗೋಷ್ಠಿ ನಡೆಸಿದ ಅವರು, ರಾಜ್ಯ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ನಾಡಿನ ಕಬ್ಬು ಬೆಳೆಗಾರರು ದೆಹಲಿಗೆ ಹೋಗಿದ್ದಾರೆ. ಕೇಂದ್ರದ ಸಚಿವರ ಜೊತೆ ಸಭೆ ನಡೆಸಿದ್ದಾರೆ.

ಬರದ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ ಇದ್ದರೂ ಪ್ರಮುಖವಾಗಿ ಮುನ್ನಲೆಗೆ ಬಂದಿದ್ದು ಸ್ಟಿಂಗ್ ಆಪರೇಷನ್. ಅದು ಎಲ್ಲವನ್ನೂ ಓವರ್ ಟೇಕ್ ಮಾಡಿ ಜನರ ಮುಂದೆ ಬಂದು ನಿಂತಿದೆ ಎಂದು ತಿಳಿಸಿದರು. ಬೆಳಗ್ಗೆ ಬಂದ ಮಾಹಿತಿ ಪ್ರಕಾರ ನೈಜ ಹೋರಾಟಗಾರರ ವೇದಿಕೆಯು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ, ಕರ್ನಾಟಕ ರಾಜ್ಯ ಸೇವಾ ಪ್ರಾಧಿಕಾರಕ್ಕೆ ಅಕ್ಟೋಬರ್ 9ರಂದು ದೂರು ನೀಡಿದೆ. ಈ ದೂರಿನಲ್ಲಿ ಸ್ಟಿಂಗ್ ಆಪರೇಷನ್ ಘಟನೆ ಬಗ್ಗೆ ತಿಳಿಸಿದ್ದಾರೆ. ಈ ಸಂಬಂಧ ಮಾಜಿ ಸಿಎಂ ತಡೆಯಾಜ್ಞೆಗೆ ಅರ್ಜಿ ಹಾಕಿದ್ದಾರೆ ಎಂಬ ಮಾಹಿತಿ ಬಂದಿದೆ ಎಂದು ಹೇಳಿದರು. ರಾಜ್ಯದಲ್ಲಿ ನಮ್ಮ ಕುಟುಂಬದ ಸದಸ್ಯ ಪ್ರಜ್ವಲ್ ವಿರುದ್ಧ ಸಂಸತ್ ಚುನಾವಣೆಗೂ ಮುನ್ನ ಹಾಸನ, ಮಂಡ್ಯದಲ್ಲಿ ಪೆನ್ ಡ್ರೈವ್ ಹಂಚಲಾಗಿತ್ತು. ರಾಹುಲ್ ಗಾಂಧಿ ಸುಮಾರು 400ಕ್ಕೂ ಹೆಚ್ಚು ಹೆಣ್ಣುಮಕ್ಕಳ ಮೇಲೆ ಪ್ರಜ್ವಲ್ ದೌರ್ಜನ್ಯ ಮಾಡಿದ್ದಾನೆ ಎಂದು ಪ್ರಚಾರ ಮಾಡಿದ್ದರು. ಅಂದು ಪೆನ್ ಡ್ರೈವ್ ಮೂಲಕ ಅನೇಕ ಹೆಣ್ಣುಮಕ್ಕಳ ಮರ್ಯಾದೆ ತೆಗೆದಂಥ ಪುಣ್ಯಾತ್ಮ. ಆ ಹೆಣ್ಣುಮಕ್ಕಳ ಮುಖ ಬ್ಲರ್ ಮಾಡಬಹುದಿತ್ತಲ್ಲ. ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈಗ ಮಾಜಿ ಸಿಎಂ ಸ್ಟೇ ತರಲು ಹೋಗಿದ್ದಾರೆ. ಅವರಂತೆ ನಾವು ಎಲ್ಲವನ್ನೂ ಮುಚ್ಚಿ ಹಾಕಲು ನ್ಯಾಯಾಲಯದಲ್ಲಿ ಸ್ಟೇ ತರಲು ಹೋಗಿಲ್ಲ. ಡಿಕೆಶಿಯವರೇ ಸ್ಟಿಂಗ್ ಆಪರೇಷನ್‌ಗೆ ನೀರೆರೆದು ಬೆಳೆಸಿದ್ದೀರಿ. ಇಂದು ಅದು ಹೆಮ್ಮರವಾಗಿ ಬೆಳೆದುಕೊಂಡಿದೆ. ಅದರ ಫಲ ನೀವು ಉಣ್ಣಲೇಬೇಕು ಎಂದು ಹೆಚ್‌ಡಿಕೆ ಎಚ್ಚರಿಸಿದರು. 17 ಜನರನ್ನು ಬಾಂಬೆಗೆ ಕಳಿಸಿದ್ರಲ್ಲಾ ಅವರು ಯಾರೆಲ್ಲಾ ಸ್ಟೇ ತಗೊಂಡರು. ಮಾಜಿ ಸಿಎಂ ಮೇಲೆ ಏನೋ ಮಾಡಲು ಹೋಗಿ ಅವರೂ ಸ್ಟೇ ತಗೊಂಡರು. ರಮೇಶ್ ಜಾರಕಿಹೊಳಿ ಸಚಿವರಾಗಿದ್ದಾಗ ಅವರ ಮೇಲೆ ಏನು ಮಾಡಿದ್ದೀರಿ?. ರಾಜಣ್ಣ ಅವರು ವಿಧಾನಸಭೆಯಲ್ಲೇ 48 ಜನರ ಸ್ಟಿಂಗ್ ಆಗಿದೆ ಅಂದರು. ಕೊನೆಗೂ ಅವರ ಬಾಯನ್ನೂ ಮುಚ್ಚಿಸಿದರು. ರಾಜ್ಯದ ಮಾಜಿ ಸಿಎಂ ಅವರೂ ಸ್ಟೇ ತರುವ ಪರಿಸ್ಥಿತಿಗೆ ದೂಡಿದರಲ್ಲಾ?. ಇದು ನಿಮ್ಮ ಸಾಧನೆನಾ ಎಂದು ಪ್ರಶ್ನಿಸಿದರು. ಮಾಜಿ ಪ್ರದಾನಿ ಮನೆಗೆ ನುಗ್ಗಿ ರೇವಣ್ಣರ ಕುತ್ತಿಗೆಗೆ ಕೈ ಹಾಕಿ ಕರೆದುಕೊಂಡು ಹೋಗಿರುವ ದೃಶ್ಯ ತೋರಿಸಿದಿರಲ್ಲ. ನೀವು ಮಾಡಿದ ಪಾಪದ ಫಲ ಅನುಭವಿಸುತ್ತೀರಿ. ಅಂದು ಆ ಪೆನ್ ಡ್ರೈವ್ ಹಂಚಿದರಲ್ಲಾ, ಈಗಿನ ಹಾಸನದ ಎಂಪಿ ಬಂದು ಯಾವ ಮನೆಯಲ್ಲಿ ಕೂತು ಸಿದ್ಧ ಮಾಡಿದ್ದರು. ಎಲ್ಲವೂ ನನಗೆ ಗೊತ್ತು ಎಂದು ಆಕ್ರೋಶ ಹೊರಹಾಕಿದರು. ಈ ಸರ್ಕಾರಕ್ಕೆ ಅಲ್ಪ ಸ್ವಲ್ಪ ಮಾನಮರ್ಯಾದೆ ಇದೆಯಾ?. ಇನ್ನೂ ತನಿಖೆಗೆ ಏಕೆ ಕೊಟ್ಟಿಲ್ಲ. ನಿಮ್ಮಿಂದಲೇ ಪ್ರಾರಂಭ ಆಗಿದೆ. ನಿಮ್ಮಿಂದಲೇ ಅಂತ್ಯ ಆಗಬೇಕು. ಬಿಡದಿ ಹೋರಾಟ ನಿಮಗೆ ಮುಳುವಾಯಿತು. ನೈಸ್ ಹೋರಾಟ ಆರಂಭಿಸಿದೆವು. ಆಗ ಪ್ರಜ್ವಲ್ ರೇವಣ್ಣ ಪರಪ್ಪನ ಅಗ್ರಹಾರದಲ್ಲಿ ಫೋನ್ ಇಟ್ಟುಕೊಂಡಿದ್ದಾರೆ ಅಂತ ಬಂತು. ಒಂದು ವರ್ಷದ ಹಿಂದೆ ಆಗಿದ್ದರೆ ಈವರೆಗೆ ಏನು ಮಾಡುತ್ತಿದ್ದಿರಿ?. ಈಗ ಸ್ಟಿಂಗ್ ಆಪರೇಷನ್ ಶುರುವಾಯಿತು. ಪ್ರಜ್ವಲ್ ರೇವಣ್ಣ ಹಿಂಡಲಗಾ ಜೈಲು ಅಂತ ಶುರುವಾಯಿತು. ಪ್ರಜ್ವಲ್ ರೇವಣ್ಣರನ್ನು ಶಿರಾವರೆಗೆ ಕರೆದುಕೊಂಡು ಹೋಗಿ ವಾಪಸ್ ಕರೆತಂದರು. ಅವರನ್ನು ಏಕೆ ವಾಪಸ್ ಕರೆ ತಂದಿದ್ದಿರಿ?. ಯಾರು ಹಿಂಡಲಗಾ ಜೈಲಿಗೆ ಕರೆದುಕೊಂಡು ಹೋಗಲು ಹೇಳಿದರು. ಪ್ರಭಾವಿ ರಾಜಕಾರಣಿಯ ಮಧ್ಯಸ್ಥಿಕೆಯಲ್ಲಿ ಪ್ರಜ್ವಲ್‌ರನ್ನು ಶಿರಾದಿಂದ ವಾಪಸ್ ಕರೆತರಲಾಯಿತು ಎಂಬ ಸುದ್ದಿ ಬಂದಿದೆ ಎಂದು ಕುಮಾರಸ್ವಾಮಿ ತಿಳಿಸಿದರು. ನಮ್ಮ ತಾಯಿಯನ್ನೂ ಬಿಟ್ಟಿಲ್ಲ ಇವರು. ಅವರ ಬಗ್ಗೆನೂ ಸರಣಿ ಸ್ಟೋರಿ ಮಾಡಿದಿರಿ. ನಮ್ಮ ರಾಜ್ಯಕ್ಕೆ ಇಂಥ ಅವಸ್ಥೆ ಬರಬಾರದಿತ್ತು. ಎಂಟು ವರ್ಷ ಸಿಎಂ ಆಗಿದ್ದವರು, ಅಹಿಂದ ನಾಯಕರು. ಅವರನ್ನೇ ಕೋರ್ಟ್‌ನಲ್ಲಿ ಸ್ಟೇ ತರುವಂತೆ ಮಾಡಿದ ಕೀರ್ತಿ ಈ ಸರ್ಕಾರಕ್ಕೆ ಸಲ್ಲಬೇಕಲ್ಲವೇ. ರಾಜ್ಯದ ಸಿಎಂಗೆ ಸಲ್ಲಬೇಕಲ್ಲವೇ ಎಂದು ಪ್ರಶ್ನಿಸಿದರು.

### ತಮ್ಮ ಸಚಿವರ ಕುರಿತು ಸಿಎಂ ಮಾಹಿತಿ ಪಡೆಯುತ್ತಿದ್ದಾರೆ

ಸಂಪುಟ ಸಭೆಯಲ್ಲಿ ಸ್ಟಿಂಗ್ ಆಪರೇಷನ್ ಬಗ್ಗೆ ಚರ್ಚೆ ಆಗಿದ್ದ ಬಗ್ಗೆ ನಾನು ಮಾತನಾಡಿದ್ದೆ. ಇತ್ತೀಚೆಗೆ ನನಗೆ ಸಿಕ್ಕಿರುವ ಮಾಹಿತಿ ಪ್ರಕಾರ ಡಿ ಕೆ ಶಿವಕುಮಾರ್ ಸಿಎಂ ಆದ ಮೇಲೆ ಅತ್ಯಾಧುನಿಕ ತಾಂತ್ರಿಕ ಉಪಕರಣಗಳನ್ನು ತರಿಸಿಕೊಂಡು ತಮ್ಮ ಸದಾಶಿವನಗರ ನಿವಾಸದಲ್ಲಿ 4 ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ಇಟ್ಟುಕೊಂಡು ತಮ್ಮ ಸಚಿವರ ಕುರಿತು ಸಿಎಂ ಮಾಹಿತಿ ಪಡೆಯುತ್ತಿದ್ದಾರೆ. ಈ ವಿಚಾರವನ್ನು ಕೇಳಿ ನನಗೆ ಆಶ್ಚರ್ಯ ಆಯ್ತು ಎಂದರು. ಪ್ರಜ್ವಲ್ ರೇವಣ್ಣ ಬಗ್ಗೆ ಹರಿದಾಡಿದ ವಿಡಿಯೊ ಎಐ ಎಂದು ನಾವು ಹೇಳಿಲ್ಲ, ಇಂದು ಮಾಜಿ ಸಿಎಂ ಸಿದ್ದರಾಮಯ್ಯ ವಿಡಿಯೊಗೆ ಸ್ಟೇ ತರಲು ನ್ಯಾಯಾಲಯ ಮೊರೆ ಹೋಗಿದ್ದಾರೆ, ಆದರೆ ಜನತೆಗೆ ನ್ಯಾಯ ದೊರಕಿಸಬೇಕೆಂದು ನಾವು ತಡೆ ತರಲಿಲ್ಲ ಎಂದರು.

### ದುಡ್ಡಲ್ಲಿ ಎಲ್ಲರನ್ನೂ ಕೊಂಡುಕೊಳ್ಳಲು ಆಗಲ್ಲ

ಇದರ ಹಿಂದೆ ಯಾರೆಲ್ಲಾ ಇದ್ದಾರೆ ಎಂದು ನಿಮಗೆ ಗೊತ್ತು. ಅದರ ಕಡತವನ್ನು ಸಂಪುಟ ಸಭೆಗೆ ತೆಗೆದುಕೊಂಡು ಹೋಗಿದ್ದಿರಿ. ಇದನ್ನು ಸಂಪೂರ್ಣವಾಗಿ ನಿಲ್ಲಿಸುವ ಸಂಬಂಧ ಏಕೆ ಇನ್ನೂ ನಿಮ್ಮಲ್ಲಿ ಸ್ಪಷ್ಟತೆ ಬಂದಿಲ್ಲ?. ಕಾಲ ನಿರ್ಧಾರ ಮಾಡಬೇಕಂತೆ ಇವರಿಗೆ. ಇನ್ನು ಯಾರನ್ನೆಲ್ಲಾ ಮುಗಿಸಬೇಕು ಅಂದುಕೊಂಡಿದ್ದೀರಿ. ದುಡ್ಡಲ್ಲಿ ಎಲ್ಲರನ್ನೂ ಕೊಂಡುಕೊಳ್ಳಲು ಸಾಧ್ಯವಿಲ್ಲ. ದುಡ್ಡಲ್ಲಿ ಜಯಿಸ್ತೀನಿ ಅಂತ ಅಂದುಕೊಂಡಿರಬೇಕು ನೀವು. ಅದು ಸಾಧ್ಯ ಆಗಲ್ಲ. ಇದಕ್ಕೆ ಅಂತಿಮ ತೆರೆ ಎಳೆಯಲೇಬೇಕು ಎಂದು ಆಗ್ರಹಿಸಿದರು.

ಇದನ್ನು ಸಿಬಿಐಗೆ ಕೊಡುವ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು. ಸತ್ಯಾಂಶ ಹೊರಗೆ ಬರಬೇಕು. ಯಾರ ಯಾರ ಕುಟುಂಬ ಹಾಳು ಮಾಡಲು ಹೊರಟಿದ್ದೀರಿ?. ಕೇಂದ್ರ ಗೃಹ ಸಚಿವರನ್ನೂ ಭೇಟಿಯಾಗಿ ಸಿಬಿಐ ತನಿಖೆ ನಡೆಸಲು ಮನವಿ ಮಾಡುತ್ತೇನೆ. ಇದರಲ್ಲಿ ದುರುದ್ದೇಶಪೂರ್ವಕವಾಗಿ ಯಾರನ್ನೂ ಬಲಿಪಶು ಮಾಡವಂತದ್ದಲ್ಲ ಎಂದರು.

### ಸ್ಟಿಂಗ್ ಆಪರೇಷನ್' ವಿಪಕ್ಷಗಳ ಷಡ್ಯಂತ್ರ ಶೀಘ್ರ ಬಯಲು

ತಮ್ಮ ವಿರುದ್ಧ ನಡೆದಿದೆ ಎನ್ನಲಾದ 'ಸ್ಟಿಂಗ್ ಆಪರೇಷನ್ ಬಗ್ಗೆ ಮಾಜಿ ಸಿಎಂ ಸಿದ್ದರಾಮಯ್ಯ ಅವರೇ ಪ್ರತಿಕ್ರಿಯಿಸಿದ್ದು, ಇಂದಲ್ಲ ವಿಪಕ್ಷಗಳ ಷಡ್ಯಂತ್ರ ಬಯಲಾಗಲಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ತಿಳಿಸಿದ್ದಾರೆ. ಮಂಗಳವಾರ ಅರಸು ಭವನದಲ್ಲಿ ತಮ್ಮನ್ನು ಭೇಟಿಯಾದ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ರಾಜ್ಯ ಸರಕಾರದ ಅಭಿವೃದ್ಧಿ ಕಾರ್ಯಗಳನ್ನು ಸಹಿಸಲಾಗದೆ ಪ್ರತಿಪಕ್ಷದ ನಾಯಕರು ಹತಾಶೆ ಮತ್ತು ಅಸೂಯೆಯಿಂದ ಸರಕಾರಕ್ಕೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದ್ದಾರೆ ಎಂದು ದೂರಿದರು. ರಾಜಕೀಯದಲ್ಲಿ ವಿರೋಧಿಗಳು ಇರುವುದು ಸಹಜ.



ಆದರೆ ಎದುರಾಳಿಗಳು ಉತ್ತಮ ಕೆಲಸ ಮಾಡಿದಾಗ ಅದನ್ನು ಪ್ರಶಂಸಿಸುವ ಮನೋಭಾವ ಇರಬೇಕು. ತಾವು ಅಧಿಕಾರದಲ್ಲಿದ್ದಾಗ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಗದವರು, ಈಗ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ತಂಗಡಗಿ ಟೀಕಿಸಿದರು.

ತಮಗೆ ಯಾವುದೇ ಸ್ಟಿಂಗ್ ಆಪರೇಷನ್ ಬಗ್ಗೆ ವೈಯಕ್ತಿಕ ಅನುಭವವಾಗಿಲ್ಲ. ಮಾಧ್ಯಮದ ಸ್ನೇಹಿತರು ಈ ಕುರಿತು ಹೇಳುತ್ತಿರುವ ವಿಚಾರಗಳು ತಮಗೆ ಹೊಸ ಅನುಭವವಾಗಿವೆ. ತಾವು ಯಾರನ್ನೂ ಅನುಮಾನದಿಂದ ನೋಡುವುದಿಲ್ಲ. ಮಾಧ್ಯಮದ ಸ್ನೇಹಿತರು ಯಾವಾಗ ಬಂದರೂ ನಿರಾಳವಾಗಿ ಮಾತನಾಡಲು ಸಿದ್ದರಿದ್ದೇನೆ ಎಂದು ಅವರು ಹೇಳಿದರು.

### ಸಿಎಂರಿಂದ ನಾಲ್ವರು ನಿವೃತ್ತ ಪೊಲೀಸ್ ಅಧಿಕಾರಿಗಳ ಟೀಂ ನೇಮಕ

ಈಗ ಲೇಟೆಸ್ಟ್ ಸುದ್ದಿ ಏನೆಂದರೆ ಇತ್ತೀಚೆಗೆ ಸಿಎಂ ಆದ ಬಳಿಕ ಅವರು ಸದಾಶಿವನಗರದಲ್ಲಿ ನಾಲ್ವರು ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ನೇಮಕ ಮಾಡಿದ್ದಾರೆ. ನಾನು ಮಾಧ್ಯಮದ ಮಿತ್ರರನ್ನು ನೇಮಕ ಮಾಡಿದ್ದಾರೆ ಅಂದುಕೊಂಡಿದ್ದೆ. ಈಗ ಬಂದಿರುವ ಮಾಹಿತಿಯಂತೆ ಸದಾಶಿವನಗರದಲ್ಲಿ ಆಧುನಿಕ ಸಲಕರಣೆಗಳನ್ನು ತಂದು ನಾಲ್ಕು ಜನ ನಿವೃತ್ತ ಪೊಲೀಸ್ ಅಧಿಕಾರಿಗಳನ್ನು ಇಟ್ಟುಕೊಂಡು ಅವರ ಸಚಿವರನ್ನೂ ಒಳಗೊಂಡಂತೆ ಅವರು ಏನೆಲ್ಲಾ ಚರ್ಚೆ ಮಾಡುತ್ತಾರೆ ಎಂಬ ಮಾಹಿತಿ ಕಲೆ ಹಾಕುತ್ತಾರೆ ಎಂಬ ಮಾಹಿತಿ ತಿಳಿದು ನನಗೆ ಅಚ್ಚರಿಯಾಯಿತು.

ಈ ಪರಿಸ್ಥಿತಿ ಬಂದಿದೆ ಈಗ. ಪೊಲೀಸ್ ಇಲಾಖೆಯಲ್ಲೇ ಚರ್ಚೆ ಆಗ್ತಾ ಇದೆ. ಎಲ್ಲಿಗೆ ಹೋಗ್ತಾ ಇದೆ ರಾಜ್ಯದ ಸ್ಥಿತಿ, ಹೀಗಾದರೆ ಎಂದು ಇದೇ ವೇಳೆ ಕೇಂದ್ರ ಸಚಿವರು ಕೇಳಿದ್ರು. ಯಾರೆದ್ದೆಲ್ಲಾ ಟ್ಯಾಪ್ ಮಾಡಲು ಹೊರಟಿದ್ದಾರೆ ಅಂತ ಗೊತ್ತಿಲ್ಲ. ಅವರನ್ನೇ ನೀವು ಕೇಳಿ. ಅದನ್ನು ಮಾಡಲು ಪೊಲೀಸ್ ಅಧಿಕಾರಿಗಳೇ ಬೇಕಲ್ಲ. ಅದಕ್ಕೆ ಪ್ರತ್ಯೇಕ ವಿಂಗ್ ಇಟ್ಟಿದ್ದಾರೆ. ಇದರಿಂದ ಸರ್ಕಾರ ನಡೆಸಬೇಕಾ?. ಇದರಿಂದ ಅಧಿಕಾರ ನಡೆಸಲು ಆಗುತ್ತಾ?. ಸಚಿವರು ಏನೆಲ್ಲಾ ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳಲು ನಾಲ್ಕು ಜನರನ್ನು ಇಟ್ಟುಕೊಂಡಿದ್ದಾರೆ ಎಂಬ ಮಾಹಿತಿ ಇದೆ. ಅದಕ್ಕಾಗಿ ತನಿಖೆ ಆಗಬೇಕು?. ಪಾರದರ್ಶಕವಾಗಿ ತನಿಖೆಯಾಗಬೇಕು.

### ಆ ಸಸಿ ಈಗ ಹೆಮ್ಮರವಾಗಿದೆ



ಸಿಎಂ ಆದ ಬಳಿಕ ಇವರು ಸದಾಶಿವನಗರದಲ್ಲಿ ನಾಲ್ಕು ನಿವೃತ್ತ ಪೊಲೀಸರನ್ನ ನೇಮಕ ಮಾಡಿಕೊಂಡಿದ್ದಾರೆ. ಕೇವಲ ಮಾಧ್ಯಮದವರನ್ನ ಮಾತ್ರ ಮಾಹಿತಿ ಪಡೆಯಲು ನೇಮಕ ಮಾಡ್ಕೊಂಡಿದ್ದಾರೆ ಎಂದುಕೊಂಡಿದ್ದೆ. ಹೊಸ ತಂತ್ರಜ್ಞಾನದ ಮೂಲಕ ನಾಲ್ಕು ಅಧಿಕಾರಿಗಳನ್ನ ಇಟ್ಕೊಂಡು, ಅವರ ಸಂಪುಟ ಸಹೋದ್ಯೋಗಿಗಳು ಏನ್ ಚರ್ಚೆ ಮಾಡ್ತಾರೆ ಎನ್ನೋದನ್ನು ಪತ್ತೆ ಮಾಡುವ ಕೆಲಸ ನಡಿತಿದೆ. ಪೊಲೀಸ್ ಇಲಾಖೆಯವರೆ ಇದನ್ನ ಮಾತಾಡ್ತಾ ಇದ್ದಾರೆ. ಶಿವಕುಮಾರ್ ಅವರೇ ಸ್ಟಿಂಗ್ ಆಫರೇಷನ್‌ಗೆ ನೀರೆರೆದು ಬೆಳೆಸಿದ್ರಿ, ಆ ಸಸಿ ಈಗ ಹೆಮ್ಮರವಾಗಿದೆ ಎಂದು ಗಂಭೀರ ಆರೋಪ ಮಾಡಿದರು.

### ಪ್ರಜ್ವಲ್ ಕೇಸ್ ಉಲ್ಲೇಖಿಸಿದ ಹೆಚ್ ಡಿಕೆ

ನಮ್ಮ ಕುಟುಂಬದ ಒಬ್ಬ ಸದಸ್ಯ ಪ್ರಜ್ವಲ್ ರೇವಣ್ಣ ಮೇಲೆ ಕಳೆದ ಬಾರಿ ಲೋಕಸಭೆ ಎಲೆಕ್ಷನ್‌ಗೆ 2 ದಿನ ಇರಬೇಕಾದರೆ ವಿಡಿಯೋಗಳನ್ನು ಪೆನ್‌ಡ್ರೈವ್ ಮಾಡಿ ಹಂಚುವ ಕೆಲಸ ಮಾಡಿದರು. 5 ವರ್ಷದ ಹಿಂದೆ ಕಂಪ್ಲೇಂಟ್ ಕೊಟ್ಟ ಮಹಿಳೆಯನ್ನು ಕರೆಸಿ ಇಲ್ಲಿಯ ಕೇಂದ್ರ ಕಚೇರಿಯಲ್ಲಿ ದೂರು ಕೊಡಿಸಿದರು. ರಾಹುಲ್ ಗಾಂಧಿ ಇದರ ಬಗ್ಗೆ ದೇಶ-ವಿದೇಶಗಳಲ್ಲಿ ಪ್ರಸ್ತಾಪ ಮಾಡಿ ದೇವೇಗೌಡರ ಮರ್ಯಾದೆ, ವರ್ಚಸ್ಸು ಕಳೆಯೋಕೆ ಹೊರಟರು. ಹಾಸನದ ಮತ್ತೊಬ್ಬರು, ದೇವರಾಜೇಗೌಡ ಮತ್ತು ಮಂಡ್ಯದ ಮಾಜಿ ಎಂಪಿ ಶಿವರಾಮೇಗೌಡರು ಹಾಗೂ ಇನ್ನೊಬ್ಬರು ಮಾತಾಡುವ ಆಡಿಯೋ ಬಂತು.ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ನಿರ್ನಾಮ ಮಾಡಬೇಕೆಂದು ಅದರಲ್ಲಿ ಕೇಳುತ್ತದೆ, ಡಿಕೆ ಶಿವಕುಮಾರ್ ಮಾತಾಡ್ತಿದ್ದಾರೆ ಎಂದು ದೇವರಾಜೇಗೌಡಗೆ ಫೋನ್ ಕೊಡ್ತಾರೆ. ಆಗ ಈ ಹೆಣ್ಣುಮಗಳನ್ನ ಹುಡುಕೋಕೆ ಸುಸ್ತಾಗಿದ್ದೀನಿ ಇರಪ್ಪ ಎಂದು ಡಿಕೆಶಿ ಹೇಳ್ತಿರುವ ವಿಡಿಯೊ ಮಾಧ್ಯಮಗಳ ಮುಂದೆ ಇಟ್ಟಿದ್ದೇವೆ.

# ಮೀಸಲಾತಿ ಹೆಚ್ಚಳ ಕುರಿತ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂಗೆ ಮೇಲ್ಮನವಿ : ಡಿಸಿಎಂ ಪರಮೇಶ್ವರ್

## ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರವೂ ಅನೇಕ ನೇಮಕಾತಿ ಪ್ರಕ್ರಿಯೆಗಳಲ್ಲಿ ಈ ಮೀಸಲಾತಿ ಪ್ರಮಾಣವನ್ನು ಅನುಸರಿಸಿದೆ.

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಳಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ನೀಡಿರುವ ತೀರ್ಪಿನ ಕುರಿತು ಸಚಿವ ಸಂಪುಟದಲ್ಲಿ ಸಮಗ್ರವಾಗಿ ಚರ್ಚಿಸಿ, ಸುಪ್ರೀಂ ಕೋರ್ಟ್‌ಗೆ ಮೇಲನವಿ ಸಲ್ಲಿಸುವುದು ಸೇರಿದಂತೆ ಮುಂದಿನ ಕಾನೂನಾತ್ಮಕ ಕ್ರಮಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ತಿಳಿಸಿದರು. ತಮ್ಮ ನಿವಾಸದ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸರ್ಕಾರವು ಮೀಸಲಾತಿಯ ಶೇ.50ರ ಮಿತಿಯನ್ನು ಮೀರಿ, ಒಟ್ಟು ಮೀಸಲಾತಿಯನ್ನು ಶೇ.56ಕ್ಕೆ ಹೆಚ್ಚಿಸುವ ತೀರ್ಮಾನ ಕೈಗೊಂಡಿತ್ತು. ಪರಿಶಿಷ್ಟ ಜಾತಿಯ ಮೀಸಲಾತಿಯನ್ನು ಶೇ.15ರಿಂದ ಶೇ.17ಕ್ಕೆ ಹಾಗೂ ಪರಿಶಿಷ್ಟ ಪಂಗಡಗಳ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಲಾಗಿತ್ತು ಎಂದು ಹೇಳಿದರು.

ಹಿಂದಿನ ಸರ್ಕಾರವು ಈ ಸಂಬಂಧ ಆದೇಶ ಹೊರಡಿಸಿ ಕ್ರಮಗಳನ್ನು ಕೈಗೊಂಡಿತ್ತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರವೂ ಅನೇಕ ನೇಮಕಾತಿ ಪ್ರಕ್ರಿಯೆಗಳಲ್ಲಿ ಈ ಮೀಸಲಾತಿ ಪ್ರಮಾಣವನ್ನು ಅನುಸರಿಸಿದೆ. ಮೀಸಲಾತಿ ಹೆಚ್ಚಳವನ್ನು ಪ್ರಶ್ನಿಸಿ ವಿವಿಧ ವ್ಯಕ್ತಿಗಳು ನ್ಯಾಯಾಲಯದ ಮೊರೆ ಹೋದ ಸಂದರ್ಭದಲ್ಲಿ ರಾಜ್ಯ ಸರ್ಕಾರವೂ ತನ್ನ ನಿಲುವನ್ನು ಮಂಡಿಸಿ, ಮೀಸಲಾತಿ ಹೆಚ್ಚಳವನ್ನು ಎತ್ತಿಹಿಡಿಯುವಂತೆ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿತ್ತು ಎಂದು ವಿವರಿಸಿದರು.ಮೀಸಲಾತಿ ಹೆಚ್ಚಳವನ್ನು ತಿರಸ್ಕರಿಸಿರುವ



ಹೈಕೋರ್ಟ್ ತೀರ್ಪಿನ ಬಗ್ಗೆ ವೈಯಕ್ತಿಕ ಅಭಿಪ್ರಾಯ ವ್ಯಕ್ತಪಡಿಸಿದ ಡಾ. ಜಿ. ಪರಮೇಶ್ವರ ಅವರು, ಕರ್ನಾಟಕದ ಪರಿಸ್ಥಿತಿಯನ್ನು ಅಸಾಧಾರಣ ಸಂದರ್ಭವೆಂದು ಪರಿಗಣಿಸಿ ವಿಶೇಷ ಪ್ರಕರಣವಾಗಿ ಪರಿಶೀಲಿಸುವ ಅವಕಾಶವಿತ್ತು. ಮೀಸಲಾತಿ ಹೆಚ್ಚಳವನ್ನು ತಿರಸ್ಕರಿಸಿರುವುದು ಸಮಂಜಸವಲ್ಲ ಎಂದು ಹೇಳಿದರು.ತಮಿಳುನಾಡಿನಲ್ಲಿ ಶೇ.69ರಷ್ಟು ಮೀಸಲಾತಿಗೆ ಸಂವಿಧಾನ ತಿದ್ದುಪಡಿಯ ಮೂಲಕ ಅವಕಾಶ ಕಲ್ಪಿಸಲಾಗಿದೆ. ಆ ರಾಜ್ಯಕ್ಕೆ ಅಂತಹ ಅವಕಾಶ ದೊರೆತಿರುವಾಗ, ಕರ್ನಾಟಕದಲ್ಲಿ ಶೇ.50ರ ಮಿತಿಗಿಂತ ಹೆಚ್ಚುವರಿಯಾಗಿ ಶೇ.6ರಷ್ಟು ಮೀಸಲಾತಿ ಕಲ್ಪಿಸಿರುವುದನ್ನೂ ಅದರ ಸಾಮಾಜಿಕ ಹಿನ್ನೆಲೆಯ ಆಧಾರದಲ್ಲಿ ವಿಶೇಷ ಪ್ರಕರಣವಾಗಿ ಪರಿಗಣಿಸಬಹುದಿತ್ತು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ ಎಂದು ತಿಳಿಸಿದರು.

ತೀರ್ಪು ಕುರಿತಂತೆ ಸುಪ್ರೀಂ ಕೋರ್ಟ್‌ಗೆ ಮೇಲನವಿ ಸಲ್ಲಿಸಬೇಕೇ? ಅಥವಾ ಸಂವಿಧಾನದ ಚೌಕಟ್ಟಿನಲ್ಲಿ ಬೇರೆ ಯಾವ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಬಹುದು ಎಂಬುದನ್ನು ಸಚಿವ ಸಂಪುಟದಲ್ಲಿ ಚರ್ಚಿಸಲಾಗುವುದು. ಮುಖ್ಯಮಂತ್ರಿಗಳು ಹಾಗೂ ಸಚಿವ ಸಂಪುಟವು ಎಲ್ಲಾ ಸಾಧಕ-ಬಾಧಕಗಳನ್ನು ಪರಿಗಣಿಸಿ ಮುಂದಿನ ತೀರ್ಮಾನ ಕೈಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದರು. ಈ ಕುರಿತು ಅಡ್ವೊಕೇಟ್ ಜನರಲ್ ಹಾಗೂ ಕಾನೂನು ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಕಾನೂನಿನ ಪ್ರಕಾರ ಯಾವ ಕ್ರಮಗಳು ಸಾಧ್ಯ ಎಂಬುದನ್ನು ಪರಿಶೀಲಿಸಿದ ನಂತರವೇ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದು ಹೇಳಿದರು.

ಈಗ ಒಟ್ಟು ಮೀಸಲಾತಿ ಪ್ರಮಾಣವನ್ನು ಕಡಿತಗೊಳಿಸಬೇಕಾದ ಪರಿಸ್ಥಿತಿ ಎದುರಾದರೆ ಒಳಮೀಸಲಾತಿ ಪ್ರಮಾಣಗಳನ್ನೂ ಅನುಪಾತದ ಆಧಾರದಲ್ಲಿ ಪರಿಷ್ಕರಿಸುವ ಸಾಧ್ಯತೆ ಇದೆ. ಗಣಿತದ ದೃಷ್ಟಿಯಿಂದ ಅಂತಹ ಪರಿಷ್ಕರಣೆ ಮಾಡುವುದು ಕಷ್ಟದ ವಿಚಾರವಲ್ಲ. ಆದರೆ ಇದರಿಂದ ವಿವಿಧ ಸಮುದಾಯಗಳಿಗೆ ದೊರೆಯಬೇಕಾದ ಅವಕಾಶಗಳು ಕಡಿಮೆಯಾಗುವ ಸಾಧ್ಯತೆಯೇ ಹೆಚ್ಚು ಆತಂಕಕಾರಿ ವಿಷಯವಾಗಿದೆ ಎಂದು ಹೇಳಿದರು. ದೆಹಲಿ ಪ್ರತಿಭಟನೆಯಲ್ಲಿ ಭದ್ರತಾ ಸಿಬ್ಬಂದಿಗಳಿಗೆ ರಾಹುಲ್ ಗಾಂಧಿ ಅವರ ರಕ್ಷಣೆ ಆದ್ಯತೆಯಾಗಿರುತ್ತದೆ. ಅಂತಹ ಸಂದರ್ಭದಲ್ಲಿ ತಳ್ಳಾಟವಾಗಿದೆ. ದುರಾದೃಷ್ಟಾವಶಾತ್ ನಮ ಮುಖ್ಯಮಂತ್ರಿಯವರು ಅದರಲ್ಲಿ ಸಿಲುಕಿದ್ದಾರೆ ಎಂದರು. ಚುನಾವಣಾ ಅಯೋಗ ನಿಷ್ಪಕ್ಷಪಾತವಾಗಿ ಕೆಲಸ ನಿರ್ವಹಿಸಿದ್ದರೆ ಈ ಪ್ರತಿಭಟನೆಗಳ ಅಗತ್ಯವೇ ಇರುತ್ತಿರಲಿಲ್ಲ. ಅರ್ಜಿ ನಮೂನೆ-7ರಲ್ಲಿ ನಿಯಮಗಳ ಉಲ್ಲಂಘನೆಯಾಗಿದೆ. ಹೆಸರುಗಳನ್ನು ಡಿಲೀಟ್ ಮಾಡುವಲ್ಲಿಯೂ ಪಾರದರ್ಶಕತೆ ಇಲ್ಲ ಎಂದು ಆಕ್ಷೇಪಿಸಿದರು. ವಿಪತ್ತು ನಿರ್ವಹಣೆ ಕುರಿತು ಮುಂಜಾಗ್ರತಾ ಕ್ರಮವಾಗಿ ರಾಷ್ಟ್ರಮಟ್ಟದ ವಿಚಾರಸಂಕಿರಣ ಆಯೋಜಿಸಿರುವುದಾಗಿ ಅವರು ತಿಳಿಸಿದರು.

### ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶವಿದೆ.

ಮೀಸಲಾತಿ ವಿಚಾರದಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸಿದೆ ಎಂಬ ಬಿಜೆಪಿ ನಾಯಕರ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ನ್ಯಾಯಾಧೀಶರು ಕಾನೂನಿನ ಪ್ರಕಾರ ತಮ ತೀರ್ಮಾನಗಳನ್ನು ಕೈಗೊಳ್ಳುತ್ತಾರೆ. ಸರ್ಕಾರವು ನ್ಯಾಯಾಧೀಶರ ಮೇಲೆ ಪ್ರಭಾವ ಬೀರಿ ನಿರ್ದಿಷ್ಟ ತೀರ್ಪು ನೀಡುವಂತೆ ಹೇಳಲು ಸಾಧ್ಯವಿಲ್ಲ. ನ್ಯಾಯಾಲಯದ ತೀರ್ಪನ್ನು ಕಾನೂನಿನ ಚೌಕಟ್ಟಿನಲ್ಲಿ ಮೇಲಟ್ಟದ ನ್ಯಾಯಾಲಯದಲ್ಲಿ ಪ್ರಶ್ನಿಸಲು ಅವಕಾಶವಿದೆ. ಆ ಅವಕಾಶವನ್ನು ಬಳಸಿಕೊಳ್ಳುವ ಕುರಿತು ಸಚಿವ ಸಂಪುಟ ತೀರ್ಮಾನಿಸಲಿದೆ ಎಂದು ತಿಳಿಸಿದರು. ಹೈಕೋರ್ಟ್ ತೀರ್ಪಿನ ಹಿನ್ನೆಲೆಯಲ್ಲಿ ಈಗಾಗಲೇ ನಡೆದಿರುವ ನೇಮಕಾತಿಗಳ ಪರಿಸ್ಥಿತಿ ಏನಾಗುತ್ತದೆ? ನ್ಯಾಯಾಲಯದ ಆದೇಶವು ಹಿಂದಿನ ದಿನಾಂಕದಿಂದ ಅನ್ವಯವಾಗುತ್ತದೆಯೇ ಅಥವಾ ಮುಂದಿನ ಪ್ರಕ್ರಿಯೆಗಳಿಗೆ ಮಾತ್ರ ಅನ್ವಯವಾಗುತ್ತದೆಯೇ? ಇಂತಹ ಎಲ್ಲಾ ಕಾನೂನಾತಕ ಪ್ರಶ್ನೆಗಳು ಹಾಗೂ ಅವುಗಳಿಂದ ಉಂಟಾಗಬಹುದಾದ ಪರಿಣಾಮಗಳನ್ನು ಸಮಗ್ರವಾಗಿ ಚರ್ಚಿಸಬೇಕಿದೆ ಎಂದು ತಿಳಿಸಿದರು.

ಈ ದಿನದ ದರ | ಪೆಟ್ರೋಲ್: 111.68₹/L | ಡೀಸೆಲ್ : 99.56₹/L | ಬಂಗಾರ: ₹ 14,929 /Gram 24ct ₹ 13,685/Gram 22ct | ಬೆಳ್ಳಿ: ₹235./ Gram

## ಶೇಷಾದ್ರಿಪುರದ ರಾಯರ ಮಠದಲ್ಲಿ ನವರಾತ್ರಿ ಭಜನಾಮೃತ

• ಉದಯವಾಹಿನಿ, ಬೆಂಗಳೂರು

ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ಶೇಷಾದ್ರಿಪುರದ ಪ್ಲಾಟ್ ಫಾರ್ಮ್ ರಸ್ತೆಯಲ್ಲಿರುವ (ಮಂತ್ರಿ ಮಾಲ್ ಮೆಟ್ರೋ ಸ್ಟೇಷನ್ ಹತ್ತಿರ) ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನವರಾತ್ರಿ ಉತ್ಸವದ ಪ್ರಯುಕ್ತ ಭಜನಾಮೃತ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಅಕ್ಟೋಬರ್ 13-ಸುಧೀಂದ್ರನಗರದ ಶ್ರೀ ವಿಜಯ ವಿಠಲ ಭಜನಾ ಮಂಡಳಿ, ಅಕ್ಟೋಬರ್ 14-ರಾಜಾಜಿನಗರದ ಅಂಭೃಣಿ ಭಜನಾ ಮಂಡಳಿ, ಅಕ್ಟೋಬರ್ 15-ಮತ್ತೀಕೆರೆಯ ಶ್ರೀ ಲಕ್ಷ್ಮೀ ವೆಂಕಟೇಶ್ವರ ಭಜನಾ ಮಂಡಳಿ, ಅಕ್ಟೋಬರ್ 16-ವಿಜಯನಗರದ ಶ್ರೀ ವರದೇಂದ್ರ ಭಜನಾ ಮಂಡಳಿ, ಅಕ್ಟೋಬರ್ 17-ಬಸವೇಶ್ವರನಗರ ಶ್ರೀ ಹಯವದನ ಭಜನಾ ಮಂಡಳಿ, ಅಕ್ಟೋಬರ್ 18-ಮಲ್ಲೇಶ್ವರದ ಸ್ತುತಿ ವಾಹಿನಿ ಭಜನಾ ಮಂಡಳಿ, ಅ. 19-ರಾಜಾಜಿನಗರದ ರುಕ್ಮಿಣಿ ಮಹಿಳಾ ಸಂಘ, ಅ. 20-ರಾಜಾಜಿನಗರದ ಜಾಹ್ನವಿ ಭಜನಾ ಮಂಡಳಿ ಮತ್ತು ಅಕ್ಟೋಬರ್ 21ರಂದು ವಿಜಯನಗರದ ಪವಿತ್ರ ಗಾನ ವೃಂದದ ಸದಸ್ಯರುಗಳು ಗಾಯನ ಕಾರ್ಯಕ್ರಮ ನಡೆಸಿಕೊಡುವರು ಎಂದು ಶ್ರೀಮಠದ ಪದಾಧಿಕಾರಿಗಳು ತಿಳಿಸಿದ್ದಾರೆ.

## ಕಾಲೇಜುಗಳ ಮೂಲಕವೇ ಪಶುವೈದ್ಯರ ನೇಮಕಕ್ಕೆ ಸಿದ್ಧತೆ..!

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ರಾಜ್ಯದಲ್ಲಿ ಮಾನವ-ವನ್ಯಜೀವಿ ಸಂಘರ್ಷ ಹಾಗೂ ವನ್ಯಜೀವಿಗಳ ತುರ್ತು ಚಿಕಿತ್ಸಾ ನಿರ್ವಹಣೆಯನ್ನು ಮತ್ತಷ್ಟು ಬಲಪಡಿಸಲು ಕರ್ನಾಟಕ ಅರಣ್ಯ ಇಲಾಖೆಯು ಮಹತ್ವದ ಹೆಜ್ಜೆಯಿಟ್ಟಿದೆ.

ವನ್ಯಜೀವಿಗಳ ಆರೈಕೆಗಾಗಿಯೇ ಪ್ರತ್ಯೇಕವಾದ ವನ್ಯಜೀವಿ ಪಶುವೈದ್ಯರ ಕೆಡರ್ ಒಂದನ್ನು ರಚಿಸಲು ಇಲಾಖೆ ನಿರ್ಧರಿಸಿದ್ದು, ಇದಕ್ಕಾಗಿ ರಾಜ್ಯದ ಪ್ರಮುಖ ಪಶುವೈದ್ಯಕೀಯ ಕಾಲೇಜುಗಳೊಂದಿಗೆ ಪಾಲುದಾರಿಕೆ ಮಾಡಿಕೊಳ್ಳಲು ಸಿದ್ಧತೆ ನಡೆಸಿದೆ. ನಮಗೆ ಕ್ಷೇತ್ರಮಟ್ಟದಲ್ಲಿ ಅನುಭವ ಹೊಂದಿರುವ ಪಶುವೈದ್ಯರ ಅಗತ್ಯವಿದೆ. ಪ್ರಾಣಿಗಳ ನಡವಳಿಕೆ, ವಿಧಿವಿಜ್ಞಾನ ಪರೀಕ್ಷೆ, ರೋಗಗಳು, ಅರಿವಳಿಕೆ, ಅರವಳಿಕೆ ಮದ್ದು ಬಳಸಿ ಪ್ರಾಣಿಗಳನ್ನು ಹಿಡಿಯುವುದು ಸೇರಿದಂತೆ ಹಲವು ಕಾರ್ಯಗಳನ್ನು ನಿರ್ವಹಿಸುವ ಪರಿಣತಿ ಅವರಿಗಿರಬೇಕು. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವವರಲ್ಲಿ ಹೆಚ್ಚಿನವರು ಸಾಕುಪ್ರಾಣಿಗಳ ಚಿಕಿತ್ಸೆಯಲ್ಲಿ ಅನುಭವ ಪಡೆದವರಾಗಿದ್ದು, ವನ್ಯಜೀವಿಗಳ ನಿರ್ವಹಣೆಯಲ್ಲಿ ಹೆಚ್ಚಿನ ಅನುಭವ ಹೊಂದಿಲ್ಲ. ಹೀಗಾಗಿ, ಪಶುವೈದ್ಯಕೀಯ ಕಾಲೇಜುಗಳೊಂದಿಗೆ ಸಹಭಾಗಿತ್ವ ಸ್ಥಾಪಿಸುವ ಬಗ್ಗೆ ಪರಿಶೀಲಿಸುತ್ತಿದ್ದೇವೆ.

ಈ ಪ್ರಸ್ತಾವನೆಯನ್ನು ಸರ್ಕಾರದ ಮುಂದಿಡಲಾಗುವುದು ಎಂದು ಅರಣ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.ತರಬೇತಿಯ ಅವಧಿಯಲ್ಲಿ ಪಶುವೈದ್ಯರಿಗೆ ಅರಣ್ಯ ಸಿಬ್ಬಂದಿಯೊಂದಿಗೆ ಕ್ಷೇತ್ರಮಟ್ಟದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವ ಜವಾಬ್ದಾರಿ ನೀಡಲಾಗುತ್ತದೆ.

ರೋಗಗಳ ಏಕಾಏಕಿ ಹರಡುವಿಕೆ ಕಂಡುಬಂದಾಗ ವಿಶ್ಲೇಷಣೆಗಾಗಿ ಪ್ರಾಣಿಗಳ ಮಲದ ಮಾದರಿಗಳನ್ನು ಸಂಗ್ರಹಿಸುವುದು, ಮರಿಗಳನ್ನು ಪತ್ತೆಹಚ್ಚಿ ರಕ್ಷಿಸುವುದು ಹಾಗೂ ಅವುಗಳನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸುವ ಕಾರ್ಯಾಚರಣೆಗಳಲ್ಲಿ ಭಾಗವಹಿಸುವುದು ತರಬೇತಿಯ ಭಾಗವಾಗಿರಲಿದೆ.

## ನಿವೃತ್ತಿಗೆ 6 ತಿಂಗಳು ಇರುವಾಗಲೇ IPS ಅಧಿಕಾರಿ ಎಸ್. ರವಿ ದಿಢೀರ್ ರಾಜೀನಾಮೆ!


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಆಡಳಿತ ವರ್ಗದಲ್ಲಿ ಮಹತ್ವದ ಬದಲಾವಣೆಗಳು ನಡೆಯುತ್ತಿದ್ದು, ಇದೀಗ ಐಪಿಎಸ್ ಅಧಿಕಾರಿ ಎಸ್ ರವಿ ಅವರು ದಿಢೀರ್ ರಾಜೀನಾಮೆ ಸಲ್ಲಿಕೆ ಮಾಡಿದ್ದಾರೆ. ಸದ್ಯ ಕೆಎಸ್‌ಆರ್‌ಪಿಯಲ್ಲಿ ಎಡಿಜಿಪಿ ಆಗಿರೋ ಎಸ್ ರವಿ ಅವರು ದಿಢೀರ್ ರಾಜೀನಾಮೆ ಸಲ್ಲಿಕೆ ಮಾಡಿದ್ದು, ರಾಜೀನಾಮೆಗೆ ಕಾರಣ ಏನು ಅನ್ನೋದೇ ಕುತೂಹಲ ಮೂಡಿಸಿದೆ. ಐಪಿಎಸ್ ಅಧಿಕಾರಿ ಎಸ್ ರವಿ ಅವರು ಡಿಜಿ ಕಚೇರಿಗೆ ರಾಜೀನಾಮೆ ಸಲ್ಲಿಕೆ ಮಾಡಿದ್ದು, ವೈಯಕ್ತಿಕ ಕಾರಣಗಳನ್ನು ನೀಡಿದ್ದಾರೆ ಎಂದು ತಿಳಿದು ಬಂದಿದೆ. 1998ರ ಬ್ಯಾಚ್‌ನ ಐಪಿಎಸ್ ಅಧಿಕಾರಿ ರವಿ , ಈ ಹಿಂದೆ ಗುಪ್ತಚರ ಇಲಾಖೆಯ ಎಡಿಜಿಪಿ ಆಗಿದ್ದರು. ಡಿಕೆ ಶಿವಕುಮಾರ್ ಅವರು ಸಿಎಂ ಆದ ಬಳಿಕ ಇವರನ್ನ ಎಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿತ್ತು.

ರವಿ ಅವರಿಗೆ ನಿವೃತ್ತಿಗೆ ಆರು ತಿಂಗಳು ಬಾಕಿ ಇತ್ತು. ಇದೀಗ ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಕೆ ಮಾಡಿದ್ದು, ಡಿಜಿ ಐಜಿಪಿ ಸಲೀಂ ಅವರು ಮಾಹಿತಿಯನ್ನು ದೃಢೀಕರಿಸಿದ್ದಾರೆ. ಕೆಲ ಮೂಲಗಳ ಪ್ರಕಾರ ಹಿರಿಯ ಅಧಿಕಾರ ಜೊತೆ ಮನಸ್ತಾಪದ ಕಾರಣ ರಾಜೀನಾಮೆ ನೀಡುತ್ತಿದ್ದಾರೆ ಎಂದು ತಿಳಿದು ಬಂದಿದೆ.

## ಕಬ್ಬು ಬೆಳೆಗಾರರಿಂದ ಹೆದ್ದಾರಿ ತಡೆ; ಕಬ್ಬಿಗೆ ಹೆಚ್ಚಿನ ಬೆಲೆ ನೀಡಲು ಆಗ್ರಹ

### ಪುಣೆ-ಬೆಂಗಳೂರು ಮಾರ್ಗ ಹಾಗೂ ನಿಡಗುಂದಿ ಸಮೀಪದ ರಾಷ್ಟ್ರೀಯ ಹೆದ್ದಾರಿ 50 ಸೇರಿದಂತೆ ಪ್ರಮುಖ ಹೆದ್ದಾರಿಗಳಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತು.

• ಉದಯವಾಹಿನಿ, ಬೆಂಗಳೂರು

1 ಹೆದ್ದಾರಿಗಳನ್ನು ತಡೆದು ಪ್ರತಿಭಟ
2 ಜಿಲ್ಲೆಯ ಕುಗನೊಳ್ಳಿ ಚೆಕ್‌ಪೋಸ್ಟ್
3 ಕನಿಷ್ಠ ಬೆಂಬಲ ಬೆಲೆ ಹೆಚ್ಚಳ

ಕಬ್ಬಿಗೆ ಹೆಚ್ಚಿನ ಬೆಲೆ ನೀಡಬೇಕು ಹಾಗೂ ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಬೇಕು ಎಂದು ಆಗ್ರಹಿಸಿ ರಾಜ್ಯದ ಹಲವು ಕಡೆಗಳಲ್ಲಿ ಇಂದು ಮಂಗಳವಾರ ಕಬ್ಬು ಬೆಳೆಗಾರರು ರಾಷ್ಟ್ರೀಯ ಹೆದ್ದಾರಿಗಳನ್ನು ತಡೆದು ಪ್ರತಿಭಟನೆ ನಡೆಸಿದರು. ಬೆಳಗಾವಿ, ಬಾಗಲಕೋಟೆ, ವಿಜಯಪುರ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿದ್ದು, ಪುಣೆ-ಬೆಂಗಳೂರು ಮಾರ್ಗ ಹಾಗೂ ನಿಡಗುಂದಿ ಸಮೀಪದ ರಾಷ್ಟ್ರೀಯ ಹೆದ್ದಾರಿ 50 ಸೇರಿದಂತೆ ಪ್ರಮುಖ ಹೆದ್ದಾರಿಗಳಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತು. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹತ್ತರಗಿ ಟೋಲ್ ಪ್ಲಾಜಾ ಬಳಿ ರೈತರು ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಎರಡೂ ಬದಿಗಳಲ್ಲಿ ವಾಹನ ಸಂಚಾರ ತಡೆದರು. ಜಿಲ್ಲೆಯ ಕುಗನೊಳ್ಳಿ ಚೆಕ್‌ಪೋಸ್ಟ್ ಮತ್ತು ಹಿರೇಬಾಗೇವಾಡಿ ಟೋಲ್ ಪ್ಲಾಜಾ ಬಳಿಯೂ ಪ್ರತಿಭಟನೆಗಳು ನಡೆದವು.

ತಮ್ಮ ಬೇಡಿಕೆಗಳು ಈಡೇರುವವರೆಗೂ ಹೋರಾಟ ಮುಂದುವರಿಸುವುದಾಗಿ ರೈತರು ತಿಳಿಸಿದರು. ಕಬ್ಬಿನ ಬೆಲೆ ನಿಗದಿ ಕುರಿತು ನಿನ್ನೆ ದೆಹಲಿಯಲ್ಲಿ ಕೇಂದ್ರ ಸಚಿವರೊಂದಿಗೆ ನಡೆದ ಮಾತುಕತೆಯಲ್ಲಿ ಯಾವುದೇ ತಕ್ಷಣದ ನಿರ್ಧಾರ ಕೈಗೊಳ್ಳಲಾಗಿಲ್ಲ.

ಕನಿಷ್ಠ ಬೆಂಬಲ ಬೆಲೆ ಹೆಚ್ಚಳ, ನ್ಯಾಯಸಮ್ಮತ ಮತ್ತು ಲಾಭದಾಯಕ ಬೆಲೆ ನಿಗದಿ ಹಾಗೂ ಸ್ವಾಮಿನಾಥನ್ ಆಯೋಗದ ಶಿಫಾರಸುಗಳ ಜಾರಿಗೆ ರೈತರು ಒತ್ತಾಯಿಸುತ್ತಿದ್ದಾರೆ. ರಾಷ್ಟ್ರೀಯ ರೈತರ ಆಯೋಗದ ವರದಿ ಎಂದೂ ಕರೆಯಲಾಗುವ ಸ್ವಾಮಿನಾಥನ್ ವರದಿಯು ಭಾರತೀಯ ಕೃಷಿಯಲ್ಲಿ ರಚನಾತ್ಮಕ ಸುಧಾರಣೆಗಳನ್ನು ತರಲು ರೂಪಿಸಲಾದ ಸಮಗ್ರ ನೀಲನಕ್ಷೆಯಾಗಿದೆ.

ಕೃಷಿ ವಿಜ್ಞಾನಿ ಪ್ರೊ. ಎಂ.ಎಸ್. ಸ್ವಾಮಿನಾಥನ್ ಅವರ ಅಧ್ಯಕ್ಷತೆಯಲ್ಲಿ 2004ರಲ್ಲಿ ಈ ಆಯೋಗವನ್ನು ರಚಿಸಲಾಗಿತ್ತು. ರಾಷ್ಟ್ರೀಯ ಹೆದ್ದಾರಿಗಳಲ್ಲಿ ರೈತ ಮುಖಂಡರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಕೆಲವರು ವಾಹನಗಳ ಸಂಚಾರ ತಡೆಯಲು ರಸ್ತೆಯಲ್ಲೇ ಮಲಗಿದರು.

ಬಾಗಲಕೋಟೆ ಜಿಲ್ಲೆಯಲ್ಲಿ ಗೋವಿಂದ ಪಟ್ಟಿಯ ಸಮೀಪ ರೈತರು ರಾಯಚೂರು-ಸೋಲಾಪುರ ರಾಷ್ಟ್ರೀಯ ಹೆದ್ದಾರಿಯನ್ನು ತಡೆದರು.

ಇದರಿಂದ ಟ್ರಕ್‌ಗಳು ಸೇರಿದಂತೆ ಹಲವು ವಾಹನಗಳ ಸಂಚಾರ ಸ್ಥಗಿತಗೊಂಡಿತು. ಹಸಿರು ಸೇನೆಗೆ ಸೇರಿದ ರೈತರು ನಿಡಗುಂದಿ ಪಟ್ಟಣದ ಹೊರವಲಯದಲ್ಲಿ ರಾಷ್ಟ್ರೀಯ ಹೆದ್ದಾರಿ 50ನ್ನು ತಡೆದು, ವಿಜಯಪುರ ಮತ್ತು ಬೆಂಗಳೂರು ನಡುವಿನ ಸಂಚಾರಕ್ಕೆ ಅಡ್ಡಿಪಡಿಸಿದರು.

ಪೊಲೀಸರು ಪ್ರತಿಭಟನಾಕಾರರೊಂದಿಗೆ ಮಾತುಕತೆ ನಡೆಸಿದರೂ, ಬೇಡಿಕೆಗಳು ಈಡೇರುವವರೆಗೂ ರಸ್ತೆ ತಡೆ ಮುಂದುವರಿಸುವುದಾಗಿ ರೈತರು ಪಟ್ಟು ಹಿಡಿದರು. ಧಾರವಾಡ ಜಿಲ್ಲೆಯ ಪಳ್ಳಿಕೊಪ್ಪ ಬಳಿ ಹೆದ್ದಾರಿ ತಡೆ ನಡೆಸಲು ರೈತ ಸಂಘಟನೆಗಳು ಕರೆ ನೀಡಿದ್ದ ಹಿನ್ನೆಲೆಯಲ್ಲಿ, ಮುನ್ನೆಚ್ಚರಿಕೆ ಕ್ರಮವಾಗಿ ರಾಜ್ಯ ಮೀಸಲು ಪೊಲೀಸ್ ಸಿಬ್ಬಂದಿ ಸೇರಿದಂತೆ ಹೆಚ್ಚುವರಿ ಪೊಲೀಸರನ್ನು ನಿಯೋಜಿಸಲಾಗಿತ್ತು. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ನಿನ್ನೆ ರೈತರು ಪ್ರತಿಭಟನೆ ಹಿಂಪಡೆಯುವಂತೆ ಮನವಿ ಮಾಡಿದ್ದು, ಅವರ ಸಮಸ್ಯೆಗಳನ್ನು ಕೇಂದ್ರ ಸರ್ಕಾರ ಪರಿಹರಿಸಲಿದೆ ಎಂದು ಭರವಸೆ ನೀಡಿದರು. ತಾವು ಮತ್ತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ರೈತರ ಅಹವಾಲುಗಳನ್ನು ಆಲಿಸಿದ್ದೇವೆ. ಸಮಸ್ಯೆಗಳನ್ನು ಪರಿಶೀಲಿಸಲು ಸಮಿತಿಯೊಂದನ್ನು ರಚಿಸಲಾಗುವುದು ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

> ಭಾರತ ಸರ್ಕಾರ, ಮೋದಿ ಸರ್ಕಾರ ನಿಮ್ಮೊಂದಿಗಿದೆ. ಈ ಸಮಸ್ಯೆಯನ್ನು ಒಂದೆರಡು ಸಚಿವಾಲಯಗಳು ಮಾತ್ರ ಪರಿಹರಿಸಲು ಸಾಧ್ಯವಿಲ್ಲ. ಹಲವು ಸಚಿವಾಲಯಗಳು ಇದರಲ್ಲಿ ಭಾಗಿಯಾಗಿವೆ. ರಾಜ್ಯ ಸರ್ಕಾರಗಳಿಗೂ, ಅಂದರೆ ಎಲ್ಲಾ ರಾಜ್ಯ ಸರ್ಕಾರಗಳಿಗೂ ಇದರಲ್ಲಿ ಪಾತ್ರವಿದೆ ಎಂದು ಹೇಳಿದರು.
> -ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ





> ಬೆಲೆ ನಿಗದಿಪಡಿಸುವ ಮೊದಲು ನಾವು ಅಧಿಕೃತವಾಗಿ ರಾಜ್ಯ ಸರ್ಕಾರಗಳಿಂದ ಮಾಹಿತಿ ಪಡೆಯುತ್ತೇವೆ. ಹಲವು ಅಂಶಗಳು ಇದರಲ್ಲಿ ಒಳಗೊಂಡಿರುವುದರಿಂದ ಯಾರೂ ಆತಂಕಕ್ಕೊಳಗಾಗುವ ಅಗತ್ಯವಿಲ್ಲ ಎಂದು ಹೇಳಿದ ಅವರು, ಬೀದಿಗಿಳಿದು ಪ್ರತಿಭಟನೆ ನಡೆಸದಂತೆ ರೈತರಲ್ಲಿ ಮನವಿ ಮಾಡಿದರು.
> -ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ

## ಸಾಲ ಮನ್ನಾ ಮಾಡಿ, ಬರ ಪರಿಹಾರ ನೀಡಿ: ಸರ್ಕಾರಕ್ಕೆ ರೈತರ ಆಗ್ರಹ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು ಹಾಗೂ ಬರದಿಂದ ಸಂಕಷ್ಟಕ್ಕೀಡಾಗಿರುವ ರೈತರಿಗೆ ತಕ್ಷಣ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿ ನೂರಾರು ರೈತರು ನಗರದ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು. ಕರ್ನಾಟಕದ 217 ತಾಲ್ಲೂಕುಗಳಲ್ಲಿ ತೀವ್ರ ಬರ ಪರಿಸ್ಥಿತಿ ಎದುರಾಗಿದ್ದು, 20 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆಗಳು ಹಾನಿಗೀಡಾಗಿವೆ. ಇದರಿಂದ20,000 ಕೋಟಿ ರೂಪಾಯಿಗೂ ಅಧಿಕ ಬೆಳೆ ನಷ್ಟ ಉಂಟಾಗಿದೆ ಎಂದು ಪ್ರತಿಭಟನಾಕಾರರು ತಿಳಿಸಿದರು.ಬೀಜ, ರಸಗೊಬ್ಬರ, ಕೀಟನಾಶಕ, ಕಾರ್ಮಿಕರ ಕೂಲಿ, ಕೃಷಿ ಯಂತ್ರೋಪಕರಣಗಳು ಮತ್ತು ನೀರಾವರಿಗಾಗಿ ಮಾಡಿದ ಹೂಡಿಕೆಯನ್ನು ಮರಳಿ ಪಡೆಯಲು ರೈತರು ಪರದಾಡುತ್ತಿದ್ದಾರೆ.

ಹೆಚ್ಚುತ್ತಿರುವ ಸಾಲದ ಹೊರೆ ಹಾಗೂ ಸಾಲ ವಸೂಲಾತಿ ಒತ್ತಡದಿಂದ ರೈತರ ಸಂಕಷ್ಟ ಮತ್ತಷ್ಟು ಹೆಚ್ಚಾಗಿದೆ ಎಂದು ಹೇಳಿದರು. ಕರ್ನಾಟಕ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ ಸಚಿವ ಸತೀಶ್ ಜಾರಕಿಹೊಳಿ, ರೈತರ ಬೇಡಿಕೆಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಧ್ಯಕ್ಷತೆಯಲ್ಲಿ ಒಂದು ವಾರದೊಳಗೆ ರೈತ ಮುಖಂಡರ ಸಭೆ ನಡೆಸುವುದಾಗಿ ಭರವಸೆ ನೀಡಿದರು. ಸರ್ಕಾರದಿಂದ ಸಮರ್ಪಕ ನೆರವು ದೊರೆಯುತ್ತಿಲ್ಲ ಎಂದು ಆರೋಪಿಸಿ ಘೋಷಣೆಗಳನ್ನು ಕೂಗಿದ ರೈತರು, ಕೃಷಿ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕೆಂದು ಒತ್ತಾಯಿಸಿದರು. ಬಿಕ್ಕಟ್ಟಿನ ತೀವ್ರತೆಯನ್ನು ಗಮನಿಸಿದರೆ ತಾತ್ಕಾಲಿಕ ಪರಿಹಾರ ಕ್ರಮಗಳು ಸಾಕಾಗುವುದಿಲ್ಲ ಎಂದು ಹೇಳಿದರು.

## ನನ್ನ ಮೇಲೂ ಸ್ಟಿಂಗ್ ಪ್ರಯತ್ನ ನಡೆದಿತ್ತು

• ಉದಯವಾಹಿನಿ, ಬೆಂಗಳೂರು

ಮಾಜಿ ಸಿಎಂ ಸಿದ್ದರಾಮಯ್ಯ ಮೇಲೆ ಸ್ಟಿಂಗ್ ಆಪರೇಷನ್ ನಡೆದಿದೆ ಎಂಬ ವಿಚಾರವಾಗಿ ಮಾಜಿ ಸಚಿವ ಕೆ.ಎನ್.ರಾಜಣ್ಣ ಪ್ರತಿಕ್ರಿಯಿಸಿದ್ದು, ಸ್ಟಿಂಗ್ ಆಗಿರುವುದಕ್ಕಾಗಿಯೇ ಸಿದ್ದರಾಮಯ್ಯನವರು ಸ್ಟೇ ಪಡೆದುಕೊಂಡಿದ್ದಾರೆ ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಾಜಣ್ಣ, ಸಿಡಿ ಹಾಗೂ ಸ್ಟಿಂಗ್ ಆಪರೇಷನ್‌ಗಳಿಗೆ ರಾಜ್ಯದಲ್ಲಿ ಒಂದೇ ಫ್ಯಾಕ್ಟರಿ ಇದೆ, ಆದರೆ ಅದರಲ್ಲಿ ಪಾರ್ಟ್ನರ್‌ಗಳು ಮಾತ್ರ ಬೇರೆ ಬೇರೆ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವ ವಿಚಾರವನ್ನು ಪ್ರಸ್ತಾಪಿಸಿದ ಅವರುರು. ಸ್ಟಿಂಗ್ ಆಗಿರುವುದಕ್ಕಾಗಿಯೇ ಸಿದ್ದರಾಮಯ್ಯನವರು ಸ್ಟೇ ಪಡೆದುಕೊಂಡಿದ್ದಾರೆ. ಇದು ಹೊಸದೇನಲ್ಲ, ಹಿಂದೆ ಸ್ಟಿಂಗ್ ಆಪರೇಷನ್ ಮಾಡಿಯೇ ಸಿದ್ದರಾಮಯ್ಯನವರ ರಾಜೀನಾಮೆ ಪಡೆಯಲಾಯಿತೇ ಎಂಬ ಅನುಮಾನವೂ ಇರಬಹುದು, ಅದನ್ನು ತಳ್ಳಿಹಾಕಲು ಸಾಧ್ಯವಿಲ್ಲ ಎಂದರು. ಇದೇ ವೇಳೆ ತಮ್ಮ ಮೇಲೂ ಇಂತಹ ಪ್ರಯತ್ನ ನಡೆದಿತ್ತು ಎಂದು ರಾಜಣ್ಣ ತಿಳಿಸಿದ್ದಾರೆ.

ಹಿಂದೆ ನನ್ನ ಮೇಲೂ ಸ್ಟಿಂಗ್ ಮಾಡಲು ಪ್ರಯತ್ನ ಮಾಡಿದ್ದರು. ಅದು ಸರ್ಕಾರಿ ನಿವಾಸವಾಗಿದ್ದರಿಂದ ಭದ್ರತೆಗೆ ಸಿಸಿಟಿವಿ ಇರುತ್ತದೆ ಎಂದು ಭಾವಿಸಿದ್ದೆ, ಆದರೆ ನಂತರ ಅಲ್ಲಿ ಸಿಸಿಟಿವಿ ಇಲ್ಲ ಎಂಬುದು ಗೊತ್ತಾಯಿತು ಎಂದು ಮಾಹಿತಿ ಹಂಚಿಕೊಂಡರು. ಈ ಇಡೀ ಬೆಳವಣಿಗೆ ಒಂದು 'ಬ್ಲ್ಯಾಕ್‌ಮೇಲ್ ತಂತ್ರ', ಮುಖ್ಯಮಂತ್ರಿಗಳ ಬಳಿ ಎಲ್ಲಾ ತನಿಖಾ ಸಂಸ್ಥೆಗಳಿದೆ.


ಉದಯವಾಹಿನಿ ಚಿತ್ರ

ಜನರಲ್ಲಿರುವ ಗೊಂದಲವನ್ನು ಅವರೇ ತನಿಖೆ ಮಾಡಿಸಿ ದೂರ ಮಾಡಬೇಕು. ರಮೇಶ್ ಜಾರಕಿಹೊಳಿ ಅವರ ಸಿಡಿಯನ್ನು ಯಾರು ಮಾಡಿಸಿದ್ದು ಎಂದು ನೀವೇ ಹೇಳಿ ಅವರದ್ದು ಮಾಡಿಸಿದವರೇ ಈಗ ಸಿದ್ದರಾಮಯ್ಯನವರದ್ದನ್ನೂ ಮಾಡಿಸಿದ್ದಾರೆ. ಇದರಿಂದ ಇಡೀ ಕರ್ನಾಟಕದ ಮಾನ-ಮರ್ಯಾದೆ ಹರಾಜಾಗುತ್ತಿದೆ, ನಮ್ಮ ಗೌರವವನ್ನು ನಾವೇ ಕಳೆದುಕೊಳ್ಳುತ್ತಿದ್ದೇವೆ ಎಂದರು.

> ಸಿಎಂ ಅವರೇ ಅಸಹಾಯಕರಂತೆ ಮಾತನಾಡಿದರೆ ಹೇಗೆ? ತನಿಖೆ ನಡೆಸಿ ಎಲ್ಲವನ್ನೂ ಬಹಿರಂಗಪಡಿಸಿದರೆ ಈ ಸ್ಟಿಂಗ್ ದಂಧೆ ಇಲ್ಲಿಗೇ ನಿಲ್ಲುತ್ತದೆ ಎಂದು ಹೇಳಿದರು.
> -ಕೆ.ಎನ್.ರಾಜಣ್ಣ

## ಹಳ್ಳಿಗಳಿಂದ ಜನ ವಲಸೆ ತಡೆಯಲು ಜಾನುವಾರು, ಕೋಳಿ ಸಾಕಾಣಿಕೆ ಶೆಡ್ ನಿರ್ಮಾಣ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ತೀವ್ರ ಬರ ಪರಿಸ್ಥಿತಿ ಉಂಟಾಗಿದ್ದು, ಗ್ರಾಮೀಣ ಕುಟುಂಬಗಳು ಅದರಲ್ಲೂ ಸಣ್ಣ ಮಟ್ಟದ ರೈತರು ಜೀವನೋಪಾಯಕ್ಕಾಗಿ ಪರದಾಡುತ್ತಿರುವ ಹಿನ್ನೆಲೆಯಲ್ಲಿ, ಉದ್ಯೋಗ ಅರಸಿ ಜನರು ವಲಸೆ ಹೋಗುವುದನ್ನು ತಡೆಯಲು ದುರ್ಬಲ ವರ್ಗದ ಕುಟುಂಬಗಳಿಗೆ ಸುಸ್ಥಿರ ಜೀವನೋಪಾಯದ ಅವಕಾಶಗಳನ್ನು ಕಲ್ಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಇದರ ಭಾಗವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಕೋಳಿ ಮತ್ತು ಹೈನುಗಾರಿಕೆ ರೈತರಿಗೆ ಸಾವಿರಾರು ಶೆಡ್‌ಗಳನ್ನು ನಿರ್ಮಿಸಿಕೊಟ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಯೋಜಿಸಿದೆ.

ಈ ಯೋಜನೆಯಡಿ ಹಳ್ಳಿಗಳು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಗಳಲ್ಲಿ ಸ್ವಸಹಾಯ ಗುಂಪುಗಳಿಗೆ ಸೇರಿದ ಜಮೀನುಗಳಲ್ಲಿ ಜಾನುವಾರು ಸಾಕಾಣಿಕೆ ಶೆಡ್‌ಗಳನ್ನು ನಿರ್ಮಿಸಲಾಗುತ್ತದೆ. ವಿ.ಬಿ.ಜಿ ರಾಮ್ ಜಿ ಯೋಜನೆಯಡಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕಾರ್ಮಿಕರು ಹಾಗೂ ನಿರ್ಮಾಣ ಸಾಮಗ್ರಿಗಳ ವೆಚ್ಚವನ್ನು ಭರಿಸಲಿದೆ.

ಗ್ರಾಮಗಳಲ್ಲೇ ಜೀವನೋಪಾಯಕ್ಕೆ ಅಗತ್ಯವಾದ ಆಸ್ತಿಗಳನ್ನು ಸೃಷ್ಟಿಸಿಕೊಳ್ಳಲು ದುರ್ಬಲ ಕುಟುಂಬಗಳಿಗೆ ನೆರವು ನೀಡುವುದು ಈ ಉಪಕ್ರಮದ ಉದ್ದೇಶವಾಗಿದೆ. ಬಳಿಕ ಪಶುಸಂಗೋಪನಾ ಇಲಾಖೆ ಮತ್ತು ಇತರ ಸರ್ಕಾರಿ ಯೋಜನೆಗಳ ನೆರವಿನೊಂದಿಗೆ ಆದಾಯ ಗಳಿಸುವ ಚಟುವಟಿಕೆಗಳನ್ನು ಕೈಗೊಳ್ಳಲು ಅವಕಾಶ ಕಲ್ಪಿಸಲಾಗುತ್ತದೆ. ವಿಶೇಷವಾಗಿ ಭೂರಹಿತ ಕೃಷಿ ಕಾರ್ಮಿಕರು ಹಾಗೂ ಗ್ರಾಮೀಣ ಪ್ರದೇಶಗಳ ಇತರ ದುರ್ಬಲ ಕುಟುಂಬಗಳಿಗೆ ಅನುಕೂಲವಾಗುವಂತೆ ಕುರಿ, ಮೇಕೆ, ಜಾನುವಾರು ಮತ್ತು ಕೋಳಿ ಸಾಕಾಣಿಕೆ ಶೆಡ್‌ಗಳನ್ನು ನಿರ್ಮಿಸಲು ಸರ್ಕಾರ ಯೋಜಿಸಿದೆ.

> ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದಿರುವ ಪತ್ರದಲ್ಲಿ, ಎಲ್ ನಿನೊ ಚಂಡಮಾರುತ ಪರಿಣಾಮ ಮತ್ತು ತೀವ್ರ ಬರ ಪರಿಸ್ಥಿತಿಯಿಂದಾಗಿ ಭೂರಹಿತ ಕೃಷಿ ಕಾರ್ಮಿಕರು ಹಾಗೂ ಬಡ ಗ್ರಾಮೀಣ

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವೆಗಳ ಇಲಾಖೆಯ ಸಮನ್ವಯದೊಂದಿಗೆ ವಿ.ಬಿ.ಜಿ ರಾಮ್ ಜಿ ಯೋಜನೆಯಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ. ಕುಟುಂಬಗಳಲ್ಲಿ ವಲಸೆ ಹೆಚ್ಚಾಗಿದೆ ಎಂದು ತಿಳಿಸಿದ್ದಾರೆ. ಪಂಕಜ್ ಕುಮಾರ್ ಪಾಂಡೆ



## ಬೆಂಗಳೂರಿನಲ್ಲಿ ಬ್ಲಿಂಕಿಟ್ ರೀತಿ ಕೆಲವೇ ನಿಮಿಷದಲ್ಲಿ ಗುಂಡಿ ಮುಚ್ಚುತ್ತೇವೆ

• ಉದಯವಾಹಿನಿ, ಬೆಂಗಳೂರು

ರಾಜಧಾನಿ ಬೆಂಗಳೂರಿನಲ್ಲಿ ರಸ್ತೆ ಗುಂಡಿಗಳಿಂದ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಭಾರೀ ಚರ್ಚೆಗೆ ಗ್ರಾಸವಾಗಿದ್ದು, ಮುಂದೆ ಬ್ಲಿಂಕಿಟ್ ರೀತಿ ಕೆಲವೇ ನಿಮಿಷದಲ್ಲಿ ಗುಂಡಿ ಮುಚ್ಚುತ್ತೇವೆ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಹೇಳಿದ್ದಾರೆ. ಬ್ಲಿಂಕಿಟ್ ಆಪ್‌ನಲ್ಲಿ ಆರ್ಡರ್ ಮಾಡಿದ ಕೆಲವೇ ನಿಮಿಷಗಳಲ್ಲಿ ವಸ್ತುಗಳನ್ನು ಮನೆಗೆ ತಲುಪಿಸುವಂತೆ, ರಸ್ತೆ ಗುಂಡಿಗಳ ಬಗ್ಗೆ ದೂರು ನೀಡಿದ ಕೂಡಲೇ ಬಂದು ಮುಚ್ಚುವಂತಹ ವ್ಯವಸ್ಥೆಯನ್ನು ಭವಿಷ್ಯದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಗಮನ ಕೇಂದ್ರೀಕರಿಸುತ್ತೇವೆ ಎಂದು ಮಹೇಶ್ವರ ರಾವ್ ತಿಳಿಸಿದ್ದಾರೆ. ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿರುವ ಪಾಡ್‌ಕಾಸ್ಟ್‌ನಲ್ಲಿ ಮಾತನಾಡಿದ ಮಹೇಶ್ವರ್ ರಾವ್ ಅವರು, ಜಿಬಿಎನಲ್ಲಿ ಕೋಟ್ಯಂತರ ರು. ಹಣವಿದ್ದರೂ ಒಂದು ಗುಂಡಿ ಮುಚ್ಚಲು ಏಕೆ ಅಷ್ಟೊಂದು ಸಮಯ ತೆಗೆದುಕೊಳ್ಳಲಾಗುತ್ತದೆ ಎಂಬ ಪ್ರಶ್ನೆಗೆ ಮೇಲಿನಂತೆ ಉತ್ತರಿಸಿದ್ದಾರೆ. ಮಳೆಗಾಲದಲ್ಲೇ ನಮಗೆ ಗುಂಡಿ ಸಮಸ್ಯೆ ಹೆಚ್ಚು ಕಂಡು ಬರುತ್ತವೆ. ನಮ್ಮ ರಸ್ತೆ ಗುಣಮಟ್ಟ ಸಾಕಷ್ಟು ಸುಧಾರಣೆಯಾಗಬೇಕು ಎನ್ನುವುದರ ಬಗ್ಗೆ ನನ್ನ ಸಹಮತವಿದೆ. ಆದರೆ, ಮಳೆಗಾಲದಲ್ಲಿ ಗುಂಡಿ ಮುಚ್ಚಲಾಗದು.

## ವಿಡಿಯೋ ಪ್ರಸಾರ ಮಾಡದಂತೆ ತಡೆಯಾಜ್ಞೆ ಕೋರಿ ಕೋರ್ಟ್ : ಸಿದ್ದರಾಮಯ್ಯ

• ಉದಯವಾಹಿನಿ, ಬೆಂಗಳೂರು

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ , ಸ್ಟಿಂಗ್ ಆಪರೇಷನ್ ವಿವಾದಕ್ಕೆ ಸಂಬಂಧಿಸಿದ ವೈರಲ್ ವಿಡಿಯೋ ಮತ್ತು ಅದಕ್ಕೆ ಸಂಬಂಧಿಸಿದ ಆರೋಪಗಳ ಪ್ರಸಾರ ಹಾಗೂ ಹಂಚಿಕೆಗೆ ತಡೆಯಾಜ್ಞೆ ನೀಡುವಂತೆ ಕೋರಿ, ತಮ್ಮ ವಕೀಲ ಪ್ರವೀಣ್ ಕಾಮತ್ ಮೂಲಕ ಬೆಂಗಳೂರಿನ 19ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ (ಸಿಸಿಎಚ್-18) ಅರ್ಜಿ ಸಲ್ಲಿಸಿದ್ದಾರೆ.

ವಿವಾದಿತ ವಿಡಿಯೋ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳನ್ನು ಹಂಚಿಕೊಳ್ಳದಂತೆ ಅಥವಾ ಪ್ರಸಾರ ಮಾಡದಂತೆ ಮಾಧ್ಯಮ ಸಂಸ್ಥೆಗಳು ಹಾಗೂ ಇತರ ವೇದಿಕೆಗಳಿಗೆ ನಿರ್ಬಂಧ ವಿಧಿಸುವಂತೆ ಅರ್ಜಿಯಲ್ಲಿ ಕೋರಿದ್ದಾರೆ. ಈ ವಿಷಯಗಳು ಮಾನಹಾನಿಕರವಾಗಿದ್ದು, ಸುಳ್ಳು ಆರೋಪಗಳನ್ನು ಒಳಗೊಂಡಿವೆ ಎಂದು ಹೇಳಿದ್ದಾರೆ. ಕೇಂದ್ರ ಸಚಿವ ಹೆಚ್ .ಡಿ. ಕುಮಾರಸ್ವಾಮಿ ಅವರು ಸಿದ್ದರಾಮಯ್ಯ ಅವರನ್ನು ಒಳಗೊಂಡಿದೆ ಎನ್ನಲಾದ ಸ್ಟಿಂಗ್ ಆಪರೇಷನ್ ಕುರಿತು ಆರೋಪಗಳನ್ನು ಮಾಡಿರುವ ಬೆನ್ನಲ್ಲೇ ಈ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಈ ವಿಚಾರವು ರಾಜಕೀಯ ಸಂಘರ್ಷಕ್ಕೆ ಕಾರಣವಾಗಿದ್ದು, ತನಿಖೆಗೆ ಆದೇಶಿಸಲು ಹಿಂದೇಟು ಹಾಕುತ್ತಿರುವುದೇಕೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ. ಮತ್ತೊಂದೆಡೆ, ಸಿದ್ದರಾಮಯ್ಯ ಕೂಡ ಈ ಪ್ರಕರಣದ ತನಿಖೆಗೆ ಒತ್ತಾಯಿಸಿದ್ದಾರೆ.


ಉದಯವಾಹಿನಿ ಚಿತ್ರ

ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಫೇಕ್ ಸ್ಟಿಂಗ್ ಆಪರೇಷನ್' (ನಕಲಿ ರಹಸ್ಯ ಕಾರ್ಯಾಚರಣೆ) ಕುರಿತಾದ ವದಂತಿಗಳ ಬಗ್ಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ತೀವ್ರ ಪ್ರತಿಕ್ರಿಯೆ ನೀಡಿದ್ದಾರೆ. ತಮ್ಮ ವರ್ಚಸ್ಸಿಗೆ ಧಕ್ಕೆ ತರುವ ಉದ್ದೇಶದಿಂದ ತಮ್ಮ ವಿರುದ್ಧ ಸುಳ್ಳು ಪ್ರಚಾರ ನಡೆಸಲಾಗುತ್ತಿದೆ, ಇದೇ ಕಾರಣಕ್ಕೆ ತಾವು ನ್ಯಾಯಾಲಯದಿಂದ ತಡೆಯಾಜ್ಞೆ ಕೋರಿದ್ದಾಗಿ ತಿಳಿಸಿದರು.

## ತ್ಯಾಜ್ಯ ವಿಂಗಡಣೆ ನಿಯಮ ಉಲ್ಲಂಘನೆ ದಂಡ ವಿಧಿಸಿ, ಬಿಸಿ ಮುಟ್ಟಿಸಿದ ಪಾಲಿಕೆ..!

• ಉದಯವಾಹಿನಿ, ಬೆಂಗಳೂರು

ಘನತ್ಯಾಜ್ಯ ನಿರ್ವಹಣಾ ನಿಯಮಗಳನ್ನು ಉಲ್ಲಂಘಿಸುವವರ ವಿರುದ್ಧ ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ನಗರ ಪಾಲಿಕೆಗಳು ಕ್ರಮ ಮುಂದುವರಿಸಿವೆ. ತ್ಯಾಜ್ಯವನ್ನು ವಿಂಗಡಿಸದೆ ವಿಲೇವಾರಿ ಮಾಡಿದ ಕಾರಣಕ್ಕೆ ಆನ್‌ಲೈನ್ ವಿತರಣಾ ವೇದಿಕೆಗಳಾದ ಸ್ವಿಗ್ಗಿ ಇನ್‌ಸ್ಟಾಮಾರ್ಟ್ ಮತ್ತು ಜೆಪ್ಟೊಗೆ ಬೆಂಗಳೂರು ಪೂರ್ವ ನಗರ ಪಾಲಿಕೆ ತಲಾ 5,000 ರೂ. ದಂಡ ವಿಧಿಸಿದೆ.

ದೊಡ್ಡನೆಕುಂದಿ ವಿಭಾಗದ ಪ್ರಿಯದರ್ಶಿನಿ ವಾರ್ಡ್‌ನ ಮಾರುತಿ ಲೇಔಟ್‌ನಲ್ಲಿ ತ್ಯಾಜ್ಯ ವಿಂಗಡಣೆ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಸ್ವಿಗ್ಗಿ ಇನ್‌ಸ್ಟಾಮಾರ್ಟ್‌ಗೆ 5,000 ರೂ. ದಂಡ ವಿಧಿಸಲಾಗಿದೆ ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆ ತಿಳಿಸಿದೆ. ಇದೇ ವಿಭಾಗದಲ್ಲಿ ತ್ಯಾಜ್ಯವನ್ನು ಉತ್ಪತ್ತಿಯಾದ ಸ್ಥಳದಲ್ಲೇ ವಿಂಗಡಿಸದೆ, ಎಲ್ಲೆಂದರಲ್ಲಿ ವಿಲೇವಾರಿ ಮಾಡಿದ ಕಾರಣಕ್ಕೆ ಜೆಪ್ಟೊಗೂ 5,000 ರೂ. ದಂಡ ವಿಧಿಸಲಾಗಿದೆ.

## ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಬಿಗ್ ಶಾಕ್, ಭಾರೀ ಹಿನ್ನಡೆ..!

• ಉದಯವಾಹಿನಿ, ಬೆಂಗಳೂರು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿದ್ದ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಕರ್ನಾಟಕ ಹೈಕೋರ್ಟ್ ಬಿಗ್ ಶಾಕ್ ನೀಡಿದೆ. 2022ರಲ್ಲಿ ಜಾರಿಗೆ ತರಲಾಗಿದ್ದ ಕಾಯ್ದೆಯ ಸೆಕ್ಷನ್ 3 ಮತ್ತು 4 ಅನ್ನು ನ್ಯಾಯಾಲಯವು ಅಸಂವಿಧಾನಿಕ ಎಂದು ಘೋಷಿಸಿ, ರದ್ದುಗೊಳಿಸಿದೆ. ಹೈಕೋರ್ಟ್ ಆದೇಶದಿಂದ ಎಸ್‌ಸಿ ಮೀಸಲಾತಿಯನ್ನು ಶೇ.15ರಿಂದ ಶೇ.17ಕ್ಕೆ ಹಾಗೂ ಎಸ್‌ಟಿ ಮೀಸಲಾತಿಯನ್ನು ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಿದ್ದ ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾಗಿದೆ. ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಶೈಕ್ಷಣಿಕ ಸಂಸ್ಥೆಗಳಲ್ಲಿ ಸ್ಥಾನಗಳ ಮತ್ತು ರಾಜ್ಯದ ಅಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿ ಕಾಯ್ದೆ, 2022ರ ಸೆಕ್ಷನ್ 3 ಮತ್ತು 4 ಅನ್ನು ನ್ಯಾಯಾಲಯ ಅಸಂವಿಧಾನಿಕ ಎಂದು ಘೋಷಿಸಿದೆ. ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಮೀಸಲಾತಿಯನ್ನು ಶೇ.32ರಲ್ಲೇ ಉಳಿಸಲಾಗಿದ್ದರೂ, ಒಟ್ಟಾರೆ ಮೀಸಲಾತಿ ಪ್ರಮಾಣವು ಶೇ.50ರ ಮಿತಿಯನ್ನು ಮೀರಿತ್ತು.ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರನ್ನೊಳಗೊಂಡ ವಿಭಾಗೀಯ ಪೀಠವು, ''ಒಟ್ಟಾರೆ ಮೀಸಲಾತಿಯನ್ನು ಶೇ.50ರ ಮಿತಿಯನ್ನು ಮೀರುವಂತೆ ಮಾಡುವ ಸೆಕ್ಷನ್ 3ರ ಭಾಗವು ಸಂವಿಧಾನದ 14 ಮತ್ತು 15ನೇ ವಿಧಿಗಳನ್ನು ಉಲ್ಲಂಘಿಸುವುದರಿಂದ ಅದನ್ನು ರದ್ದುಗೊಳಿಸಲಾಗಿದೆ.

## ಬೆಂಗಳೂರು ಹೆಬ್ಬಾಳ ಸುರಂಗ ರಸ್ತೆಗೆ ಹಣಕಾಸು ಇಲಾಖೆ Redಸಿಗ್ನಲ್

### ಹಣಕಾಸು ಇಲಾಖೆ ಗಮನಿಸಿದ್ದರೂ, ಈ ಸುರಂಗ ರಸ್ತೆಯನ್ನು ಪ್ರಸ್ತಾವಿತ ಉತ್ತರ-ದಕ್ಷಿಣ ಸುರಂಗ ಮಾರ್ಗದೊಂದಿಗೆ ಹೇಗೆ ಸಂಯೋಜಿಸಲಾಗುತ್ತದೆ.

• ಉದಯವಾಹಿನಿ, ಬೆಂಗಳೂರು

1 BDA ಆಂತರಿಕ ಸಂಪನ್ಮೂಲ ಬಳಕೆ
2 ಏಕೆ ನಡೆದಿಲ್ಲ ಎಂಬ ಪ್ರಶ್ನೆ ಎತ್ತಿದೆ
3 2,215 ಕೋಟಿ ವೆಚ್ಚದ ಯೋಜನೆ

ರಾಜಧಾನಿ ಬೆಂಗಳೂರಿನ ಟ್ರಾಫಿಕ್ ಸಮಸ್ಯೆಗೆ ಮುಕ್ತಿ ನೀಡಲು ರಾಜ್ಯ ಸರ್ಕಾರ ಮುಂದಿಟ್ಟಿದ್ದ ಮಹತ್ವಾಕಾಂಕ್ಷಿ ಹೆಬ್ಬಾಳ ಕಿರು ಸುರಂಗ ರಸ್ತೆ ಯೋಜನೆಗೆ ಈಗ ರಾಜ್ಯ ಹಣಕಾಸು ಇಲಾಖೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಎಸ್ಟೀಮ್ ಮಾಲ್‌ನಿಂದ ಪಶುವೈದ್ಯಕೀಯ ಕಾಲೇಜಿನವರೆಗೆ ನಿರ್ಮಿಸಲು ಉದ್ದೇಶಿಸಿರುವ 2.2 ಕಿ.ಮೀ ಉದ್ದದ ಹೆಬ್ಬಾಳ ಅಲ್ಪ ಸುರಂಗ ರಸ್ತೆ ಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ಹಣಕಾಸು ಇಲಾಖೆ ಹಲವು ಆರ್ಥಿಕ, ಗುತ್ತಿಗೆ ಮತ್ತು ಸಂಚಾರ ಯೋಜನೆಗಳ ಕುರಿತ ಆತಂಕಗಳನ್ನು ವ್ಯಕ್ತಪಡಿಸಿದ್ದು, ಸಮಗ್ರ ಸಂಚಾರ ಯೋಜನೆಯ ಆಧಾರದ ಮೇಲೆ ಹೊಸ ಪ್ರಸ್ತಾವನೆ ಸಲ್ಲಿಸುವವರೆಗೆ ಯೋಜನೆಯನ್ನು ಮುಂದೂಡುವಂತೆ ಇಲಾಖೆ ಶಿಫಾರಸು ಮಾಡಿದೆ.

ಲಭ್ಯವಾದ ದಾಖಲೆಯ ಪ್ರಕಾರ, 2025ರಲ್ಲಿ ಪರಿಷ್ಕೃತ ಕರಡು ಸಚಿವ ಸಂಪುಟ ಟಿಪ್ಪಣಿಯನ್ನು ಪರಿಶೀಲಿಸಿದ ಬಳಿಕ ಹಣಕಾಸು ಇಲಾಖೆ ಹಲವು ಆಕ್ಷೇಪಗಳನ್ನು ಎತ್ತಿತ್ತು. ಆದರೆ, ಈ ಆತಂಕಗಳನ್ನು ಪರಿಗಣಿಸದೆಯೇ ಸಚಿವ ಸಂಪುಟ ಯೋಜನೆಗೆ ಮುಂದುವರಿದಿದ್ದು, 2025ರ ಡಿಸೆಂಬರ್ 8ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಯೋಜನೆಯ ಅನುಷ್ಠಾನ ಸಂಸ್ಥೆಯನ್ನಾಗಿ ನೇಮಿಸಿ ಸರ್ಕಾರದ ಆದೇಶ ಹೊರಡಿಸಿತ್ತು.


ಉದಯವಾಹಿನಿ ಚಿತ್ರ

ಹಿಂದೆ ವ್ಯಕ್ತಪಡಿಸಿದ್ದ ಆಕ್ಷೇಪಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಸ್ತಾವನೆಯಲ್ಲಿ ಪ್ರಯತ್ನಿಸಲಾಗಿದೆ ಎಂದು ಹಣಕಾಸು ಇಲಾಖೆ ಗಮನಿಸಿದ್ದರೂ, ಈ ಸುರಂಗ ರಸ್ತೆಯನ್ನು ಪ್ರಸ್ತಾವಿತ ಉತ್ತರ-ದಕ್ಷಿಣ ಸುರಂಗ ಮಾರ್ಗದೊಂದಿಗೆ ಹೇಗೆ ಸಂಯೋಜಿಸಲಾಗುತ್ತದೆ. ಬಿಡಿಎ ಮೇಲೆ ಎಷ್ಟು ಆರ್ಥಿಕ ಹೊರೆ ಬೀಳಲಿದೆ ಹಾಗೂ ಪರ್ಯಾಯ ಸಂಚಾರ ವ್ಯವಸ್ಥೆಗಳ ಸ್ವತಂತ್ರ ಮೌಲ್ಯಮಾಪನ ಏಕೆ ನಡೆದಿಲ್ಲ ಎಂಬ ಪ್ರಶ್ನೆಗಳನ್ನು ಎತ್ತಿದೆ.

ಉತ್ತರ-ದಕ್ಷಿಣ ಸುರಂಗ ಮಾರ್ಗಕ್ಕಾಗಿ ಬಿ-ಸ್ಮೈಲ್ ಸಂಸ್ಥೆ ನಡೆಸುತ್ತಿರುವ ಟೆಂಡರ್‌ನಲ್ಲಿ ಬದಲಾವಣೆ ಮಾಡುವ ಪ್ರಸ್ತಾವನೆ ಹಣಕಾಸು ಇಲಾಖೆಯ ಪ್ರಮುಖ ಆಕ್ಷೇಪಗಳಲ್ಲಿ ಒಂದಾಗಿತ್ತು. ಅಲ್ಪ ಸುರಂಗ ರಸ್ತೆಗೆ ಅವಕಾಶ ಕಲ್ಪಿಸಲು ಮೆಕ್ರಿ ವೃತ್ತದಲ್ಲಿನ ಪ್ರಮುಖ ರ್‍ಯಾಂಪ್‌ಗಳ ವಿನ್ಯಾಸ ಬದಲಿಸುವುದು ಅಥವಾ ಅವುಗಳನ್ನು ಕೈಬಿಡುವುದು ಸೇರಿದಂತೆ ಈಗಿರುವ ಟೆಂಡರ್‌ಗೆ ಪೂರಕ ತಿದ್ದುಪಡಿ ತರಲು ಉದ್ದೇಶಿಸಲಾಗಿತ್ತು.

ಟೆಂಡರ್ ಪ್ರಕಟಿಸಿದ ಬಳಿಕ ಅದರ ವ್ಯಾಪ್ತಿಯಲ್ಲಿ ಬದಲಾವಣೆ ಮಾಡಿದರೆ ಯೋಜನೆಯು ಕಾನೂನು ಸವಾಲುಗಳನ್ನು ಎದುರಿಸಬಹುದು, ಪರಿಹಾರ ಮೊತ್ತದ ಬೇಡಿಕೆಗಳು ಎದುರಾಗಬಹುದು ಹಾಗೂ ಮೂಲ ಯೋಜನೆಯ ವಿನ್ಯಾಸವನ್ನು ಆಧರಿಸಿ ಬಿಡ್ ಸಲ್ಲಿಸಿದ್ದ ಅಂತರರಾಷ್ಟ್ರೀಯ ಗುತ್ತಿಗೆದಾರರ ಭಾಗವಹಿಸುವಿಕೆ ಕಡಿಮೆಯಾಗಬಹುದು ಎಂದು ಇಲಾಖೆ ಎಚ್ಚರಿಸಿತ್ತು. ಉತ್ತರ-ದಕ್ಷಿಣ ಸುರಂಗ ಮಾರ್ಗದ ಪರಿಷ್ಕೃತ ಉಪಯುಕ್ತತೆ ಮತ್ತು ಆರ್ಥಿಕ ಮಾದರಿಯನ್ನು ಸಮಗ್ರವಾಗಿ ಮರುಪರಿಶೀಲಿಸದೆ, ಕೇವಲ ಕಾರ್ಯವಿಧಾನದ ತಿದ್ದುಪಡಿಯ ಮೂಲಕ ಬದಲಾವಣೆಗಳನ್ನು ಸಮರ್ಥಿಸಿರುವುದನ್ನೂ ಇಲಾಖೆ ಪ್ರಶ್ನಿಸಿತ್ತು. 2,215 ಕೋಟಿ ರೂ. ವೆಚ್ಚದ ಯೋಜನೆಗೆ ಸಂಪೂರ್ಣವಾಗಿ ಬಿಡಿಎಯ ಆಂತರಿಕ ಸಂಪನ್ಮೂಲಗಳಿಂದ ಹಣ ಹೊಂದಿಸುವ ನಿರ್ಧಾರದ ಬಗ್ಗೆಯೂ ಹಣಕಾಸು ಇಲಾಖೆ ಕಳವಳ ವ್ಯಕ್ತಪಡಿಸಿತ್ತು.

**ಹಣಕಾಸಿನ ಕೊರತೆ**

ಬಡಾವಣೆಗಳ ಅಭಿವೃದ್ಧಿ, ನೀರು ಪೂರೈಕೆ, ಒಳಚರಂಡಿ ವ್ಯವಸ್ಥೆ ಮತ್ತು ಉದ್ಯಾನವನಗಳಂತಹ ಮೂಲಸೌಕರ್ಯಗಳನ್ನು ಕಲ್ಪಿಸುವ ಕಾರ್ಯಗಳಿಗೆ ಹಣಕಾಸಿನ ಕೊರತೆ ಉಂಟಾಗುವ ಸಾಧ್ಯತೆಯಿದೆ ಎಂಬ ಆತಂಕವನ್ನು ವ್ಯಕ್ತಪಡಿಸಿತ್ತು.

> 2026ರ ಮಾರ್ಚ್ ವೇಳೆಗೆ ಆಸ್ತಿ ನಗದೀಕರಣದ ಮೂಲಕ 10,000 ಕೋಟಿ ರೂ. ಆದಾಯ ಸಂಗ್ರಹಿಸುವ ನಿರೀಕ್ಷೆಯನ್ನು ಈ ಪ್ರಸ್ತಾವನೆ ಆಧರಿಸಿತ್ತು. ಇದರಲ್ಲಿ ಇ-ಹರಾಜು ಹಾಗೂ ಡಾ. ಕೆ. ಶಿವರಾಮ ಕಾರಂತ ಬಡಾವಣೆಗೆ ಸಂಬಂಧಿಸಿದ ಠೇವಣಿಗಳೂ ಸೇರಿವೆ ಎಂದು ವರದಿಯಾಗಿದೆ.

# ಯುವಕರಿಗೆ ಪ್ರೋತ್ಸಾಹ ಕೊಡುವ ನಾಮೋ ಬಿಎಸ್.ವೈ ಕ್ರಿಕೆಟ್ ಕಪ್

• ಉದಯವಾಹಿನಿ, ಭಾಗ್ಯನಗರ

ಉದಯವಾಹಿನಿ ಚಿತ್ರ



ತಾಲ್ಲೂಕಿನ ಯಲ್ಲಂಪಳ್ಳಿ ಗ್ರಾಮದಲ್ಲಿ ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿ ನಮೋ ಬಿ.ಎಸ್.ವೈ ಕ್ರಿಕೆಟ್ ಕಪ್–2026 ಅನ್ನು ಆಯೋಜಿಸಲಾಗಿತ್ತು. ಈ ಟೂರ್ನಿಯಲ್ಲಿ ವಿವಿಧ ಗ್ರಾಮಗಳಿಂದ ಬಂದಿದ್ದ ಯುವಕರ ತಂಡಗಳು ಪಾಲ್ಗೊಂಡಿತ್ತು.

ಬಿಜೆಪಿ ರಾಜ್ಯ ಕಾರ್ಯದರ್ಶಿ ಸಿ. ಮುನಿರಾಜು ಅವರು ಮಾತನಾಡುತ್ತಾ, ನರೇಂದ್ರ ಮೋದಿ ದೇಶದ ಸುದೀರ್ಘ ಪ್ರಧಾನ ಮಂತ್ರಿಯಾಗಿ, ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಪಯಣ 50 ವರ್ಷ ಪೂರೈಸಿದ ಪ್ರಯುಕ್ತ, ಬಾಗೇಪಲ್ಲಿ, ಗುಡಿಬಂಡೆ, ಚೇಳೂರು ತಾಲ್ಲೂಕುಗಳ 33 ಪಂಚಾಯಿತಿಗಳಲ್ಲಿ ನಮೋ ಬಿಎಸ್ ವೈ ಕ್ರಿಕೆಟ್ ಕಪ್ ಹೆಸರಿನಲ್ಲಿ ಯುವಕರಿಗೆ ಪ್ರೋತ್ಸಾಹ ವಿತರಣೆಯ ಉದ್ದೇಶದಿಂದ ಕ್ರಿಕೆಟ್ ಟೂರ್ನಿಯನ್ನು ಆಯೋಜನೆ ಮಾಡಲಾಗುತ್ತಿದೆ ಎಂದು ಹೇಳಿದರು.

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಈಗಾಗಲೇ 15 ಗ್ರಾಮ ಪಂಚಾಯತ್ ಮಟ್ಟದ ಟೂರ್ನಮೆಂಟ್ ಯಶಸ್ವಿಯಾಗಿ ನಡೆಸಲಾಗಿದೆ. ಅದರ ಮುಂದುವರಿದ ಭಾಗವಾಗಿ, ಇಂದಿನ ದಿನ ಯಲ್ಲಂಪಳ್ಳಿ ಗ್ರಾಮ ಪಂಚಾಯತ್‌ನಲ್ಲಿ ನಮೋ ಬಿ.ಎಸ್. ವೈ ಕ್ರಿಕೆಟ್ ಕಪ್–2026 ಆಯೋಜಿಸಲಾಗಿದೆ. ಇದನ್ನು ಕ್ರೀಡಾ ಆಸಕ್ತರು ಮತ್ತು ಯುವಕರು ಸದುಪಯೋಗ ಮಾಡಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಬಾಗೇಪಲ್ಲಿ ಮಂಡಲ ಅಧ್ಯಕ್ಷ ಆರ್. ಪ್ರತಾಪ್, ಮುಖಂಡರಾದ ಶ್ರೀನಿವಾಸ್ ಜನ್ನಿ, ಚಿಕ್ಕಪೂಜಪ್ಪ, ವೆಂಕಟೇಶ್, ಅಂಬರೀಶ್, ನಾಗ, ಮಂಜುನಾಥ್, ಶ್ರೀನಿವಾಸ ಸೇರಿದಂತೆ ಯಲ್ಲಂಪಳ್ಳಿ ಪಂಚಾಯತ್ ಬಿಜೆಪಿ ಪಕ್ಷದ ಪದಾಧಿಕಾರಿಗಳು ಹಾಗೂ ಮುಖಂಡರು ಹಾಜರಿದ್ದರು.

# ಅನಾನುಭವಿ ಶಾಸಕ ಪ್ರದೀಪ್ ಈಶ್ವರ್ ನಿಂದ ಹುಡುಗಾಟದ ಮಾತು

• ಉದಯವಾಹಿನಿ, ಚಿಕ್ಕಬಳ್ಳಾಪುರ

ರಾಜ್ಯ ರಾಜಕಾರಣದಲ್ಲಿ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಹೆಸರು ರಾಜ್ಯಾದ್ಯಂತ ಜನತೆ ಲೇವಡಿ ಮಾಡಿ ಕೇಳು ಮಟ್ಟದಂತೆ ಮಾತನಾಡಿಕೊಳ್ಳುವ ಪರಿಸ್ಥಿತಿಯನ್ನು ತಂದಿಟ್ಟಿರುವ ಈ ಕ್ಷೇತ್ರದ ಅನಾನುಭವಿ ಶಾಸಕ ಪ್ರದೀಪ್ ಈಶ್ವರ್ ಹುಡುಗಾಟದ ಮಾತುಗಳಿಂದ ಇಡೀ ಚಿಕ್ಕಬಳ್ಳಾಪುರ ಕ್ಷೇತ್ರ ರಾಜ್ಯದಲ್ಲಿ ಇಂದು ಅವಹೇಳನಕ್ಕೆ ಗುರಿಯಾಗಿದೆ ಎಂದು ಮಾಲೂರಿನ ವೈದ್ಯ ಹಾಗೂ ಸಮಾಜ ಸೇವಕ ಡಾಕ್ಟರ್ ವರದರಾಜ್ ಆರೋಪಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 2028ರ ವಿಧಾನಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಿಂದ ಅಲ್ಪಸಂಖ್ಯಾತರಾಗಲಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಾಗಲಿ, ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದರೆ ಆ ಚುನಾವಣೆಯ ಸಂಪೂರ್ಣ ಜವಾಬ್ದಾರಿಯನ್ನು ನಾನು ವಹಿಸಿಕೊಳ್ಳುತ್ತೇನೆ ಎಂದರು. ಪರಿಶಿಷ್ಟರು ಮತ್ತು ಅಲ್ಪಸಂಖ್ಯಾತರು ಏಕೆ ಎಲ್ಲಾ ಚುನಾವಣೆಯಲ್ಲಿ ಬಹುಸಂಖ್ಯಾತರಿಗೆ ಮತ ಹಾಕಬೇಕು. ಅವರಿಗೂ ಸ್ಪರ್ಧಿಸಲು ಅವಕಾಶ ಬೇಕು ಅಲ್ಲವೇ? ಮುಂದಿನ ಚುನಾವಣೆಯಲ್ಲಿ ಪ್ರದೀಪ್ ಆಗಲಿ ಇನ್ಯಾರೇ ಆಗಲಿ, ಚುನಾವಣೆಗೆ ಸ್ಪರ್ಧಿಸುವುದಾದರೆ ಪಕ್ಷೇತರವಾಗಲಿ, ಕಾಂಗ್ರೆಸ್ ಪಕ್ಷದಿಂದಾಗಲಿ, ಅಲ್ಪಸಂಖ್ಯಾತರು ಅಥವಾ ಪರಿಶಿಷ್ಟರು ಚುನಾವಣೆಗೆ ನಿಂತುಕೊಂಡರೆ, ಅವರು ಸ್ವಾವಲಂಬನೆಗೆ ಒಂದು ಸ್ಪಷ್ಟ ನಿರ್ದರ್ಶನ ಇಡೀ ರಾಜ್ಯದಲ್ಲಿ ಚಿಕ್ಕಬಳ್ಳಾಪುರ ಆಗುತ್ತದೆ ಎಂದು ಹೇಳಿದರು.

# ದಸರಾ ಹೊತ್ತಿಗೆ ಕೊಡಗಿನ ಹಾಡಿ ಜನರ ಬದುಕಿನಲ್ಲಿ ಬೆಳಕು

## ಜಂಗಲ್ ಹಾಡಿ, ಆಯುರ್ ಸುರುಳಿ ಹಾಡಿ, ಚೀನಿ ಹುಡ್ಲು ಹಾಡಿ ಮತ್ತು ಚೊಂಬು ಕಾಡು ಹಾಡಿಗಳಿಗೆ ಕೊನೆಗೂ ವಿದ್ಯುತ್ ಬೆಳಕು ತಲುಪಿದೆ.

• ಉದಯವಾಹಿನಿ, ಕೊಡಗು

1 185ಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿವೆ
2 ನೀವು ನೋಡಬೇಕಿತ್ತು ಎಂದು ಹೇಳಿದರು
3 ಈಗಷ್ಟೇ ಅಭಿವೃದ್ಧಿಯನ್ನು ಕಾಣುತ್ತಿದ್ದೇವೆ

ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ತಿತಿಮತಿ ಸಮೀಪದ ಆದಿವಾಸಿ ಹಾಡಿಗಳಲ್ಲಿ ಸೂರ್ಯಾಸ್ತವಾಗುತ್ತಿದ್ದಂತೆ ಜನರ ಬದುಕಿನಲ್ಲಿ ಕೂಡ ಕತ್ತಲು ಆವರಿಸಿದಂತಾಗುತ್ತಿತ್ತು. ತಲೆಮಾರುಗಳಿಂದ ಈ ಜನರ ಬದುಕಿನಲ್ಲಿ ಕತ್ತಲೆ ಕೇವಲ ಬೆಳಕಿನ ಕೊರತೆಯಾಗಿರಲಿಲ್ಲ ಅದು ಅವರ ಜೀವನದ ಒಂದು ಭಾಗವೇ ಆಗಿತ್ತು.

ಈ ವಾರ 4.84 ಕೋಟಿ ರೂಪಾಯಿ ವೆಚ್ಚದ ವಿದ್ಯುತ್ ಯೋಜನೆ ಉದ್ಘಾಟನೆಯಾಗುವುದರೊಂದಿಗೆ ಜನರ ಬದುಕಲ್ಲಿ ಬೆಳಕು ಬಂದಂತಾಗಿದೆ. ಜಂಗಲ್ ಹಾಡಿ, ಆಯುರ್ ಸುರುಳಿ ಹಾಡಿ, ಚೀನಿ ಹುಡ್ಲು ಹಾಡಿ ಮತ್ತು ಚೊಂಬು ಕಾಡು ಹಾಡಿಗಳಿಗೆ ಕೊನೆಗೂ ವಿದ್ಯುತ್ ಬೆಳಕು ತಲುಪಿದೆ. ಯೋಜನೆ ನಾಲ್ಕು ತಿಂಗಳ ಹಿಂದೆಯೇ ಪೂರ್ಣಗೊಂಡಿದ್ದರೂ ಉದ್ಘಾಟನೆ ವಿಳಂಬವಾಗಿತ್ತು. ಇಷ್ಟು ದಿನ ಕತ್ತಲೆಯಲ್ಲೇ ಬದುಕುತ್ತಿದ್ದ ನಮಗೆ ಯೋಜನೆ ಪೂರ್ಣಗೊಂಡ ಬಳಿಕ ಸಂತೋಷ ತಡೆಯಲಾಗಲಿಲ್ಲ. ವಿದ್ಯುತ್ ಘಟಕವನ್ನು ಉದ್ಘಾಟಿಸುವಂತೆ ನಮ್ಮ ಶಾಸಕರನ್ನು ಒತ್ತಾಯಿಸಿದೆವು. ನಮ್ಮ ಮನೆಗಳಿಗೆ ವಿದ್ಯುತ್ ಸಂಪರ್ಕ ದೊರೆತಾಗ ಎಲ್ಲರ ಮುಖದಲ್ಲೂ ಮೂಡಿದ ಸಂತೋಷವನ್ನು ನೀವು ನೋಡಬೇಕಿತ್ತು ಎಂದು ಹೇಳಿದರು. ತಿತಿಮತಿ ಅರಣ್ಯ ಅಂಚಿನಲ್ಲಿರುವ ಈ ನಾಲ್ಕು ಹಾಡಿಗಳಲ್ಲಿ ಜೇನು ಕುರುಬ, ಪಣಿಯೇರ ಯರವ ಮತ್ತು ಪಂಜಾರಿ ಯರವ ಎಂಬ ಮೂರು ಆದಿವಾಸಿ ಸಮುದಾಯಗಳಿಗೆ ಸೇರಿದ 185ಕ್ಕೂ ಹೆಚ್ಚು ಕುಟುಂಬಗಳು ವಾಸಿಸುತ್ತಿವೆ.

ಉದಯವಾಹಿನಿ ಚಿತ್ರ



> ನಮ್ಮ ಮನೆಗಳು ಈ ರೀತಿ ಬೆಳಗುವುದನ್ನು ನೋಡುವ ದಿನ ಬರುತ್ತದೆ ಎಂದು ನಾವು ಕನಸಿನಲ್ಲಿಯೂ ಭಾವಿಸಿರಲಿಲ್ಲ. ಸ್ವಿಚ್ ಹಾಕಿದ ತಕ್ಷಣ ಮನೆಗಳಲ್ಲಿ ಬೆಳಕು ಮೂಡಿದಾಗ ನಾವೆಲ್ಲರೂ ಸಂಭ್ರಮದಿಂದ ಕುಣಿದಾಡಿದೆವು ಎಂದು ಹೇಳಿದರು. – ಪಣಿಯೇರವರ ಸಿ. ರಾಮು

ತಲೆಮಾರುಗಳಿಂದ ಇಲ್ಲಿಯೇ ವಾಸಿಸುತ್ತಿರುವ ನಿವಾಸಿಗಳು, ಈಗಷ್ಟೇ ನೈಜ ಅಭಿವೃದ್ಧಿಯನ್ನು ಕಾಣುತ್ತಿದ್ದೇವೆ ಎನ್ನುತ್ತಾರೆ. ಈ ಹಿಂದೆ ಪಡಿತರ ಚೀಟಿಯ ಮೂಲಕ ಸಿಗುತ್ತಿದ್ದ ಸೀಮೆಎಣ್ಣೆಯಿಂದ ದೀಪಗಳನ್ನು ಹಚ್ಚುತ್ತಿದ್ದೆವು. ಆದರೆ, ಅರಣ್ಯ ಇಲಾಖೆ ಎಲ್‌ಪಿಜಿ ಸಿಲಿಂಡರ್‌ಗಳನ್ನು ಒದಗಿಸಲು ಆರಂಭಿಸಿದ ಬಳಿಕ ಸೀಮೆಎಣ್ಣೆ ಪೂರೈಕೆ ಸ್ಥಗಿತಗೊಂಡಿತು. ಇದರಿಂದ ಮನೆಗಳಲ್ಲಿ ದೀಪ ಹಚ್ಚುವುದಕ್ಕೂ ಪರದಾಡುವಂತಾಯಿತು ಎಂದು ರಾಮು ವಿವರಿಸಿದರು. ಆದರೆ, ಹಾಡಿಗಳಲ್ಲಿರುವ ಯರವ ಸಮುದಾಯದವರು ಇನ್ನೂ ಶಾಶ್ವತ ಮನೆಗಳಿಗಾಗಿ ಕಾಯುತ್ತಿದ್ದಾರೆ. ವಿದ್ಯುತ್ ಮೀಟರ್ ಬೋರ್ಡ್‌ಗಳನ್ನು ಅಳವಡಿಸಲಾಗಿದ್ದರೂ, ಅನೇಕ ಕುಟುಂಬಗಳು ಇಂದಿಗೂ ಟಾರ್ಪಾಲಿನ್‌ನಿಂದ ನಿರ್ಮಿಸಿದ ತಾತ್ಕಾಲಿಕ ಗುಡಿಸಲುಗಳಲ್ಲೇ ವಾಸಿಸುತ್ತಿವೆ. ಆದಿವಾಸಿ ಸಮುದಾಯಕ್ಕೆ ಸೇರಿದ ಜೇನು ಕುರುಬರಿಗೆ ಐಟಿಡಿಪಿ ಇಲಾಖೆ ಮೂಲಕ ಸರ್ಕಾರಿ ಸೌಲಭ್ಯಗಳನ್ನು ಆದ್ಯತೆಯ ಮೇರೆಗೆ ಒದಗಿಸಲಾಗುತ್ತಿದೆ. ಈ ಹಿಂದೆ ಐಟಿಡಿಪಿ ಇಲಾಖೆಯ ವ್ಯಾಪ್ತಿಯಲ್ಲಿದ್ದ ಪಣಿಯೇರ ಯರವ ಮತ್ತು ಪಂಜಾರಿ ಯರವ ಸಮುದಾಯಗಳನ್ನು ಬಳಿಕ ವಾಲ್ಮೀಕಿ ನಿಗಮಕ್ಕೆ ವರ್ಗಾಯಿಸಲಾಗಿದ್ದು, ಈಗ ಅಲೆಮಾರಿ ನಿಗಮದ ವ್ಯಾಪ್ತಿಗೆ ಸೇರಿಸಲಾಗಿದೆ ಎಂದು ಹೇಳಿದರು. ಜೇನು ಕುರುಬರಿಗೆ ಆದ್ಯತೆಯ ಮೇರೆಗೆ ಸೌಲಭ್ಯಗಳು ಸಿಗುತ್ತಿವೆ. ಆದರೆ, ಹಾಡಿಯ ಯರವ ಸಮುದಾಯದವರು ಇನ್ನೂ ಶಾಶ್ವತ ಮನೆಗಳಿಗಾಗಿ ಕಾಯುತ್ತಿದ್ದಾರೆ. 2012ರಲ್ಲಿ ಯರವ ಸಮುದಾಯದವರಿಗೆ ಮಂಜೂರಾದ 25ಕ್ಕೂ ಹೆಚ್ಚು ಮನೆಗಳ ಕಾಮಗಾರಿ ಇಂದಿಗೂ ಪೂರ್ಣಗೊಂಡಿಲ್ಲ. ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಅಲೆಯುತ್ತಾ, ನಾವು ನಿಜವಾದ 'ಅಲೆಮಾರಿಗಳಂತೆ' ಬದುಕುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

### ಸಮಸ್ಯೆಗಳಿಗೆ ಪರಿಹಾರ

ಹಾಡಿಗಳಿಗೆ ಸೌರ ದೀಪಗಳನ್ನು ಒದಗಿಸಲಾಗಿತ್ತು. ಆದರೆ, ಅವು ಹೆಚ್ಚು ಕಾಲ ಬಾಳಿಕೆ ಬರದೆ ಹಾಳಾದವು. ಇದರಿಂದಾಗಿ ಮಕ್ಕಳಿಗೆ ಓದಲು ತೊಂದರೆಯಾಗುತ್ತಿತ್ತು. ಇದೀಗ ವಿದ್ಯುತ್ ಸಂಪರ್ಕ ದೊರೆತಿರುವುದರಿಂದ ಸಮಸ್ಯೆಗಳಿಗೆ ಪರಿಹಾರ ಸಿಕ್ಕಂತಾಗಿದೆ.

# ಶ್ರೀರಂಗಪಟ್ಟಣದಲ್ಲಿ ಮೊದಲ ಬಾರಿಗೆ ದಸರಾ

• ಉದಯವಾಹಿನಿ, ಮಂಡ್ಯ

ಉದಯವಾಹಿನಿ ಚಿತ್ರ




ಐತಿಹಾಸಿಕ ಶ್ರೀರಂಗಪಟ್ಟಣದಲ್ಲಿ ಮೊದಲ ಬಾರಿಗೆ ಆಯೋಜಿಸಿರುವ ದಸರಾ ಯುವ ಸಂಭ್ರಮಕ್ಕೆ ಅದ್ದೂರಿ ಚಾಲನೆ ದೊರೆತಿದ್ದು, ಜಿಲ್ಲೆಯ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ನೃತ್ಯ ಪ್ರದರ್ಶನಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ದಸರಾ ಹಬ್ಬವು ಅಸತ್ಯದಿಂದ ಸತ್ಯದ ಕಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ಸಾಗುವ ಪಯಣದ ಸಂಕೇತವಾಗಿದೆ ಎಂದು ಖ್ಯಾತ ನಟಿ ಅದಿತಿ ಪ್ರಭುದೇವ್ ಅಭಿಪ್ರಾಯ ಪಟ್ಟರು. ಯುವ ಪ್ರತಿಭೆಗಳಿಗೆ ಇಂತಹ ದೊಡ್ಡ ವೇದಿಕೆ ದೊರೆತಿರುವುದು ಅದೃಷ್ಟದ ಸಂಗತಿ. ಅನೇಕ ಪ್ರತಿಭೆಗಳು ತಮ್ಮ ಸಾಮರ್ಥ್ಯ ಪ್ರದರ್ಶಿಸಲು ಸೂಕ್ತ ವೇದಿಕೆಗಾಗಿ ಕಾಯುತ್ತಿರುವ ಸಂದರ್ಭದಲ್ಲಿ ಶ್ರೀರಂಗಪಟ್ಟಣದ ವಿದ್ಯಾರ್ಥಿಗಳಿಗೆ ಈ ಅವಕಾಶ ಲಭಿಸಿದೆ. ವಿದ್ಯಾರ್ಥಿಗಳು ಈ ವೇದಿಕೆಯನ್ನು ಸದುಪ ಯೋಗಪಡಿಸಿಕೊಂಡು ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಬೇಕು ಎಂದು ಅವರು ಕರೆ ನೀಡಿದರು.

ದಸರಾ ಉತ್ಸವದ ಐತಿಹಾಸಿಕ ಹಿನ್ನೆಲೆಯನ್ನು ಪ್ರಸ್ತಾಪಿಸಿದ ಅವರು, ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯರ ಕಾಲದಲ್ಲಿ ಆರಂಭವಾದ ದಸರಾ ಉತ್ಸವವನ್ನು ನಂತರ 16ನೇ ಶತಮಾನದಲ್ಲಿ ರಾಜ ಒಡೆಯರ್ ಅವರು ಶ್ರೀರಂಗಪಟ್ಟಣಕ್ಕೆ ತಂದರು. ಹೀಗಾಗಿ ದಸರಾ ಆಚರಣೆಯ ಇತಿಹಾಸದಲ್ಲಿ ಶ್ರೀರಂಗಪಟ್ಟಣಕ್ಕೆ ವಿಶೇಷ ಸ್ಥಾನವಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭಾರಾಣಿ ಅವರನ್ನು ಶ್ಲಾಘಿಸಿದ ಅದಿತಿ ಪ್ರಭುದೇವ್, ಮಹಿಳೆಯರು ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸುತ್ತಿರುವುದು ಮಹಿಳಾ ಸಬಲೀಕರಣದ ಸಂಕೇತವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

> ಶ್ರೀರಂಗಪಟ್ಟಣದಲ್ಲಿ ಇದೇ ಮೊದಲ ಬಾರಿಗೆ ಯುವ ಸಂಭ್ರಮ ಆಯೋಜಿಸಲಾಗಿದ್ದು, ಈ ಹಿಂದೆ ಶ್ರೀರಂಗಪಟ್ಟಣ ದಸರಾ ಉತ್ಸವವು ನಾಲ್ಕೈದು ದಿನಗಳಿಗೆ ಸೀಮಿತವಾಗಿತ್ತು ಎಂದು ತಿಳಿಸಿದರು. – ಜಿಲ್ಲಾಧಿಕಾರಿ ಡಾ. ಕುಮಾರ್

# ನಿರ್ಗಮಿತ ಜಿ.ಪಂ ಸಿಇಓ ಅವರಿಗೆ ಆತ್ಮೀಯ ಬೀಳ್ಕೊಡುಗೆ

• ಉದಯವಾಹಿನಿ, ಚಾಮರಾಜನಗರ

ಚಾಮರಾಜನಗರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಿಂದ ವರ್ಗಾವಣೆಗೊಂಡು ನಿರ್ಗಮಿಸಿದ ಮೋನಾ ರೋತ್ ಅವರಿಗೆ ಆತ್ಮೀಯ ಹಾಗೂ ಹೃದಯಸ್ಪರ್ಶಿ ಬೀಳ್ಕೊಡುಗೆ ನೀಡಲಾಯಿತು. ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತ್ ವತಿಯಿಂದ ಆಯೋಜಿಸಲಾಗಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ದಾರಿಯುದ್ದಕ್ಕೂ ಹೂಮಳೆ ಸುರಿಸುವ ಮೂಲಕ ನಿರ್ಗಮಿತರನ್ನು ಸಮಾರಂಭಕ್ಕೆ ಆತ್ಮೀಯವಾಗಿ ಬರಮಾಡಿಕೊಂಡರು. ಕಾರ್ಯಕ್ರಮ

ಉದಯವಾಹಿನಿ ಚಿತ್ರ



ಉದ್ದೇಶಿಸಿ ಮಾತನಾಡಿದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ಅವರು ನಿರ್ಗಮಿತ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಜಿಲ್ಲೆಯ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಾರೆ. ಕುಡಿಯುವ ನೀರಿನ ಯೋಜನೆ ಹಾಗೂ ಕಾಮಗಾರಿಗಳ ಪ್ರಗತಿಗೆ ಮೋನಾ ರೋತ್ ಅವರ ಕೊಡುಗೆ ಅನನ್ಯವಾಗಿದೆ. ಅವರ ಸೇವೆ ಚಾಮರಾಜನಗರ ಜಿಲ್ಲೆಗೆ ಇನ್ನೂ ಅಗತ್ಯವಾಗಿತ್ತು ಎಂದರು. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಜಿಲ್ಲೆ ಮುಂಚೂಣಿ ಸ್ಥಾನ ಕಾಯ್ದುಕೊಳ್ಳಲು ಮೋನಾ ರೋತ್ ಅವರ ಪರಿಶ್ರಮವಿದೆ. ಯೋಜನೆಗಳ ಪ್ರಗತಿಗಾಗಿ ಜಿಲ್ಲಾ ಗ್ಯಾರಂಟಿ ಸಮಿತಿಗೆ ಉತ್ತಮ ಸಹಕಾರ ನೀಡಿದ್ದರು. ಗ್ಯಾರಂಟಿ ಯೋಜನೆಗಳ ರಾಜ್ಯಮಟ್ಟದ ಸಭೆಗಳಲ್ಲಿಯೂ ಅವರು ಜಿಲ್ಲೆಯ ಪರವಾಗಿ ಉತ್ತಮ ಕೆಲಸ ಮಾಡಿದ್ದಾರೆ. ಮುಂದಿನ ವೃತ್ತಿಜೀವನದಲ್ಲಿ ಇನ್ನೂ ಹೆಚ್ಚಿನ ಯಶಸ್ಸು ದೊರೆಯಲಿ ಎಂದು ಎಚ್.ವಿ. ಚಂದ್ರು ಅವರು ಹಾರೈಸಿದರು.

# 13 ವರ್ಷಗಳಿಂದ ಸ್ವಚ್ಛಗೊಳ್ಳದ ಚರಂಡಿ: ನಿವಾಸಿಗಳ ಆಕ್ರೋಶ

• ಉದಯವಾಹಿನಿ, ಕೆಜಿಎಫ್

ಕಳೆದ 13 ವರ್ಷಗಳಿಂದ ಚರಂಡಿ ಸ್ವಚ್ಛಗೊಳಿಸದ ಪರಿಣಾಮ ಕೊಳಚೆ ನೀರು ಸಾಗಿದೆ, ದುರ್ವಾಸನೆ ಹರಡುತ್ತಿದೆ, ಸೊಳ್ಳೆಗಳ ಕಾಟವಾಗಿದೆ. ಮನೆಗಳ ಕೊಳಚೆ ನೀರು ಸರಾಗವಾಗಿ ಹರಿಯದಿರುವುದರಿಂದ ಸಮಸ್ಯೆ ಉಲ್ಬಣಗೊಂಡಿದ್ದು, ಕೊಳಚೆ ನೀರು ಅಬ್ಬರಿಸುತ್ತಿದೆ ಎಂಬ ಗಂಭೀರ ಆರೋಪಗಳು ಕೇಳಿಬಂದಿವೆ. ನೂರಾರು ಮನವಿಗಳನ್ನು ನಗರಸಭೆಗೆ ಸಲ್ಲಿಸಿದರೂ ಪರಿಹಾರ ದೊರೆತಿಲ್ಲ ಎಂಬುದಕ್ಕೆ ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೆಜಿಎಫ್ ನಗರಸಭೆ ವ್ಯಾಪ್ತಿಯ 28ನೇ ವಾರ್ಡ್ ಮಾಧವ ರಸ್ತೆ ಮತ್ತು ಕುವೆಂಪು ರಸ್ತೆಯ ಮಧ್ಯದಲ್ಲಿ ಚರಂಡಿ ಸಂಪೂರ್ಣವಾಗಿ ಮಣ್ಣಿನಿಂದ ತುಂಬಿಸಿಕೊಂಡಿದ್ದು, ಕೊಳಚೆ ನೀರು ಹರಿಯಲು

ಉದಯವಾಹಿನಿ ಚಿತ್ರ



ಸಾಧ್ಯವಾಗದ ಪರಿಸ್ಥಿತಿಯಾಗಿದೆ. ಸ್ಥಳೀಯರ ಪ್ರಕಾರ, ಚರಂಡಿಯನ್ನು 13 ವರ್ಷದಷ್ಟು ಕಾಲ ಸಮರ್ಪಕವಾಗಿ ಸ್ವಚ್ಛಗೊಳಿಸಲಾಗಿಲ್ಲ.

ಮಣ್ಣು ಮತ್ತು ತ್ಯಾಜ್ಯದಿಂದ ಚರಂಡಿಯಲ್ಲಿರುವ ಕೊಳಚೆ ನೀರು ಸಂಗ್ರಹವಾಗುತ್ತಿದೆ. ಇದರಿಂದ ಮನೆಗಳಲ್ಲಿ ವಾಸಿಸುವ ಕುಟುಂಬಗಳು ದುರ್ವಾಸನೆ ಮತ್ತು ಸೊಳ್ಳೆಗಳ ಕಾಟವನ್ನು ಎದುರಿಸುತ್ತಿವೆ. ಸ್ವಚ್ಛತೆ ಕಾಪಾಡಬೇಕಾದ ನಗರಸಭೆ ನಿರ್ಲಕ್ಷಿಸುತ್ತಿರುವುದಾಗಿ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಚರಂಡಿ ಸಮಸ್ಯೆಯಿಂದ ಮುಕ್ತಿ ದೊರಕಿಸಲು ಸ್ಥಳೀಯ ನಿವಾಸಿಗಳು ಹಲವು ಮನವಿ ಸಲ್ಲಿಸಿದ್ದಾರೆ. ಆದರೆ, ವರ್ಷಗಳು ಕಳೆದರೂ ಸಮಸ್ಯೆ ಬಗೆಹರಿದಿಲ್ಲ. ಜನರ ಮೂಲಭೂತ ಸಮಸ್ಯೆಗಳ ದೊಡ್ಡ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಇರುವುದು ನಿಜಾಮಿಯ ಶಾಲೆ, 450 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಸೊಳ್ಳೆಗಳು ಮತ್ತು ದುರ್ವಾಸನೆ ಮಕ್ಕಳ ಆರೋಗ್ಯಕ್ಕೆ ಹಾನಿಯ ಲಕ್ಷಣ ತೋರಿಸುತ್ತಿವೆ ಎಂಬ ಆತಂಕವಿದೆ. ನಗರಸಭೆ ಅಧಿಕಾರಿಗಳು ಈಗಾಗಲೇ ಈ ಸಮಸ್ಯೆಗೆ ಸ್ಪಂದಿಸಿ ಶಾಶ್ವತ ಪರಿಹಾರಗಳನ್ನು ಕಲ್ಪಿಸುವಂತೆ ಕಾದು ನೋಡಬೇಕು.

# ಮದಕರಿ ನಾಯಕರ ಜಯಂತಿ ಆಚರಣೆ : ಧೈರ್ಯ, ಸಾಹಸದ ಪ್ರತೀಕ ವೀರ ನಾಯಕನ ಸ್ಮರಣೆ

• ಉದಯವಾಹಿನಿ, ಗುಂಡ್ಲುಪೇಟೆ

ಪಟ್ಟಣದಲ್ಲಿ ಜಾರಕಿಹೊಳಿ ಬ್ರಿಗೇಡ್ ವತಿಯಿಂದ ನಾಡದೊರೆ ಮದಕರಿ ನಾಯಕರ 324 ನೇ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮದಕರಿ ನಾಯಕರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದ ಪುರಸಭೆ ಮಾಜಿ ಉಪಾಧ್ಯಕ್ಷ ಶ್ರೀನಿವಾಸ್ ಕಣ್ಣಪ್ಪ, ಜಗತ್ತು ಕಂಡ ಅಪ್ರತಿಮ ಹೋರಾಟಗಾರರಾದ ಮದಕರಿ ನಾಯಕರು ಧೈರ್ಯ, ಸಾಹಸ, ಸ್ವಾಭಿಮಾನ ಹಾಗೂ ಪರಧರ್ಮ

ಉದಯವಾಹಿನಿ ಚಿತ್ರ



ಸಹಿಷ್ಣುತೆಗೆ ಹೆಸರಾಗಿದ್ದರು. ಇಂತಹ ಮಹನೀಯರನ್ನು ಸ್ಮರಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು. ನಾಯಕ ಸಮುದಾಯದ ಮುಖಂಡ ಹಾಗೂ ಸಾರಿಗೆ ಸಂಚಾರ ನಿಯಂತ್ರಕ ಎಸ್. ವಿಠಲ ಮಾತನಾಡಿ, ಮದಕರಿ ನಾಯಕರು ಶತ್ರುಗಳನ್ನು ಹಿಮ್ಮೆಟ್ಟಿಸಿ ಚಿತ್ರದುರ್ಗವನ್ನು 25 ವರ್ಷಗಳ ಕಾಲ ಆಳ್ವಿಕೆ ನಡೆಸಿದ ಜಾತ್ಯತೀತ ನಾಯಕರಾಗಿದ್ದರು. ಸಮಾಜಕ್ಕೆ ಅಮೂಲ್ಯ ಕೊಡುಗೆ ನೀಡಿದ ಆದರ್ಶ ಪುರುಷರ ತ್ಯಾಗ, ಬಲಿದಾನ ಹಾಗೂ ಸಾಧನೆಗಳನ್ನು ಸ್ಮರಿಸುವ ಮೂಲಕ ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜಾರಕಿಹೊಳಿ ಬ್ರಿಗೇಡ್ ಸಂಸ್ಥಾಪಕ ಗೋವಿನಾಯಕ್, ಮುಖಂಡರಾದ ನಾಗೇಂದ್ರ, ಪ್ರದೀಪ್, ಉಮೇಶ್, ಶಿವಕುಮಾರ್, ವೇಣು ಸಲಗಾರ್, ಬಾಲು, ರವಿ ಬಾಂಡ್, ಚೇತನ್, ವಿನು, ಮನೋಜ್, ಧನುಸ್, ಅರುಣ್, ಕೆಂಪರಾಜು, ಸೀನ, ಸುಕೃತ್, ಮೋನಿಸ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಅರಣ್ಯ ಇಲಾಖೆ ಹೆಸರಿನಲ್ಲಿದ್ದ 340 ಎಕರೆ ಗೋಮಾಳ!

## ರೈತರು ಮಂಗಳವಾರ ಗುಂಡ್ಲುಪೇಟೆ ಪಟ್ಟಣದಲ್ಲಿ ರಸ್ತೆ ತಡೆ ನಡೆಸಿ ಸರ್ಕಾರಗಳ ವಿರುದ್ಧ ಆಕ್ರೋಶ

• ಉದಯವಾಹಿನಿ, ಗುಂಡ್ಲುಪೇಟೆ

ಕಬ್ಬುಬೆಳೆದ ರೈತರಿಗೆ ಸೂಕ್ತ ಬೆಲೆ ಸಿಗುತ್ತಿಲ್ಲ ಎಂಬ ಅಸಮಾಧಾನ ಇದೀಗ ಬೀದಿಗಿಳಿದಿದೆ. ಪ್ರತಿ ಟನ್ ಕಬ್ಬಿಗೆ ರೂ5,500 ಬೆಲೆ ನಿಗದಿಪಡಿಸಬೇಕೆಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಚುನ್ನಪ್ಪ ಪೂಜಾರಿ ಬಣದ ರೈತರು ಮಂಗಳವಾರ ಗುಂಡ್ಲುಪೇಟೆ ಪಟ್ಟಣದಲ್ಲಿ ರಸ್ತೆ ತಡೆ ನಡೆಸಿ ಸರ್ಕಾರಗಳ ವಿರುದ್ಧ ಆಕ್ರೋಶ ಹೊರಹಾಕಿದರು.

1 ಸರ್ಕಾರಗಳ ವಿರುದ್ಧ ಆಕ್ರೋಶ
2 ಪ್ರಹ್ಲಾದ್ ಜೋಶಿ ವಿರುದ್ಧವೂ ವಾಗ್ದಾಳಿ
3 ರೈತರ ನ್ಯಾಯಯುತ ಬೇಡಿಕೆ

ಪಟ್ಟಣದ ಪ್ರವಾಸಿ ಮಂದಿರದಿಂದ ಮೆರವಣಿಗೆಯಲ್ಲಿ ಸಾಗಿದ ಪ್ರತಿಭಟನಾಕಾರರು ಊಟಿ ಗೇಟ್ ಬಳಿ ಮಾನವ ಸರಪಳಿ ನಿರ್ಮಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆಗಳನ್ನು ಕೂಗಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ವಿರುದ್ಧವೂ ವಾಗ್ದಾಳಿ ನಡೆಸಿದರು.

ರೈತ ಸಂಘದ ತಾಲ್ಲೂಕು ಅಧ್ಯಕ್ಷ ಪ್ರಭುಸ್ವಾಮಿ ಮಾತನಾಡಿ, ರೈತರ ಬದುಕು ಹಸನಾಗಿಸುವ ಮಾತುಗಳನ್ನಾಡುವ ಸರ್ಕಾರಗಳು, ಅವರ ಸಂಕಷ್ಟಕ್ಕೆ ಪರಿಹಾರ ಕಲ್ಪಿಸುವಲ್ಲಿ ವಿಫಲವಾಗಿವೆ ಎಂದು ಅಸಮಾಧಾನ

ಉದಯವಾಹಿನಿ ಚಿತ್ರ



ವ್ಯಕ್ತಪಡಿಸಿದರು. ಕಬ್ಬಿಗೆ ಪ್ರತಿ ಟನ್‌ಗೆ 5,500 ಬೆಲೆ ನೀಡಬೇಕೆಂಬುದು ರೈತರ ನ್ಯಾಯಯುತ ಬೇಡಿಕೆಯಾಗಿದೆ. ಬೆವರು ಸುರಿಸಿ ಬೆಳೆದ ಬೆಳೆಗೆ ಸೂಕ್ತ ಬೆಲೆ ಪಡೆಯುವುದು ರೈತರ ಹಕ್ಕು. ಆದರೆ, ರೈತರ ಹಕ್ಕನ್ನೇ ನಿರ್ಲಕ್ಷಿಸಿದರೆ ಕೃಷಿ ವೃತ್ತಿಯನ್ನು ನಂಬಿಕೊಂಡಿರುವವರು ಬದುಕು ನಡೆಸುವುದಾದರೂ ಹೇಗೆ ಎಂದು ಪ್ರಶ್ನಿಸಿದರು.

ಗೊಬ್ಬರ, ಕೂಲಿ ಕಾರ್ಮಿಕರು ಸೇರಿದಂತೆ ಕೃಷಿ ಚಟುವಟಿಕೆಗಳ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಕೃಷಿಗಾಗಿ ರೈತರು ಸಾವಿರಾರು ರೂಪಾಯಿ ಖರ್ಚು ಮಾಡುತ್ತಿದ್ದರೂ, ಬೆಳೆದ ಬೆಳೆಗೆ ನಿರೀಕ್ಷಿತ ಬೆಲೆ ಸಿಗದಿರುವುದು ಸಂಕಷ್ಟಕ್ಕೆ ದೂಡುತ್ತಿದೆ. ಈ ಹಿನ್ನೆಲೆಯಲ್ಲಿ ಕೇಂದ್ರ, ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಕಬ್ಬಿಗೆ ಪ್ರತಿ ಟನ್‌ಗೆ ರೂ 5,500 ಬೆಲೆ ನಿಗದಿಪಡಿಸಬೇಕು. ರಾಜ್ಯ ಸರ್ಕಾರವೂ ರೈತರ ಪರ ನಿಂತು ಕೇಂದ್ರದ ಮೇಲೆ ಒತ್ತಡ ಹೇರಬೇಕು ಎಂದು ಒತ್ತಾಯಿಸಿದರು.

ರೈತರ ಹೋರಾಟವನ್ನು ಕಡೆಗಣಿಸದೆ, ಕಬ್ಬಿಗೆ ಸೂಕ್ತ ಬೆಲೆ ನಿಗದಿ ಹಾಗೂ ಬರ ಪರಿಹಾರದ ವಿಚಾರದಲ್ಲಿ ಸರ್ಕಾರಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ರೈತರ ಸಂಕಷ್ಟ ಮತ್ತಷ್ಟು ಹೆಚ್ಚಾಗಲಿದೆ ಎಂದು ಎಚ್ಚರಿಸಿದರು. ಪ್ರತಿಭಟನೆಯ ಬಳಿಕ ಚಾಮರಾಜನಗರ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್ ಅವರ ಮೂಲಕ ಕೇಂದ್ರ, ಸಚಿವ ಪ್ರಹ್ಲಾದ್ ಜೋಶಿ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ರೈತ ಸಂಘದ ತಾಲ್ಲೂಕು ಉಪಾಧ್ಯಕ್ಷ ಶಿವರಾಜು, ಗೌರವಾಧ್ಯಕ್ಷ ಸಿದ್ದಯ್ಯ, ತಾಲ್ಲೂಕು ಮಹಿಳಾ ಅಧ್ಯಕ್ಷೆ ಪ್ರೇಮ, ಪ್ರಧಾನ ಕಾರ್ಯದರ್ಶಿ ಆನಂದ್, ತೆರಕಣಾಂಬಿ ಹೋಬಳಿ ಉಪಾಧ್ಯಕ್ಷ ಶಿವಪ್ರಸಾದ್, ಹಸಿರು ಸೇನೆ ಅಧ್ಯಕ್ಷ ಹೊನ್ನಶೆಟ್ಟರಹುಂಡಿ ಸುರೇಶ್, ಹುಚ್ಚನಾಯಕ ಸೇರಿದಂತೆ ಹಲವರು ಭಾಗವಹಿಸಿದ್ದರು.

### ಎಕರೆಗೆ 2,500 ಬರ ಪರಿಹಾರ; ರೈತರ ಆಕ್ರೋಶ

ತೆರಕಣಾಂಬಿ ಹೋಬಳಿ ಅಧ್ಯಕ್ಷ ಕುಮಾರ್ ಮಾತನಾಡಿ, ಸಕಾಲದಲ್ಲಿ ಮಳೆಯಾಗದೆ ರೈತರು ಬರದ ಸಂಕಷ್ಟಕ್ಕೆ ಸಿಲುಕಿದ್ದು, ಈಗಾಗಲೇ ಸಾಲದ ಹೊರೆ ಹೆಚ್ಚಾಗಿದೆ. ಇಂತಹ ಸಂದರ್ಭದಲ್ಲಿ ಎಕರೆಗೆ ಕೇವಲ 2,500 ಬರ ಪರಿಹಾರ ನೀಡಿರುವುದು ರೈತರಿಗೆ ಮಾಡಿದ ಅವಮಾನ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಿಸಿಲು, ಮಳೆ ಎನ್ನದೆ ದುಡಿದು ದೇಶಕ್ಕೆ ಅನ್ನ ನೀಡುವ ರೈತರಿಗೆ ಅಲ್ಪ ಪ್ರಮಾಣದ ಪರಿಹಾರ ನೀಡಿದರೆ ಅವರ ಸಂಕಷ್ಟ ಹೇಗೆ ದೂರವಾಗುತ್ತದೆ ಎಂದು ಪ್ರಶ್ನಿಸಿದರು. ರೈತರ ಹೆಸರಿನಲ್ಲಿ ಅಧಿಕಾರಕ್ಕೆ ಬರುವ ಜನಪ್ರತಿನಿಧಿಗಳು ಅನ್ನದಾತರ ಬದುಕು ಮತ್ತು ಕೃಷಿಯ ಭವಿಷ್ಯದ ಬಗ್ಗೆ ದೂರದೃಷ್ಟಿಯಿಂದ ಚಿಂತಿಸಬೇಕು ಎಂದು ಆಗ್ರಹಿಸಿದರು.

# ಮಿನಿ ನ್ಯೂಸ್

## ಅರಮನೆ ಆವರಣದಲ್ಲಿ ರಂಗೋಲಿ ಚಿತ್ತಾರ

• ಉದಯವಾಹಿನಿ, ಮೈಸೂರು

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆ ಆವರಣದಲ್ಲಿ ಮಂಗಳವಾರ ರಾಜ್ಯ ಮಟ್ಟದ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ್ದ 265ಕ್ಕೂ ಹೆಚ್ಚು ಸ್ಪರ್ಧಿಗಳು ಸ್ಪರ್ಧೆಯಲ್ಲಿ ಪಾಲ್ಗೊಂಡು ತಮ್ಮ ಕಲಾಪ್ರತಿಭೆಯನ್ನು ಅನಾವರಣಗೊಳಿಸಿದರು. ಅರಮನೆಯ ಮುಂಭಾಗದಲ್ಲಿ ಮೂಡಿಬಂದ ಬಣ್ಣಬಣ್ಣದ ರಂಗೋಲಿ ಚಿತ್ತಾರಗಳು ಪ್ರವಾಸಿಗರ ಗಮನ ಸೆಳೆದವು.

ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಅವರು ಸ್ಪರ್ಧೆಯನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ನವರಾತ್ರಿ ಸಂದರ್ಭದಲ್ಲಿ ಮಹಿಳೆಯರು ಉತ್ಸಾಹದಿಂದ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿರುವುದು ಸಂತಸದ ಸಂಗತಿ. ರಂಗೋಲಿ ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯದ ಪ್ರತೀಕವಾಗಿದ್ದು, ಇಂತಹ ಸ್ಪರ್ಧೆಗಳು ಮಹಿಳೆಯರ ಸೃಜನಶೀಲತೆ ಹಾಗೂ ಕಲಾಪ್ರತಿಭೆಯನ್ನು ಅನಾವರಣಗೊಳಿಸಲು ಉತ್ತಮ ವೇದಿಕೆಯಾಗಿವೆ ಎಂದರು. ಕೇಂದ್ರ ಸರ್ಕಾರ ಕರ್ನಾಟಕದ ರಾಜ್ಯಪಾಲರಾಗಿ ಮಹಿಳೆಯರನ್ನು ನೇಮಿಸುವ ಮೂಲಕ ಮಹಿಳೆಯರಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿದೆ ಎಂದು ಅವರು ಉಲ್ಲೇಖಿಸಿದರು. ಸ್ಪರ್ಧೆಯಲ್ಲಿ ಮೈಸೂರಿನ 63 ವರ್ಷದ ಸರಸಮ್ಮ (ಸ್ಪರ್ಧಿ ಸಂಖ್ಯೆ 186) ಪ್ರಥಮ ಬಹುಮಾನ ಗಳಿಸಿದರು.

ಶ್ರೀರಂಗಪಟ್ಟಣ ತಾಲ್ಲೂಕಿನ ಗಾಮಿನಹಳ್ಳಿಯ ಸಾವಿತ್ರಿ (ಸ್ಪರ್ಧಿ ಸಂಖ್ಯೆ 56) ದ್ವಿತೀಯ ಹಾಗೂ ವಿಜಯನಗರದ ಮಾಲಾ (ಸ್ಪರ್ಧಿ ಸಂಖ್ಯೆ 74) ತೃತೀಯ ಬಹುಮಾನ ಪಡೆದುಕೊಂಡರು.

## ಸಹಕಾರ ಸಂಘಗಳಿಗೆ ಅನಗತ್ಯ ಕಿರುಕುಳ ವಿರೋಧಿಸಿ ಪ್ರತಿಭಟನೆ

• ಉದಯವಾಹಿನಿ, ಕೆ.ಆರ್.ಪೇಟೆ.

ಪಟ್ಟಣದ ಹೊರವಲಯದಲ್ಲಿರುವ ಮನ್ ಮುಲ್ ಹಾಲು ಶಿಥಲೀಕರಣ ಘಟಕದ ಉಪ ಕೇಂದ್ರದಲ್ಲಿ ಹಾಲು ಪೂರೈಕೆ ಮಾಡುವ ಸಹಕಾರ ಸಂಘಗಳಿಗೆ ಅನಗತ್ಯ ತೊಂದರೆ ನೀಡುತ್ತಿದ್ದು ರೈತ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳ ಕಾರ್ಯದರ್ಶಿಗಳು ಮತ್ತು ಹಾಲು ಪರೀಕ್ಷಕರಿಗೆ ಅನಗತ್ಯ ಕಿರುಕುಳವಾಗುತ್ತಿದ್ದು ಇದನ್ನು ತಕ್ಷಣವೇ ನಿಲ್ಲಿಸಬೇಕು. ಎಸ್.ಎನ್.ಎಫ್ ಹೆಸರಿನಲ್ಲಿ ರೈತರು ಪೂರೈಕೆ ಮಾಡಿದ ಶುದ್ಧ ಹಾಲಿಗೂ ಕಳಪೆ ಹಣೆಪಟ್ಟಿ ಹಚ್ಚಿ ರೈತರಿಗೆ ಅನ್ಯಾಯ ಮಾಡುತ್ತಿದ್ದು ಇದರಿಂದ ರೈತ ಸಮುದಾಯಕ್ಕೆ ಆಗಿರುವ ನಷ್ಟವನ್ನು ಭರಿಸಿಕೊಡಬೇಕು ಹಾಗೂ ಪಕ್ಷಪಾತ ನೀತಿಯ ಮೂಲಕ ರೈತರಿಗೆ ವಂಚನೆ ಮಾಡಿರುವ ಸೂಪರ್ ವೈಸರ್ ಗಳನ್ನು ತಕ್ಷಣವೇ ಅಮಾನತ್ತು ಮಾಡಿ ವಿಚಾರಣೆಗೆ ಒಳಪಡಿಸುವಂತೆ ಆಗ್ರಹಿಸಿ ತಾಲ್ಲೂಕು ಜೆಡಿಎಸ್ ಪಕ್ಷದ ವತಿಯಿಂದ ಪಟ್ಟಣದ ಹೊರವಲಯದಲ್ಲಿರುವ ಮನ್ ಮುಲ್ ಹಾಲು ಶಿಥಲೀಕರಣ ಘಟಕದ ಉಪ ಕೇಂದ್ರದಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಮಲ್ಲೇನಹಳ್ಳಿ ಮೋಹನ್ ನೇತೃತ್ವದಲ್ಲಿ ಮನ್ ಮುಲ್ ಉಪ ಕೇಂದ್ರಕ್ಕೆ ಜೆಡಿಎಸ್ ಕಾರ್ಯಕರ್ತರು ಮುತ್ತಿಗೆ ಹಾಕಿದರು. ಈ ಸಂದರ್ಭದಲ್ಲಿ ಪೊಲೀಸರು ಪ್ರತಿಭಟನಾಕಾರರನ್ನು ಕೇಂದ್ರದ ಒಳಗೆ ಬಿಡದೆ ಬಾಗಿಲಿನಲ್ಲಿಯೇ ತಡೆದು ನಿಲ್ಲಿಸಿದರು. ಇದರಿಂದ ಆಕ್ರೋಶಗೊಂಡ ಜೆಡಿಎಸ್ ಕಾರ್ಯಕರ್ತರು ಪೊಲೀಸರ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಿ ಮೈಸೂರು–ಚನ್ನರಾಯಪಟ್ಟಣ ಮುಖ್ಯ ರಸ್ತೆಯಲ್ಲಿಯೇ ಶಾಮಿಯಾನ ಹಾಕಿ ಪ್ರತಿಭಟನೆಗೆ ಮುಂದಾದರು.

## ಮಹಿಳೆಯರೇ ಸಮಾಜದ ಶಕ್ತಿ: ಡಾ. ಯತೀಂದ್ರ ಸಿದ್ದರಾಮಯ್ಯ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಮೈಸೂರು

ಮಹಿಳೆಯರೇ ಈ ಸಮಾಜದ ಶಕ್ತಿ ಮತ್ತು ಕುಟುಂಬದ ಆಧಾರ ಸ್ತಂಭ. ಹಾಗಾಗಿ ಮಹಿಳೆಯರಿಗೆ ಎಲ್ಲಾ ಕ್ಷೇತ್ರಗಳಲ್ಲಿ ಹೆಚ್ಚಿನ ಅವಕಾಶ ಸಿಗಬೇಕು ಎಂದು ನಗರಾಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು. ನಗರದ ಜೆ.ಕೆ. ಮೈದಾನದಲ್ಲಿ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ಆಯೋಜಿಸಿದ್ದ ಮಹಿಳಾ ದಸರಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹಿಂದಿನ ಕಾಲದಿಂದಲೂ ಮಹಿಳೆಯರಿಗೆ ಸಮಾನ ಅವಕಾಶಗಳು ಸಿಕ್ಕಿಲ್ಲ. ಸರಿಯಾದ ಅವಕಾಶ ಸಿಕ್ಕರೆ ಮಹಿಳೆಯರ ಶಕ್ತಿ ಏನೆಂಬುದು ಎಲ್ಲರಿಗೂ ತಿಳಿಯುತ್ತದೆ ಎಂದು ಅವರು ಪ್ರಶಂಸೆ ವ್ಯಕ್ತಪಡಿಸಿದರು. ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರಂತಹ ಮಹಾನ್ ನಾಯಕರು ಮಹಿಳೆಯರ ಸಮಾನತೆಗಾಗಿ ಹೋರಾಟ ಮಾಡಿದ್ದಾರೆ. ಸಂವಿಧಾನದ ಮೂಲಕ ಇಂದು ಮಹಿಳೆಯರಿಗೆ ಉನ್ನತ ಸ್ಥಾನಗಳು ದೊರೆಯುತ್ತಿವೆ. ಆದರೂ ಹಲವೆಡೆ ಮಹಿಳೆಯರಿಗೆ ಪುರುಷರಷ್ಟು ಸ್ವಾತಂತ್ರ್ಯವಿಲ್ಲದಿರುವುದು ದುರದೃಷ್ಟಕರ. ಮುಂದಾದರೂ ಮಹಿಳೆಯರಿಗೆ ಸಮಾನ ಅವಕಾಶ ಸಿಗಬೇಕು. ಅಕ್ಟೋಬರ್ 16ರವರೆಗೆ ನಡೆಯುವ ಮಹಿಳಾ ದಸರಾದಲ್ಲಿ ಎಲ್ಲಾ ಮಹಿಳೆಯರು ಭಾಗವಹಿಸಿ ದಸರಾ ಸಂಭ್ರಮಿಸಬೇಕು ಎಂದು ಶುಭ ಕೋರಿದರು. ರೇಷ್ಮೆ ಮತ್ತು ಪಶುಸಂಗೋಪನಾ ಸಚಿವ ಸಿ. ಪುಟ್ಟರಂಗಶೆಟ್ಟಿ ಮಾತನಾಡಿ, ದಸರಾ ಎಂದರೆ ಚಾಮುಂಡೇಶ್ವರಿ ತಾಯಿಯ ಹಬ್ಬ. ಹಾಗಾಗಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಇದು ನಿಮ್ಮದೇ ಕಾರ್ಯಕ್ರಮ, ಯಾವುದಕ್ಕೂ ಹಿಂಜರಿಯಬಾರದು ಎಂದು ಶುಭ ಹಾರೈಸಿದರು.

## ಭಿನ್ನಾಭಿಪ್ರಾಯ ಬದಿಗಿಟ್ಟು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿ; ಸುಧಾಕರ್



ಉದಯವಾಹಿನಿ ಚಿತ್ರ

• ಉದಯವಾಹಿನಿ, ಶಿಡ್ಲಘಟ್ಟ,

ಮುಂಬರುವ ತಾಲ್ಲೂಕು ಪಂಚಾಯಿತಿ, ನಗರಸಭೆ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮುಖಂಡರು ಹಾಗೂ ಕಾರ್ಯಕರ್ತರು ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು ಎಂದು ಚಿಂತಾಮಣಿ ಶಾಸಕ ಎಂ.ಸಿ. ಸುಧಾಕರ್ ಕರೆ ನೀಡಿದರು. ತಾಲ್ಲೂಕಿನ ಹಂಡಿಗನಾಳ ಗ್ರಾಮದ ಮಾಜಿ ಸಚಿವ ವಿ. ಮುನಿಯಪ್ಪ ಸ್ವಗೃಹದಲ್ಲಿ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿದ್ದ ಪದವೀಧರರ ಅಭ್ಯರ್ಥಿ ಗೆಲುವಿನ ಕುರಿತ ಸಭೆಯಲ್ಲಿ ಅವರು ಮಾತನಾಡಿದರು. ಅಕ್ಟೋಬರ್ 23ರಂದು ನಡೆಯಲಿರುವ ಆಗ್ನೇಯ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆ ಮಠ್ ಅವರಿಗೆ ಪದವೀಧರರು ಬೆಂಬಲ ನೀಡುವ ಮೂಲಕ ಗೆಲುವಿಗೆ ಸಹಕರಿಸಬೇಕು.

ಕಾಂಗ್ರೆಸ್ ಸರ್ಕಾರವು ಪದವೀಧರರು ಹಾಗೂ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ವಿವಿಧ ಯೋಜನೆಗಳನ್ನು ಜಾರಿಗೆ ತಂದಿದ್ದು, ಅವುಗಳ ಸದುಪಯೋಗ ಪಡೆದುಕೊಂಡು ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಬೇಕು. ಕಾಂಗ್ರೆಸ್ ಮುಖಂಡ ಡಾ. ಶಶಿಧರ್ ವಿ. ಮುನಿಯಪ್ಪ ಮಾತನಾಡಿ ಸದ್ಯದ ಪರಿಸ್ಥಿತಿಯಲ್ಲಿ ನಮ್ಮ ಗಮನ ಕಾಂಗ್ರೆಸ್ ಪಕ್ಷವನ್ನು ಒಗ್ಗೂಡಿಸುವುದರ ಮೇಲಿದೆ. 2028 ರ ವಿಧಾನಸಭೆ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ರಾಜ್ಯದ ಹೈಕಮಾಂಡ್‌ಗೆ ಬಿಟ್ಟ ವಿಚಾರವಾಗಿದೆ ಎಂದರು.

ಅಂತರಾಳದಿಂದ...
EDITORIAL

# ದಿಲ್ಲಿಯ ಸುರಕ್ಷೆ ದೃಷ್ಟಿಯಿಂದ ಕೇಂದ್ರದ ನಿರ್ಧಾರ ಸ್ವಾಗತಾರ್ಹ



ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ಕಳೆದ ಕೆಲವು ತಿಂಗಳುಗಳಿಂದೀಚೆಗೆ ಸರಕಾರದ ವಿರೋಧಿ ಪ್ರತಿಭಟನೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಈ ಹಿಂದೆ ಸಾರ್ವಜನಿಕ ಪ್ರತಿಭಟನೆಗೆಂದು ಗುರುತಿಸಲಾಗಿದ್ದ ಜಂತರ್‌ಮಂತರ್ ಪ್ರದೇಶದಲ್ಲಿ ಇನ್ನು ಮುಂದೆ ಯಾವುದೇ ತೆರನಾದ ಪ್ರತಿಭಟನೆ, ಧರಣಿ ನಡೆಸುವುದನ್ನು ನಿರ್ಬಂಧಿಸಿ ದಿಲ್ಲಿ ಪೊಲೀಸ್ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಪ್ರತಿಭಟನೆಗೆ ಸೂಕ್ತ ಭದ್ರತೆ ಒದಗಿಸುವ ಉದ್ದೇಶದಿಂದ ಭಾರೀ ಸಂಖ್ಯೆಯಲ್ಲಿ ಪೊಲೀಸರ ನಿಯೋಜನೆ, ಕಟ್ಟುನಿಟ್ಟಿನ ತಪಾಸಣೆ ಮತ್ತಿತರ ಬಿಗಿ ಕ್ರಮಗಳಿಂದಾಗಿ ಜನತೆ ಸಂಕಷ್ಟಕ್ಕೆ ಒಳಗಾಗುವಂತಾಗಿದೆ. ಜಂತರ್‌ಮಂತರ್‌ನಂತಹ ಜನನಿಬಿಡ ಪ್ರದೇಶದಲ್ಲಿ ಈ ತೆರನಾದ ಬೃಹತ್ ಪ್ರತಿಭಟನೆಗಳು ನಡೆಯುವುದರಿಂದ ಸಹಜವಾಗಿ ಭದ್ರತೆಯ ಪ್ರಶ್ನೆಗಳು ಕೂಡ ಎದುರಾಗುತ್ತವೆ. ಈ ಹಿಂದೆಯೂ ಜಂತರ್‌ಮಂತರ್‌ನಲ್ಲಿ ಪ್ರತಿಭಟನೆಗೆ ಅನುಮತಿ ನೀಡಬಾರದು ಎಂಬ ಆಗ್ರಹಗಳು ಕೇಳಿ ಬಂದಿದ್ದವು. ಇತ್ತೀಚಿನ ದಿನಗಳಲ್ಲಂತೂ ತೀವ್ರತೆರನಾದ ಪ್ರತಿಭಟನೆಗಳು ನಡೆಯುತ್ತಿರುವುದರಿಂದ ಈ ವಿಷಯ ಮತ್ತೊಮ್ಮೆ ಮುನ್ನೆಲೆಗೆ ಬಂದಿತ್ತು. ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯನ್ನು ವಿರೋಧಿಸಿ ದಿಲ್ಲಿಯಲ್ಲಿ ನಡೆದ ಭಾರೀ ಪ್ರತಿಭಟನೆ ವೇಳೆ ನಡೆದ ಕೆಲವು ಅಹಿತಕಾರಿ ಘಟನೆಗಳ ಬಳಿಕ ಚುನಾವಣ ಆಯೋಗ ದೇಶಾದ್ಯಂತ ನಡೆಸಿರುವ ಎಸ್‌ಐಆರ್‌ನಲ್ಲಿನ ಗೊಂದಲಗಳ ಹೊಣೆಹೊತ್ತು ಮುಖ್ಯ ಚುನಾವಣ ಆಯುಕ್ತರ ರಾಜೀನಾಮೆಗೆ ಆಗ್ರಹಿಸಿ ಈಗ ನಡೆಯುತ್ತಿರುವ ಪ್ರತಿಭಟನೆಯ ಸಂದರ್ಭದಲ್ಲಿ ದಿಲ್ಲಿ ಪೊಲೀಸರು ಈ ನಿರ್ಧಾರ ಕೈಗೊಂಡಿದ್ದಾರೆ. ಪ್ರತಿಭಟನೆ ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ ಗೃಹ ಖಾತೆ ಈ ನಿರ್ಧಾರ ಕೈಗೊಂಡಿರುವುದು ರಾಜಕೀಯವಾಗಿ ಒಂದಿಷ್ಟು ಚರ್ಚೆಗೆ ಗ್ರಾಸವಾಗಿದ್ದರೂ ದಿಲ್ಲಿ ನಗರದ ಮತ್ತು ಜನತೆಯ ಸುರಕ್ಷೆಯ ದೃಷ್ಟಿಯಿಂದ ಇದು ಅತ್ಯಂತ ಸೂಕ್ತ ಮತ್ತು ಸಕಾಲಿಕ ನಿರ್ಧಾರವೇ ಸರಿ. ಈ ಹಿಂದೆಯೂ ದೇಶದ ವಿವಿಧೆಡೆ ಬೃಹತ್ ಪ್ರತಿಭಟನೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಹಿಂಸಾಚಾರ, ಅಹಿತಕರ ಘಟನೆಗಳು ನಡೆದ ನಿದರ್ಶನಗಳಿರುವು-ದರಿಂದ ಸದ್ಯದ ಪರಿಸ್ಥಿತಿಯಲ್ಲಿ ಅಗತ್ಯ ಮುನ್ನೆಚ್ಚರಿಕೆ ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಿರುವುದು ಕೇಂದ್ರ ಗೃಹ ಇಲಾಖೆಯ ಕರ್ತವ್ಯವೂ ಆಗಿದೆ.

> ದಿಲ್ಲಿಯ ಹೃದಯ ಭಾಗದಲ್ಲಿರುವ ಜಂತರ್‌ಮಂತರ್‌ನಲ್ಲಿ ಪ್ರತಿಭಟನೆ ನಡೆಸುವುದರಿಂದ ಸಂಚಾರ ವ್ಯವಸ್ಥೆಯ ಮೇಲೆ ಭಾರೀ ಪರಿಣಾಮ ಬೀರುತ್ತಿದೆ. ಇದೇ ವೇಳೆ ಇಂತಹ ಪ್ರತಿಭಟನೆಗಳಲ್ಲಿ ಭಾರೀ ಸಂಖ್ಯೆಯಲ್ಲಿ ಜನರು ಸೇರುವುದರಿಂದ ಅದನ್ನು ದೇಶವಿರೋಧಿ ಶಕ್ತಿಗಳು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಯೂ ಇರುವುದರಿಂದ ಕೇಂದ್ರ ಗೃಹ ಖಾತೆಯ ನಿರ್ಧಾರ ಕೇವಲ ದಿಲ್ಲಿಯ ಸುರಕ್ಷೆ ಮಾತ್ರವಲ್ಲದೆ ದೇಶದ ಭದ್ರತೆಯ ದೃಷ್ಟಿಯಿಂದಲೂ ಸ್ವಾಗತಾರ್ಹ. ಹೊಸದಿಲ್ಲಿಯ ಭದ್ರತ ವ್ಯವಸ್ಥೆಯ ಪರಾಮರ್ಶೆಗಾಗಿ ಕೇಂದ್ರ ಗೃಹ ಸಚಿವಾಲಯ ಉನ್ನತ ಮಟ್ಟದ ಸಮಿತಿಯ ಶಿಫಾರಸಿನ ಮೇರೆಗೆ ಈ ಆದೇಶ ಹೊರಡಿಸಿದೆ. ಕಳೆದ ಕೆಲವು ತಿಂಗಳುಗಳಿಂದ ರಾಜಧಾನಿ ದಿಲ್ಲಿಯಲ್ಲಿ ನಿರಂತರವಾಗಿ ಒಂದಲ್ಲ ಒಂದು ಪ್ರತಿಭಟನೆ ನಡೆಯುತ್ತಲೇ ಇದೆ.

ಹಾಗೆಂದು ಪ್ರತಿಭಟನೆಗಳನ್ನು ನಿರ್ಬಂಧಿಸುವ ಇಲ್ಲವೇ ತಡೆಯೊಡ್ಡುವಂತಹ ಪ್ರಯತ್ನಗಳಿಗೆ ಸರಕಾರ ಕೈಹಾಕಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ, ಪ್ರತಿಭಟನೆಗಳು ಅವಿಭಾಜ್ಯ ಭಾಗವಾಗಿವೆ. ಇವುಗಳಿಗೆ ಅವಕಾಶವೇ ಇಲ್ಲ ಎಂದಾದಲ್ಲಿ ಅದು ನಿರಂಕುಶ ಪ್ರಭುತ್ವಕ್ಕೆ ಹಾದಿ ಮಾಡಿಕೊಟ್ಟಂತಾಗುತ್ತದೆ.

ನ್ಯಾಯಸಮ್ಮತ ಬೇಡಿಕೆಗಳನ್ನು ಮುಂದಿರಿಸಿ ಶಾಂತಿಯುತ ಪ್ರತಿಭಟನೆ ನಡೆಸಲು ಮುಕ್ತ ಅವಕಾಶ ಮಾಡಿಕೊಡಬೇಕಿರುವುದು ಕೂಡ ಸರಕಾರದ ಜವಾಬ್ದಾರಿಯಾಗಿದೆ. ಪ್ರತಿಭಟನಾಕಾರರಿಗೆ ಸೂಕ್ತ ಭದ್ರತೆ, ಪ್ರತಿಭಟನೆಯನ್ನು ಯಾವುದೇ ದೇಶದ್ರೋಹಿ ಶಕ್ತಿಗಳು ಹೈಜಾಕ್ ಮಾಡದಂತೆ ನೋಡಿಕೊಳ್ಳುವುದು ಭದ್ರತ ವ್ಯವಸ್ಥೆಯ ಒಂದು ಭಾಗ ಎಂಬುದನ್ನು ಸರಕಾರ ಕೂಡ ಮರೆಯಬಾರದು.

# ರಾಮಾಯಣ



18. ರಾಮ-ಲಕ್ಷ್ಮಣರನು? ಇಂದಜಿತುವು ಸರ್ಪಾಸದಿಂದ ಕಿ ಹ ಈ ಕಟ್ಟಹಾಕುವುದು

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಲಾಕ್ಷಣಿಕರ ಮಾತುಗಳು ಸುಳ್ಳಾದುವೇ ಛಿದವಾಗದ ಅವಯವಗಳು, ಕೈಕಾಲುಗಳು ಹೊಳೆಯುವ ಬಣ್ಣದಿಂದ ಕೂಡಿ, ನಸುನಗೆಯಿಂದ ಶೋಭಿಸುವ ಕಾರಣದಿಂದ ರಾಜ್ಯಾಭಿಷೇಕವನ್ನು ಹೊಂದಿ ಸತತವಾಗಿ ಪತಿಯೊಡನೆ ಸುಖವಾಗಿ ಸಾಮ್ರಾಜ್ಯ ಭೋಗವನ್ನು ಅನುಭವಿಸುತ್ತಾಳೆ ಎಂದು ವಿಪ್ರೋತ್ತಮರು ವಿವರಿಸಿದ ಮಾತುಗಳೆಲ್ಲ ಸುಳ್ಳಿನ ಕಂತೆಯಾಯಿತಲ್ಲ ನೂರು ಯಜ್ಞಗಳನ್ನು ಮಾಡುವ ಗಂಡನ ಸತಿಯಾಗಿ ಹರುಷದಿಂದ ಚಿರವಾದ ಸೌಖ್ಯಸಂಪತ್ತನ್ನು ಅನುಭವಿಸುವೆಯೆಂದೂ, ಪತಿಯನ್ನು ಎಂದೆಂದಿಗೂ ಅಗಲದಿರುವೆ ಎಂದೂ ಹೇಳಿದ ವಿಪ್ರರ ನುಡಿಗಳು ಹುಸಿಯಾದುವಲ್ಲ! ಖರನೇ ಮೊದಲಾದ ರಕ್ಕಸರನ್ನು ತರಿದು, ಸಮುದ್ರವನ್ನು ದಾಟಿ ಬಂದು ರಕ್ಕಸ ರ ಬಾಣಗಳಿಗೆ ನೀನು ಅಸುಹಿಂಯಾಗದ್ದ ಹ ನೃಪವರ್ಯನೇ, ವರುಣ ಮರುತ ಅಗ್ನಿ ಇಂದ್ರ ಬ್ರಹ್ಮ ಮುಂತಾದವರ ಅಸ್ತಗಳೆಲ್ಲ ಏನಾದುವು, ದುರುಳ ದಾನವರ ಮಾಯೆಯಲ್ಲಿ, ಅಕಟಕಟ, ವಿಲೀನಗೊಂಡವೇ? ಎಷ್ಟುಸಮ ವಿಕ್ರಮನಾದ ನೀನು ನನ ದೌರ್ಭಾಗ್ಯವಶದಿಂದ ಹೀಗೆ ಮಲಗಬೇಕಾಯಿತೇ, ಶಿವ ಶಿವಾ! ವಿಧಿಯ ವಿಕೃತದ ಮುಂದೆ ಯಾರು ತಾನೇ ಏನು ಮಾಡಿಯಾರು? ಕರುಣಾಳುಗಳ ಮಹಾಬಲವು ವ್ಯರ್ಥವಾಯಿತು, ಸೂರ್ಯಕುಲದ ಏಳಿಗೆಯು ಮಸುಕಾಯಿತು. ಅಯ್ಯೋ, ಭರತ ಕೌಸಲ್ಯೆಯರಿಗೆ ಈ ಸುದ್ದಿಯು ತಿಳಿದರೆ ಅವರೂ ಎದೆಯೊಡೆದು ಅಳಿಯದಿಹರು' ಎಂದು ಅಪರಿಮಿತ ದುಃಖದಿಂದ ಗೋಳಾಡಿದಳು.

ಸೀತೆಯ ಶೋಕಾತಿರೇಕವನ್ನು ನೋಡಿ ತ್ರಿಜಟೆಯು ಪ್ರೀತಿಯಿಂದ ಸಾಂತ್ವನದ ಮಾತುಗಳನ್ನಾಡಿದಳ 'ರಾಮಲಕ್ಷ್ಮಣರು ಸತ್ತಿರುವರೆಂಬ ಅನುಮಾನ ನಿನಗೇಕೆ ಬಂತು, ತಾಯಿ ತಪನಕುಲಸಂಭೂತರಾದ ಈ ಅಣ್ಣತಮ್ಮಂದಿರು ಮೂರ್ಛಿತರಾಗಿದ್ದಾರೆ, ಅಷ್ಟೆ. ಅವರ ಶುಭಕರ ಲಕ್ಷಣಗಳಿಂದ ಕೂಡಿದ ಮುಖಗಳನ್ನು ನೋಡಿದರೆ ವೀರಲಕ್ಷ್ಮಿಯು ಅವರಲ್ಲಿ ನೆಲಸಿರುವುದು ಕಾಣುವುದಿಲ್ಲವೇ? ಅವರ ಅಂಗಗಳು ಅದ್ಭುತವಾದ ಪರಾಕ್ರಮದಿಂದ ತುಂಬಿವೆ, ಕಣ್ಣುಗಳು ಇದು ಸಾವಲ್ಲ, ಮೂರ್ಛೆ ಎಂಬುದನ್ನು ಸಾರುತ್ತಿವೆ.

ನೀನು ದುಃಖವನ್ನು ಬಿಡು. ಕುಲಘಾತಕಿಯರೂ ಹಾದರಗಿತ್ತಿಯರೂ ಕಿಲ್ಬಿಷವನ್ನುಳ್ಳ ಹೆಂಗಸರೂ ಹತ್ತುವುದಕ್ಕೆ ಪುಷ್ಪಕವು ಅವಕಾಶವನ್ನೇ ಕೊಡುವುದಿಲ್ಲ. ನನ್ನ ಮಾತನ್ನು ನಂಬು. ಲಲನೆಯರ ಮಕುಟಮಣಿಯೇ, ರಾಮನ ಮೊಗವು ಶೃಂಗಾರರಸವನ್ನು ತುಂಬಿಕೊಂಡು ಶೋಭಿಸುತ್ತಿದೆ, ಇದರಿಂದಲೇ ನಿನ್ನದು ದೀರ್ಘಸೌಮಂಗಲ್ಯ ಎಂಬುದು ತಿಳಿಯುತ್ತದೆ. ಶರಹತಿಯಿಂದ ಆಯಾಸಗೊಂಡ ಶರೀರವು ಮೂರ್ಛೆಯನ್ನು ಹೊಂದಿರುವುದಲ್ಲದೆ ರಾಮನಿಗೆ ಅಳಿವು ಎಂಬುದುಂಟೇ ಬೇಗನೇ ಆತನು ಎಚ್ಚರಗೊಳ್ಳುವನು, ಪ್ರ ಕಪಿಸೈನ್ಯವು ಲಂಕೆಯನ್ನು ವಶಪಡಿಸಿಕೊಳ್ಳುತ್ತದೆ ಎಂಬುದು ನಿಶ್ಚಿತ. ರಘುವೀರನು ಪರಬೊಮ್ಮನಲ್ಲದೆ ಮನುಷ್ಯನೇ? ಇದು ನಿನಗೆ ತಿಳಿದಿದ್ದರೂ ತಿಳಿಯದವಳಂತೆ ಏಕೆ ರೋದಿಸುತ್ತಿದ್ದೀಯೆ? ಆಯುಷ್ಯ ತೀರಿದವರಿಗೆ ಮುಖವು ಬಾಡಿಹೋಗುತ್ತದೆ, ಕಣ್ಣುಗಳ ಕಾಂತಿ ಕಣ್ಮರೆಯಾಗುತ್ತದೆ. ಆದರೆ ರಾಮನ ಕಣ್ಣುಗಳಲ್ಲಿ ನಗೆಯು ತುಂಬಿದೆ, ಮುಖದಲ್ಲಿ ವೀರಲಕ್ಷ್ಮಿ ಶೋಭಿಸುತ್ತಿದ್ದಾಳ. ಆದ್ದರಿಂದ ನಿನ್ನ ಶೋಕವನ್ನು ಬದಿಗಿರಿಸಿ ನೆಮ್ಮದಿಯಿಂದಿರು, ಸೀತೆ. ಒಂದೆರಡು ಕ್ಷಣಗಳಲ್ಲಿ ಈ ರಾಜಪುತ್ರರು ಶತ್ರುಗಳನ್ನು ಶಿಕ್ಷಿಸುತ್ತಾರೆ, ನೋಡುತ್ತಿರು.

ನಾನೆಂದಿಗೂ ಸುಳ್ಳಾಡುವುದಿಲ್ಲ ಎಂದು ತ್ರಿಜಟೆಯು ಕಕ್ಕುಲತೆಯನ್ನು ಸಮಾಧಾನಪಡಿಸಲು ಸೀತಾದೇವಿಯು ಅವಳನ್ನು ಅಕ್ಕರೆಯಿಂದ ನೋಡುತ್ತ ವಿನಯದಿಂದ ಕೂಡಿ, ಅಕ್ಕ, ನಿನ್ನ ನುಡಿಗಳಿಂದ ನನ್ನ ಅಜ್ಞಾನ ದೂರವಾಯಿತು. ರಾಜಕುಮಾರರಿಬ್ಬರೂ ಕ್ಷೇಮದಿಂದಿರಲಿ, ಈ ಕಪಿಸೈನ್ಯವು ಅವರನ್ನು ಅನುಸರಿಸಲಿ ಎಂದು ಹೇಳುತ್ತಿರುವಷ್ಟರಲ್ಲಿಯೇ ಪುಷ್ಪಕವನ್ನು ಆಗಸದಲ್ಲಿ ನೋಡಿದ ದೈತ್ಯರುಗಳೂ ಕಿನಿಸಿನಿಂದ ಬೇಗ ಅದನ್ನು ಅಲ್ಲಿಂದ ಹೋಗುವಂತೆ ಮಾಡಿದರು. ರಕ್ಕಸಿಯರು ಜನಕಜೆಯನ್ನು ಮತ್ತೆ ಎಂದಿನಂತೆ ಅಶೋಕವನಕ್ಕೆ ತಂದು ಇಳಿಸಿದರು, ಇರಿಸಿದರು. ಆನಂತರ ಆ ಮಂದಮತಿಗಳು ದೈತ್ಯರಾಜನಿಗೆ ಎಲ್ಲವನ್ನೂ ಅರಿಕೆಮಾಡಿಕೊಳ್ಳಲು ರಾಜಾಲಯದತ್ತ ನಡೆತಂದರು.

ಮುಂದುವರೆಯುವುದು



## ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

08

# ಪರೀಕ್ಷಾ ಆತಂಕದಿಂದ ನಿದ್ರಾಭಂಗವೇ?

ಪರೀಕ್ಷೆ ಸಮೀಪಿಸಿದಂತೆ ಹಾಸಿಗೆಯಲ್ಲಿ ಹೊರಳಾಡುವಿಕೆ, ನಿದ್ರಾಹೀನತೆ ಸಹಜವಾಗುತ್ತದೆ. ಕಣ್ಣು ಮುಚ್ಚಿದೊಡನೆ ಪ್ರಶ್ನೆಪತ್ರಿಕೆ ಹೇಗಿರುವುದು? ವಿಸ್ಮೃತವಾದರೆ ಗತಿಯೇನು? ಎಂಬ ಚಿಂತೆಗಳು ಮುತ್ತಿಕೊಳ್ಳುತ್ತವೆ. ನಿದ್ರೆ ಕರಗಿದಷ್ಟೂ ಮರುದಿನದ ಭೀತಿ ಹೆಚ್ಚುತ್ತದೆ. ಇದು ದುಶ್ಚಕ್ರ. ಭಯದಿಂದ ನಿದ್ರಾಭಂಗ, ನಿದ್ರಾಭಂಗದಿಂದ ಭಯ ವೃದ್ಧಿ.

ನಿದ್ರಾದೇವಿಯನ್ನು ಒಲಿಸಿಕೊಳ್ಳಲು ಮಲಗುವ ಒಂದು ಗಂಟೆ ಮುನ್ನ ಗ್ರಂಥ ಮುಚ್ಚಿ. ಬೆಳಕು ಮಂದಗೊಳಿಸಿ, ದೂರವಾಣಿ ದೂರವಿಡಿ. ಬಿಸಿ ಹಾಲು ಸೇವಿಸಿ, ಆಳವಾಗಿ ಉಸಿರಾಡಿ. ಕಾಡುವ ಚಿಂತೆಗಳನ್ನು ದಿನಚರಿಯಲ್ಲಿ ಬರೆದು ನಾಳೆ ಯೋಚಿಸುವೆ ಎಂದು ಮನಸ್ಸಿಗೆ ಭರವಸೆ ನೀಡಿ. ಮರುದಿನದ ಲಘು ಯೋಜನೆ ರೂಪಿಸಿದರೆ ಮನಸ್ಸಿಗೆ ಭದ್ರತೆ ಲಭಿಸುತ್ತದೆ. ನೆನಪಿಡಿ, ಪರೀಕ್ಷೆ ಜೀವನವಲ್ಲ, ಜೀವನದ ಒಂದು ಘಟ್ಟ ಮಾತ್ರ. ನೆಮ್ಮದಿಯ ನಿದ್ರೆಯಿಂದ ಎಚ್ಚರಗೊಂಡ ಚುರುಕು ಮೆದುಳೇ ಶ್ರೇಷ್ಠವಾಗಿ ಬರೆಯುತ್ತದೆ. ಆತಂಕ ಗೆಲ್ಲಲು ಮೊದಲು ನಿದ್ರೆಯನ್ನು ಗೆಲ್ಲಬೇಕು. ಸುಖನಿದ್ರೆಯೇ ನಿಮ್ಮ ಅತ್ಯುತ್ತಮ ಸಿದ್ಧತೆ.

> ತಿಳಿದಿರಲಿ, ನಿದ್ರೆಯಿಲ್ಲದೆ ನಡೆಸಿದ ಅಧ್ಯಯನ ನಿಷ್ಫಲ. ನಾವು ಸುಖಸುಪ್ತಿಯಲ್ಲಿ ತೊಡಗಿದಾಗ ಮೆದುಳು ದಿನದ ಕಲಿಕೆಯನ್ನು ವ್ಯವಸ್ಥಿತವಾಗಿ ಜೋಡಿಸುತ್ತದೆ. ನಿದ್ರೆ ಕೊರತೆಯಿಂದ ಸ್ಮೃತಿ ಶಿಥಿಲವಾಗುತ್ತದೆ. ಪರೀಕ್ಷಾ ಕೊಠಡಿಯಲ್ಲಿ ಪ್ರಶ್ನೆ ಎದುರಿದ್ದರೂ ಉತ್ತರ ಮನಸ್ಸಿಗೆ ಹೊಳೆಯದು.
> ಆದ್ದರಿಂದ ನಿದ್ರೆಯನ್ನು ಅಧ್ಯಯನದ ಅವಿಭಾಜ್ಯ ಅಂಗವೆಂದೇ ಭಾವಿಸಿ. ಆರರಿಂದ ಎಂಟು ಗಂಟೆಗಳ ಗಾಢ ನಿದ್ರೆ ಅತ್ಯಗತ್ಯ.



# ಅಧಿಕ ಯೂರಿಕ್ ಆಸಿಡ್ ಮಟ್ಟದಿಂದ ಹೃದ್ರೋಗಗಳ ಜೊತೆಗೆ ಪಾರ್ಶ್ವವಾಯು ಅಪಾಯ ಹೆಚ್ಚು: ಸಂಶೋಧನೆ

ರಕ್ತದಲ್ಲಿ ಯೂರಿಕ್ ಆಸಿಡ್ ಮಟ್ಟ ಹೆಚ್ಚಾಗುವುದರಿಂದ ಉಂಟಾಗುವ ಗೌಟ್ ಸಮಸ್ಯೆಯಿಂದ ಹಲವು ಬಳಲುತ್ತಿದ್ದಾರೆ. ಇದರ ಪರಿಣಾಮವಾಗಿ ಈ ಮಟ್ಟವನ್ನು ಕಡಿಮೆ ಮಾಡಲು ವೈದ್ಯರು ಸೂಚಿಸುವಂತಹ ಹಲವು ಪರಿಹಾರಗಳು ಮತ್ತು ಚಿಕಿತ್ಸೆಗಳನ್ನು ಅನುಸರಿಸುತ್ತಾರೆ. ಈ ಸಮಸ್ಯೆಯ ತೀವ್ರತೆಯು ಅಸಹನೀಯ ನೋವು ಉಂಟುಮಾಡಬಹುದು.

ಸಾಮಾನ್ಯವಾಗಿ ಕಾಲಿನ ಹೆಬ್ಬೆರಳಿನಲ್ಲಿ ಕಾಣಿಸಿಕೊಳ್ಳುತ್ತದೆ. ನೋವು, ಊತ ಹಾಗೂ ಕೆಂಪಾಗುವಿಕೆ ಲಕ್ಷಣವು ರೋಗಿಯನ್ನು ತೀವ್ರ ಸಂಕಷ್ಟಕ್ಕೆ ದೂಡುತ್ತದೆ. ಶೀತ ಹವಾಮಾನದಲ್ಲಿ ಈ ಸ್ಥಿತಿಯು ಸಾಮಾನ್ಯವಾಗಿ ಹೆಚ್ಚಾಗುತ್ತದೆ. ಅಧಿಕ ಯೂರಿಕ್ ಆಸಿಡ್, ಗೌಟ್ ಇಲ್ಲವೇ ಸಂಧಿವಾತದಿಂದ ಬಳಲುತ್ತಿರುವವರು ಆಗಾಗ್ಗೆ ತೀವ್ರ ನೋವನ್ನು ಅನುಭವಿಸುತ್ತಾರೆ. ಇದರ ಪರಿಣಾಮವು ಕೇವಲ ಕೀಲು ಸಮಸ್ಯೆಗಳಿಗೆ ಮಾತ್ರ ಸಂಬಂಧಿಸಿಲ್ಲ. ಗೌಟ್ ಇರುವ ವ್ಯಕ್ತಿಗಳು ಹೃದಯಾಘಾತ, ಪಾರ್ಶ್ವವಾಯು ಸೇರಿದಂತೆ ವಿವಿಧ ಹೃದಯ ಸಂಬಂಧಿ ಸಮಸ್ಯೆಗಳನ್ನು ಎದುರಿಸುವ ಅಪಾಯವನ್ನು ಹೊಂದಿರುತ್ತಾರೆ ಎಂದು ವೈದ್ಯರು ತಿಳಿಸುತ್ತಾರೆ.

ಅಧಿಕ ಯೂರಿಕ್ ಆಸಿಡ್ ಸಮಸ್ಯೆಯನ್ನು ಉಲ್ಬಣವಾಗುವುದನ್ನು ತಡೆಯಲು ವಹಿಸಬೇಕಾದ ಮುನ್ನೆಚ್ಚರಿಕೆಗಳೇನು ಎಂಬುದನ್ನು ಇಲ್ಲಿ ಅರಿತುಕೊಳ್ಳೋಣ. ರಕ್ತದಲ್ಲಿ ಅಧಿಕ ಯೂರಿಕ್ ಆಸಿಡ್ ಮಟ್ಟ ಹೆಚ್ಚಾದಾಗ ಗೌಟ್ ಕಾಣಿಸುತ್ತದೆ. ಇದು ಕೀಲುಗಳಲ್ಲಿ ಸೂಜಿಯಂತಹ ಹರಳುಗಳ ನಿರ್ಮಾಣಕ್ಕೆ ಕಾರಣವಾಗುತ್ತದೆ. ಅಧಿಕ ಯೂರಿಕ್ ಆಸಿಡ್ ಹಾಗೂ ಗೌಟ್‌ಗೆ ಸಂಬಂಧಿಸಿದ ಉರಿಯೂತವು ರಕ್ತನಾಳಗಳ ಕಾರ್ಯನಿರ್ವಹಣೆಯಲ್ಲಿನ ಅಡಚಣೆ ಮತ್ತು ಹೃದಯರಕ್ತನಾಳದ ಕಾಯಿಲೆಗಳ ಅಪಾಯ ಹೆಚ್ಚಾಗುವ ಸಾಧ್ಯತೆ ಹೆಚ್ಚಿರುತ್ತದೆ. ಈ ಸಂಬಂಧವನ್ನು ಸಮಗ್ರವಾಗಿ ನೋಡಬೇಕಾಗಿದೆ. ದೀರ್ಘಕಾಲದವರೆಗೆ ಅಧಿಕ ಯೂರಿಕ್ ಆಸಿಡ್ ಗೌಟ್ ಹಾಗೂ ಹೃದಯ ಸಂಬಂಧಿ ಸಮಸ್ಯೆಗಳ ನಡುವಿನ ಸಂಪರ್ಕಕ್ಕೆ ಮುಖ್ಯ ಕಾರಣವೆಂದರೆ, ಗೌಟ್ ಹೃದಯರಕ್ತನಾಳದ ಅಪಾಯ ಹೆಚ್ಚಿಸುವ ಮೂಲಕ ಅಧಿಕ ರಕ್ತದೊತ್ತಡ, ಬೊಜ್ಜು, ಟೈಪ್-2 ಮಧುಮೇಹ, ದೀರ್ಘಕಾಲದ ಮೂತ್ರಪಿಂಡ ಕಾಯಿಲೆ, ಅಸಹಜ ಕೊಲೆಸ್ಟ್ರಾಲ್ ಮಟ್ಟದ ಸಮಸ್ಯೆಗಳು ಕೂಡ ಬರಬಹುದು. ಅಧಿಕ ಯೂರಿಕ್ ಆಸಿಡ್ ಮಟ್ಟದಿಂದ ಹೃದಯ ಹಾಗೂ ರಕ್ತನಾಳಗಳ ಮೇಲೆ ಹೆಚ್ಚಿನ ಒತ್ತಡಕ್ಕೆ ಉಂಟುಮಾಡುತ್ತವೆ ಎಂದು ಸಂಶೋಧನೆ ತಿಳಿಸುತ್ತದೆ.

ಗೌಟ್ ಅನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅಧಿಕ ಯೂರಿಕ್ ಆಸಿಡ್ ಮಟ್ಟ ಮೂತ್ರಪಿಂಡದ ಕಾರ್ಯನಿರ್ವಹಣೆ, ರಕ್ತದೊತ್ತಡ, ರಕ್ತದಲ್ಲಿನ ಸಕ್ಕರೆ ಹಾಗೂ ಕೊಲೆಸ್ಟ್ರಾಲ್ ಮಟ್ಟಗಳನ್ನು ನಿಯಮಿತವಾಗಿ ಪರಿಶೀಲಿಸುವುದು ಅವಶ್ಯವಾಗಿದೆ. ವೈದ್ಯರ ಸಲಹೆ ಮೇರೆಗೆ ಔಷಧಗಳನ್ನು ಸೇವಿಸುವುದು ಈ ಸ್ಥಿತಿಯನ್ನು ಶಮನಗೊಳಿಸಲು ತುಂಬಾ ಸಹಾಯ ಮಾಡುತ್ತದೆ. ಕೀಲು ನೋವು ಕಡಿಮೆಯಾಗಿದೆ ಎನ್ನುವ ಕಾರಣಕ್ಕಾಗಿ ಯಾವುದೇ ಸಂದರ್ಭದಲ್ಲಿ ಔಷಧ ಸೇವನೆ ನಿಲ್ಲಿಸಬಾರದು. ಅಧಿಕ ಯೂರಿಕ್ ಆಮ್ಲದ ಮಟ್ಟವನ್ನು ನಿಯಂತ್ರಿಸಲು ನಾವು ತೆಗೆದುಕೊಳ್ಳಲಾಗುವಂತಹ ಚಿಕಿತ್ಸೆ ಹೃದಯಾಘಾತ ತಡೆಯುತ್ತದೆ. ಅಧಿಕ ಯೂರಿಕ್ ಆಸಿಡ್ ಹಾಗೂ ಹೃದಯದ ಸಮಸ್ಯೆಗಳ ನಡುವಿನ ಸಂಬಂಧದ ಕುರಿತಾದ ಹಲವು ಸಂಶೋಧನೆಗಳು ಇನ್ನೂ ನಡೆಯುತ್ತಿವೆ. ಯಾವುದೇ ಆರೋಗ್ಯ ಸಮಸ್ಯೆಗಳಿದ್ದರೆ, ಮೊದಲು ವೈದ್ಯರನ್ನು ಸಂಪರ್ಕಿಸಿ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯವಾಗಿದೆ ಎಂದು ತಜ್ಞರು ತಿಳಿಸುತ್ತಾರೆ.



# ಸರ್ಕಾರ ಮತ್ತು ಕಲಾಪ್ರೇಮಿಗಳ ಪ್ರೋತ್ಸಾಹವಿಲ್ಲದೆ ಕತ್ತಲಲ್ಲಿ ಕರಗುತ್ತಿದೆಯಾ ಕಲಾ ಪ್ರತಿಭೆ

## ಹತ್ತು ನಿಮಿಷದಲ್ಲಿ ಭಾವಚಿತ್ರ ಬಿಡಿಸುವ ಯಾದಗಿರಿಯ 'ಪೆನ್ಸಿಲ್ ಜಾದೂಗಾರ' ಮಹೇಶ ಯಾದವ!

ಇಲಿಯಾಸ್ ಪಟೇಲ್. ಬ ಯಾದಗಿರಿ

**ಕೈಯಲ್ಲಿ ಗಾರೆ ಚೇಲ, ಮನಸ್ಸಿನಲ್ಲಿ ಕೌಟುಂಬಿಕ ಜವಾಬ್ದಾರಿ, ಕಣ್ಣುಗಳಲ್ಲಿ ಕಷ್ಟದ ಕಣ್ಣೀರು... ಈ ಸವಾಲುಗಳ ನಡುವೆಯೂ ಬಣ್ಣದ ಪೆನ್ಸಿಲ್, ಮೊಳೆ ಹಾಗೂ ದಾರದ ಮೂಲಕ ಬದುಕಿನ ಹೊಸ ಕ್ಯಾನ್ವಾಸ್ ರಚಿಸಿದ ಯಾದಗಿರಿ ಜಿಲ್ಲೆಯ ಯುವಕನೊಬ್ಬನ ಅಪರೂಪದ ಕಲಾ ಪಯಣವಿದು.**

### ಕಷ್ಟದ ಕಡಲಿನಲ್ಲಿ ಬಾಲ್ಯ ಮತ್ತು ಹೋರಾಟ

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಚಿಕ್ಕಹಳ್ಳಿ ಗ್ರಾಮದ ಯುವಕ ಮಹೇಶ ಯಾದವ ಅವರ ಜೀವನ ಸಾಗಿದ್ದು ಸುಲಭದ ಹಾದಿಯಲ್ಲಲ್ಲ. ತಂದೆ ಶೇಕಪ್ಪ ಅವರು ಕೂಲಿ ಕಾರ್ಮಿಕರಾಗಿ ದುಡಿದು ಸಂಸಾರ ತಳ್ಳುತ್ತಿದ್ದರು. ಬಡತನದ ನಡುವೆಯೇ ಮಗನನ್ನು ಕನಿಷ್ಠ ಪಿಯುಸಿವರೆಗೆ ಓದಿಸಿದರು. ಆದರೆ ವಿಧಿಯಾಟ ಬೇರೆಯೇ ಇತ್ತು. ತಂದೆಗೆ ಅನಾರೋಗ್ಯ ಆವರಿಸಿದಾಗ, ಕುಟುಂಬದ ಸಂಪೂರ್ಣ ಆರ್ಥಿಕ ಹೊಣೆಗಾರಿಕೆ ಮಹೇಶ ಅವರ ಹೆಗಲೇರಿತು.

ಅಭ್ಯಾಸ ಮುಂದುವರಿಸಲು ಸಾಧ್ಯವಾಗದೆ, ಕುಟುಂಬಕ್ಕೆ ನೆರವಾಗಲು ಮಹೇಶ ಮೊದಲು ಗಾರೆ ಕೆಲಸಕ್ಕೆ ಇಳಿದರು. ತದನಂತರ ಬದುಕಿನ ಬಂಡಿ ಎಳೆಯಲು ಸಣ್ಣದೊಂದು ಗ್ಯಾರೇಜ್ ಕೆಲಸ ಮಾಡುತ್ತಾ ಜೀವನ ಸಾಗಿಸುತ್ತಿದ್ದಾರೆ. ದಿನನಿಡೀ ಕೆಲಸದ ಒತ್ತಡ ಮತ್ತು ತಂದೆಯ ವೈದ್ಯಕೀಯ ವೆಚ್ಚದ ಚಿಂತೆಯ ನಡುವೆಯೂ ತಮ್ಮ ಕಲಾಭಿಮಾನವನ್ನು ಕೈಬಿಡಲಿಲ್ಲ.

### ಬದುಕಿನ ದಿಕ್ಕು ಬದಲಿಸಿದ ಆ ಒಂದು ಸಲಹೆ!

ದಿನನಿಡೀ ಕೆಲಸದ ಒತ್ತಡ ಮತ್ತು ಮನಸ್ಸಿನ ಚಿಂತೆಯಿಂದ ನರಳುತ್ತಿದ್ದ ಮಹೇಶ ಅವರ ಸ್ಥಿತಿಯನ್ನು ಅವರ ಸಹೋದ್ಯೋಗಿ ಶಾರದಾ ಎಂಬುವವರು ಗಮನಿಸಿದರು. ಮಹೇಶ ಅವರಲ್ಲಿದ್ದ ಕಲಾತ್ಮಕ ಆಸಕ್ತಿಯನ್ನು ಗುರುತಿಸಿದ ಶಾರದಾ, ''ಚಿಂತೆ ಮಾಡುವುದನ್ನು ಬಿಟ್ಟು ನಿನಗೆ ಇಷ್ಟವಾದ ಕಲೆಯಲ್ಲಿ ಮನಸ್ಸನ್ನು ತೊಡಗಿಸಿಕೊ'' ಎಂದು ಸಾಂತ್ವನ ಹೇಳಿ ಸ್ಫೂರ್ತಿ ತುಂಬಿದರು. ಸಾಮಾನ್ಯ ಸಲಹೆಯಾಗಿರಲಿಲ್ಲ ಅದು ಮಹೇಶ ಅವರ ಬದುಕಿನ ಹೊಸ ಅಧ್ಯಾಯಕ್ಕೆ ಬರೆದ ಮುನ್ನುಡಿಯಾಗಿತ್ತು. ಪೆನ್ಸಿಲ್ ಹಾಗೂ ವಿವಿಧ ಕಲೆಗಳಲ್ಲಿ ಪರಿಣಿತರಾಗಿದ್ದ ಶಾರದಾ ಅವರನ್ನೇ ಮಹೇಶ ತಮ್ಮ ಗುರುವಾಗಿ ಸ್ವೀಕರಿಸಿದರು. ಕಳೆದ ಒಂದು ವರ್ಷದಿಂದ ಈ ಕಲೆಯಲ್ಲಿ ಯಾವುದೇ ವಿರಾಮವಿಲ್ಲದೆ, ನಿಷ್ಠೆಯಿಂದ ನಿರಂತರ ಅಭ್ಯಾಸ ಆರಂಭಿಸಿದರು.




## ಪ್ರಮುಖ ಹೈಲೈಟ್ಸ್

ಇಂದು ಕಲಾಕ್ಷೇತ್ರದಲ್ಲಿ ಯಾವುದೇ ಅಧಿಕೃತ ಪ್ರೋತ್ಸಾಹ ಅಥವಾ ಬೆಂಬಲವಿಲ್ಲದೆ, ಸ್ವಂತ ಬಲದ ಮೇಲೆ ಬೆಳೆಯುತ್ತಿರುವ ಮಹೇಶ ಯಾದವ ಅವರ ಕನಸು ಸುರಪುರದಲ್ಲಿ ಸ್ವಂತ ಚಿತ್ರಕಲಾ ಸ್ಟುಡಿಯೋ ಆರಂಭಿಸುವುದು.

ಆದರೆ ಗ್ರಾಮೀಣ ಭಾಗದ ಇಂತಹ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕಾದ ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಇಲಾಖೆಗಳು ಇನ್ನೂ ಮೌನವಾಗಿರುವುದು ಕಲ್ಯಾಣ ಕರ್ನಾಟಕದ ಕಲಾ ಲೋಕಕ್ಕೆ ಮಾಡುತ್ತಿರುವ ಅನ್ಯಾಯವಲ್ಲವೇ? ಸರ್ಕಾರ ಕಣ್ಣು ತೆರೆದು ಇಂತಹ ಯುವ ಪ್ರತಿಭೆಗಳಿಗೆ ಆರ್ಥಿಕ ಹಾಗೂ ನೈತಿಕ ಬಲ ತುಂಬುವ ಕಾಲ ಇದು!



## ಪೆನ್ಸಿಲ್ ಚಮತ್ಕಾರದಿಂದ ಮೊಳೆ-ದಾರದ ಅದ್ಭುತ ಕಲೆಗಳು!

### 10 ನಿಮಿಷಗಳಲ್ಲಿ ನೈಜವಾಗಿ ಮೂಡಿಸುವ ಅದ್ಭುತ ಚಾಕಚಕ್ಯತೆ

• ಉದಯವಾಹಿನಿ, ಯಾದಗಿರಿ

ಅಭ್ಯಾಸವೇ ಕಲೆಯ ಜೀವಾಳವಾಯಿತು. ಮಹೇಶ ಅವರ ಕೈಚಳಕದಲ್ಲಿ ಕೇವಲ ಕಾಗದದ ಮೇಲೆ ಪೆನ್ಸಿಲ್ ಮಾತ್ರವಲ್ಲ, ವಿಭಿನ್ನ ಮಾಧ್ಯಮಗಳಲ್ಲಿ ಅದ್ಭುತ ಕಲೆಗಳು ಜೀವ ತಳೆದಿವೆ. **ಪೆನ್ಸಿಲ್ ಕಲೆ:** ಯಾವುದೇ ವ್ಯಕ್ತಿಯ ಮುಖವನ್ನು ಕಂಡು ಕೇವಲ 10 ನಿಮಿಷಗಳಲ್ಲಿ ನೈಜವಾಗಿ ಮೂಡಿಸುವ ಅದ್ಭುತ ಚಾಕಚಕ್ಯತೆಯನ್ನು ಅವರು ಮೈಗೂಡಿಸಿಕೊಂಡಿದ್ದಾರೆ.

ದೇವರು, ಸ್ವಾತಂತ್ರ್ಯ ಹೋರಾಟಗಾರರು, ದಾರ್ಶನಿಕರು, ಪ್ರಮುಖ ರಾಜಕೀಯ ಮುಖಂಡರು ಹಾಗೂ ಚಲನಚಿತ್ರ ನಟ-ನಟಿಯರ ನೈಜ ಚಿತ್ರಗಳು ಸೇರಿದಂತೆ 500ಕ್ಕೂ ಹೆಚ್ಚು ಸುಂದರ ಕಲಾಕೃತಿಗಳು ಮೂಡಿಬಂದಿವೆ. **ಮೊಳೆಗಳಿಂದ ರಾಯಣ್ಣ:** ವಿಶೇಷವಾಗಿ, ಗಟ್ಟಿಯಾದ ಮರದ ಹಲಗೆಯ ಮೇಲೆ ನೂರಾರು ಮೊಳೆಗಳನ್ನು ಬಳಸಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಭಾವಚಿತ್ರವನ್ನು ಅತ್ಯಂತ ಆಕರ್ಷಕವಾಗಿ ರೂಪಿಸಿದ್ದಾರೆ.ಧಾರದಲ್ಲಿ ಪೇಂಟಿಂಗ್ (Thread Painting)): ಬಣ್ಣದ ದಾರಗಳನ್ನು ಬಳಸಿ ವಿಶಿಷ್ಟ ಶೈಲಿಯಲ್ಲಿ ಪೇಂಟಿಂಗ್ ಮಾಡುವ ಮೂಲಕ ಕಲಾಪ್ರೇಮಿಗಳನ್ನು ಹುಬ್ಬೇರಿಸುವಂತೆ ಮಾಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಹರಿದುಬಂದ ಮೆಚ್ಚುಗೆ ಹಾಗೂ ನೆರವು ತಾನು ಬಿಡಿಸಿದ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲು ಪ್ರಾರಂಭಿಸಿದ ಮಹೇಶ ಇನ್ಸ್ಟಾಗ್ರಾಮ್ ನಲ್ಲಿ ಸುಮಾರು 7,500 (Followers) ಹೊಂದಿದ್ದಾರೆ.

ನೆಟ್ಟಿಗರು ಅವರ ಕಲಾತ್ಮಕ ಶ್ರಮವನ್ನು ಕೊಂಡಾಡಿದರು. ಅನೇಕ ಕಲಾಪ್ರೇಮಿಗಳು ಇವರ ಕಲೆಗೆ ಮನಸೋತು, ಯಾವುದೇ ಅಪೇಕ್ಷೆಯಿಲ್ಲದೆ ಸ್ವಯಂಪ್ರೇರಿತರಾಗಿ 500 ರಿಂದ 1,000 ವರೆಗೆ ಹಣವನ್ನು ಆನ್‌ಲೈನ್ ಮೂಲಕ ಕಳುಹಿಸಿ ಪ್ರೋತ್ಸಾಹಿಸುತ್ತಿದ್ದಾರೆ.

ಹಣಕ್ಕಾಗಿ ತಾನು ಯಾವುದೇ ಬೇಡಿಕೆ ಇಡದಿದ್ದರೂ ಸಿಗುತ್ತಿರುವ ಈ ನೆರವು ಮಹೇಶ ಅವರ ಕುಟುಂಬ ನಿರ್ವಹಣೆಗೆ ಮತ್ತು ಕಲಾ ಸಾಮಗ್ರಿಗಳನ್ನು ಖರೀದಿಸಲು ಆಸರೆಯಾಗಿದೆ.

### ಮುಂದಿನ ಕನಸು

ಕಲಾಪ್ರೇಮಿಗಳ ಬೆಂಬಲದ ನಿರೀಕ್ಷೆ ಪ್ರಸ್ತುತ ಗ್ಯಾರೇಜ್ ಕೆಲಸದ ಜೊತೆಗೆ ತಮ್ಮ ಕಲಾ ಸಾಧನೆಯನ್ನು ಮುಂದುವರಿಸಿರುವ ಮಹೇಶ, ತಮ್ಮ ಮಾತೃಭೂಮಿ ಸುರಪುರದಲ್ಲಿಯೇ 'ಸ್ವಂತ ಚಿತ್ರಕಲಾ ಸ್ಟುಡಿಯೋ' ಒಂದನ್ನು ಆರಂಭಿಸಬೇಕು ಎಂಬುದು ಬಹುದೊಡ್ಡ ಕನಸಾಗಿದೆ. ಗ್ರಾಮೀಣ ಭಾಗದ ಬಡ ಯುವಕನೊಬ್ಬ ತನ್ನ ಕಷ್ಟಗಳ ನಡುವೆಯೂ ಕಲೆಯನ್ನೇ ನೆಚ್ಚಿಕೊಂಡು ಬೆಳೆಯುತ್ತಿರುವ ಈ ಪಯಣ ಪ್ರತಿಯೊಬ್ಬರಿಗೂ ಮಾದರಿ.

**ಸ್ವಂತ ಚಿತ್ರಕಲಾ ಸ್ಟುಡಿಯೋ**

# ಪರಿಸರ ಮಂಜುಗೆ ಪರಿಸರ ಸೇವಾ ಭೂಷಣ ಪ್ರಶಸ್ತಿ

• ಉದಯವಾಹಿನಿ, ಬೆಂಗಳೂರು

ಪ್ರಕೃತಿ ಸಂರಕ್ಷಣೆಯೆಡೆಗಿನ ತಮ್ಮ ನಿಸ್ವಾರ್ಥ ಸೇವೆ ಸಲ್ಲಿಸುವವರ ಪೈಕಿ ಪರಿಸರ ಮಂಜು ಅಪರೂಪದಲ್ಲಿ ಒಬ್ಬರು ಎಂದು ರಾಜ್ಯಾಧ್ಯಕ್ಷರಾದ ಟಿ.ಎಚ್. ಸ್ವಾಮಿ ತಿಳಿಸಿದರು.

ಬೆಂಗಳೂರಿನ ಬಾಪೂ ಸಭಾಂಗಣ ಗಾಂಧಿ ಭವನದಲ್ಲಿ ಕರ್ನಾಟಕ ರಾಜ್ಯ ಸಾಮಾಜಿಕ ಕಾರ್ಯಕರ್ತರ ಒಕ್ಕೂಟ ಆಯೋಜಿಸಿದ ಮಾಹಿತಿ ಹಕ್ಕು ಕಾಯ್ದೆ - 2005 ರ 21ನೇ ವರ್ಷಾಚರಣೆಯ ಕಾರ್ಯಕ್ರಮದಲ್ಲಿ ಪರಿಸರ ಸೇವಾ ಭೂಷಣ ಪ್ರಶಸ್ತಿ ಪ್ರಧಾನ ಮಾಡಿ ಮಾತನಾಡಿದರು.

ಪ್ರಧಾನ ಕಾರ್ಯದರ್ಶಿಗಳಾದ ಡಿ.ಎಸ್. ರಾಮಲಿಂಗೇಗೌಡ ಮತನಾಡಿ, ಪ್ರಕೃತಿಯ ಮಡಿಲನ್ನು ಹಸಿರಾಗಿಸಿ, ಪರಿಸರದ ಸಂರಕ್ಷಣೆ ಹಾಗೂ ಗಿಡ-ಮರಗಳ ಪೋಷಣೆಯಲ್ಲಿ ಪರಿಸರ ಮಂಜು ಅವರ ನಿಸ್ವಾರ್ಥ ಕಾಳಜಿ ಮತ್ತು ಅಚಲ ಬದ್ಧತೆಯಿಂದ ತೊಡಗಿಸಿಕೊಂಡಿದ್ದಾರೆ.

ಹಸಿರು ಪರಿಸರದ ಮಹತ್ವವನ್ನು ಸಮಾಜದಲ್ಲಿ ಸಾರುತ್ತಾ, ಮುಂದಿನ ಪೀಳಿಗೆಗೆ ಸುಸ್ಥಿರ ಹಾಗೂ ಸ್ವಚ್ಛ ಭವಿಷ್ಯವನ್ನು ರೂಪಿಸುವ ನಿಟ್ಟಿನಲ್ಲಿ ಅವರು ಸಲ್ಲಿಸಿದ ತಮ್ಮ ಅಮೂಲ್ಯ ಸೇವೆ, ಜೀವಪರ ಸೇವೆಯನ್ನು ಗುರುತಿಸಿ ಹಾಗೂ ಗೌರವಿಸಿ ಪರಿಸರ ಸೇವಾ ಭೂಷಣ ಪ್ರಶಸ್ತಿಯನ್ನು ಪ್ರದಾನಿಸಲಾಗಿದೆ ಎಂದರು. ಈ ಸಂದರ್ಭದಲ್ಲಿ ಸಂಘದ ರಾಜ್ಯ ಜಂಟಿ ಕಾರ್ಯದರ್ಶಿ ಆರ್.ಹೆಚ್. ರಾಜಶೇಖರ್ ಭಾಗಿಯಾಗಿದ್ದರು.


ಉದಯವಾಹಿನಿ ಚಿತ್ರ

# ಶಿಕ್ಷಕರ ಕ್ಷೇತ್ರದ ಚುನಾವಣೆ, ಜಿಬಿಎ-ಪಂಚ ಪಾಲಿಕೆ ಶಿಕ್ಷಕ ವೃಂದದವರು ಎ.ಪಿ.ರಂಗನಾಥ್ ಅವರಿಗೆ ಬೆಂಬಲ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಆತ್ಮೀಯ ಶಿಕ್ಷಕರ ವೃಂದದ ಶಿಕ್ಷಕರಲ್ಲಿ ಮನವಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಪಾಲಿಕೆಯ ಶಿಕ್ಷಣ ಇಲಾಖೆಯ ಶಿಕ್ಷಕರು ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ 2026 ರ ಚುನಾವಣೆಯಲ್ಲಿ ಮಾನ್ಯ ಶ್ರೀ ಎ.ಪಿ. ರಂಗನಾಥ್‌ರವರಿಗೆ ಮತ ನೀಡಿ ಚುನಾಯಿಸಲು ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

ಎ.ಪಿ. ರಂಗನಾಥ್ ಸರಳ/ಸಜ್ಜನ/ಅಜಾತ ಶತ್ರು ಸದಾ ಶಿಕ್ಷಕರ ಪರವಾಗಿ ಧ್ವನಿ ಎತ್ತುತ್ತಿರುವ ಹಿರಿಯ ವಕೀಲರು ನಿಕಟ ಪೂರ್ವ ಅಧ್ಯಕ್ಷರು ಬೆಂಗಳೂರು ವಕೀಲರ ಸಂಘ ರವರು ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯು ದಿನಾಂಕ:- 23-10-2026 ರಂದು ನಡೆಯಲಿದ್ದು, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಪಾಲಿಕೆಯ ಶಿಕ್ಷಣ ಇಲಾಖೆಯ ಶಿಕ್ಷಕರು ಈ ಬಾರಿ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಶ್ರೀ ಎ.ಪಿ.ರಂಗನಾಥ್ ರವರಿಗೆ ಅಮೂಲ್ಯವಾದ ಮತವನ್ನು ನೀಡಿ ಜಯಶೀಲರಾಗಿ ಮಾಡಲು ತೀರ್ಮಾನಿಸಿದ್ದು, ಪಾಲಿಕೆ ಶಿಕ್ಷಕರು ಪ್ರತಿ ಸ್ಪರ್ಧಿ ಅಭ್ಯರ್ಥಿಯಿಂದ ಯಾವುದೇ ಹಣ/ಉಡುಗೊರೆ/ಮಧ್ಯಪಾನ/ಮಾಂಸದ ಊಟ ಅಥವಾ ಯಾವುದೇ ಆಮೇಷಗಳಿಗೆ ಒಳಗಾಗದೆ ಶಿಕ್ಷಕರ ಘನತೆ-ಗೌರವ ಕಾಪಾಡಿಕೊಂಡು ಸ್ವಾಭಿಮಾನಕ್ಕೆ ಧಕ್ಕೆಯಾಗದಂತೆ ಪ್ರಾಮಾಣಿಕವಾಗಿ ಈ ಬಾರಿ ನಡೆಯುವ ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಶ್ರೀ ಎ.ಪಿ.ರಂಗನಾಥ್ ರವರಿಗೆ ತಮ್ಮ ಅಮೂಲ್ಯವಾದ ಮತ ನೀಡಲು ಕೋರಲಾಗಿದೆ.

# ಅವಕಾಡೊ ಅಸ್ತಮಾ ನಿಯಂತ್ರಣಕ್ಕೆ ಉಪಯುಕ್ತವೇ?

ಇತ್ತೀಚಿನ ದಿನಗಳಲ್ಲಿ ಆರೋಗ್ಯಕರ ಆಹಾರ ಪದ್ಧತಿಯ ಬಗ್ಗೆ ಜನರಲ್ಲಿ ಆಸಕ್ತಿ ಹೆಚ್ಚುತ್ತಿದೆ. ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿರುವ ಹಣ್ಣುಗಳಲ್ಲಿ ಅವಕಾಡೊ ಕೂಡ ಒಂದು. ಇದರಲ್ಲಿ ಆರೋಗ್ಯಕರ ಕೊಬ್ಬುಗಳು, ನಾರಿನಾಂಶ, ಜೀವಸತ್ವಗಳು ಹಾಗೂ ಇತರ ಪೋಷಕಾಂಶಗಳು ಹೇರಳವಾಗಿವೆ. ಹೃದಯದ ಆರೋಗ್ಯ, ಜೀರ್ಣಕ್ರಿಯೆ ಮತ್ತು ಒಟ್ಟಾರೆ ಆರೋಗ್ಯವನ್ನು ಕಾಪಾಡಿಕೊಳ್ಳಲು ಅವಕಾಡೊವನ್ನು ಸಮತೋಲಿತ ಆಹಾರದ ಭಾಗವಾಗಿ ಸೇವಿಸಬಹುದು. ಆದರೆ ಕೆಲವು ನಂಬಿಕೆಗಳ ಪ್ರಕಾರ ಅವಕಾಡೊ ಸೇವನೆಯಿಂದ ಆಸ್ತಮಾ ಸಂಪೂರ್ಣವಾಗಿ ಗುಣವಾಗುತ್ತದೆ ಎನ್ನಲಾಗುತ್ತದೆ ಇದು ಎಷ್ಟರ ಮಟ್ಟಿಗೆ ನಿಜ. ಅಸ್ತಮಾಕ್ಕೆ ಅವಕಾಡೊ ಮದ್ದಾಗುತ್ತದೆಯೇ ಎಂಬುದನ್ನು ಸ್ಟೋರಿ ಮೂಲಕ ತಿಳಿದುಕೊಳ್ಳಿ. ಅಸ್ತಮಾ ಎನ್ನುವುದು ಉಸಿರಾಟದ ನಾಳಗಳಲ್ಲಿ ಉರಿಯೂತ ಉಂಟಾಗಿ ಉಸಿರಾಟದ ತೊಂದರೆ, ಕೆಮ್ಮು, ಎದೆಯಲ್ಲಿ ಬಿಗಿತ ಮತ್ತು ಉಬ್ಬಸದಂತಹ ಲಕ್ಷಣಗಳು ಕಾಣಿಸಿಕೊಳ್ಳುವ ದೀರ್ಘಕಾಲದ ಕಾಯಿಲೆಯಾಗಿದೆ.

ಪೌಷ್ಟಿಕ ಆಹಾರ ಸೇವನೆಯು ಒಟ್ಟಾರೆ ಆರೋಗ್ಯಕ್ಕೆ ಸಹಕಾರಿ. ಅವಕಾಡೊದಲ್ಲಿರುವ ಪೋಷಕಾಂಶಗಳು ಆರೋಗ್ಯಕರ ಆಹಾರ ಪದ್ಧತಿಯ ಭಾಗವಾಗಬಹುದು. ಆದರೆ, ಅವಕಾಡೊ ಜ್ಯೂಸ್ ಕುಡಿಯುವುದರಿಂದ ಅಸ್ತಮಾ ಗುಣವಾಗುತ್ತದೆ.

ಉದಯ ವಾಹಿನಿ

ಪ್ರಾದೇಶಿಕ

ಬುಧವಾರ
14 ಅಕ್ಟೋಬರ್ 2026



ಕಾರ್ಮಿಕರ ಹಳೆಯ ಕಾಯ್ದೆಯಲ್ಲಿದ್ದ 511 ಸೆಕ್ಷನ್‌ಗಳನ್ನು 358ಕ್ಕೆ ಇಳಿಸಿ ಸೆಕ್ಷನ್‌ಗಳನ್ನು ಕಡಿಮೆ ಮಾಡಲಾಗಿದೆ ಎಂದರು

# ಕಾರ್ಮಿಕ ಸಂಹಿತೆಗಳ ಕಾರ್ಯಗಾರ: ಹೊಸ ಕಾರ್ಮಿಕ ಕಾನೂನುಗಳು ಜಾರಿ

**ಉದಯವಾಹಿನಿ, ಕಲಬುರಗಿ**
ಕಾನೂನಿನಲ್ಲಿ ಹಿಂದೆ ಹಲವಾರು ಕಾರ್ಮಿಕ ಕಾಯ್ದೆಗಳಿದ್ದವು, ಆದರೆ 2024 ರಲ್ಲಿ ಅವುಗಳಲ್ಲಿ ಬದಲಾವಣೆಗಳನ್ನು ತರಲಾಗಿದ್ದು, ಮೂರು ಹೊಸ ಕಾರ್ಮಿಕ ಕಾನೂನುಗಳನ್ನು ಜಾರಿಗೆ ತರಲಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶ್ರೀನಿವಾಸ್ ನವಲೆ ಅವರು ಹೇಳಿದರು.

1. ಭಾರತೀಯ ದಂಡ ಸಂಹಿತೆ
2. ಭಾರತೀಯ ನಾಗರಿಕ ಸಂಹಿತೆ
3. ಭಾರತೀಯ ಸಾಕ್ಷ್ಯ ಕಾಯ್ದೆ

ನಗರದ ಜಿಲ್ಲಾ ಪಂಚಾಯತ ಹೊಸ ಸಭಾಂಗಣದಲ್ಲಿ ಕಾರ್ಮಿಕ ಇಲಾಖೆ, ಕಲಬುರಗಿ ಪ್ರಾದೇಶಿಕ ವ್ಯಾಪ್ತಿಯ ಕಲಬುರಗಿ, ಬೀದರ, ರಾಯಚೂರು, ಯಾದಗಿರಿ, ಕೊಪ್ಪಳ, ವಿಜಯನಗರ, ಬಳ್ಳಾರಿ, ಚಿತ್ರದುರ್ಗ ಹಾಗೂ ದಾವಣಗೆರೆ ಕಾರ್ಮಿಕ ಇಲಾಖೆಯ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ನಿರೀಕ್ಷಕರು ಹಾಗೂ ಸಿಬ್ಬಂದಿಗಳಿಗೆ ಆಯೋಜಿಸಿದ "ಕಾರ್ಮಿಕ ಸಂಹಿತೆಗಳ ಎರಡು ದಿನಗಳ ತರಬೇತಿ ಕಾರ್ಯಗಾರ" ವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು. ಐಪಿಸಿ, ಸಿಆರ್‌ಪಿಸಿ ಮತ್ತು ಇತರ ಕಾಯ್ದೆಗಳ ಬದಲಿಗೆ ಭಾರತೀಯ ದಂಡ ಸಂಹಿತೆ, ಭಾರತೀಯ ನಾಗರಿಕ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಗಳನ್ನು ಜಾರಿಗೆ ತರಲಾಗಿದ್ದು, ಕಾರ್ಮಿಕರ ಹಳೆಯ ಕಾಯ್ದೆಯಲ್ಲಿದ್ದ 511 ಸೆಕ್ಷನ್‌ಗಳನ್ನು 358ಕ್ಕೆ ಇಳಿಸಿ ಸೆಕ್ಷನ್‌ಗಳನ್ನು ಕಡಿಮೆ ಮಾಡಲಾಗಿದೆ ಎಂದ ಅವರು ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ನೀಡುವುದು, ಅವರ ಹಕ್ಕುಗಳನ್ನು ಸಂರಕ್ಷಿಸುವುದು ಮತ್ತು ಯಾವುದೇ ಅನಗತ್ಯ ತೊಂದರೆಯಾಗದಂತೆ ಕಾನೂನುಗಳ ಮೂಲ ಉದ್ದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡು ಜಾರಿಗೆ ತಂದಿರುವುದರ ಮುಖ್ಯ ಉದ್ದೇಶವಾಗಿದೆ.


ಉದಯವಾಹಿನಿ ಚಿತ್ರ

> ವೇತನ ಕೋಡ್, ಸಾಮಾಜಿಕ ಭದ್ರತಾ ಕೋಡ, ಔದ್ಯೋಗಿಕ ಸುರಕ್ಷತೆ ಹಾಗೂ ಕೈಗಾರಿಕಾ ಸಂಬಂಧಗಳ ಕೋಡ ಎಂಬ ನಾಲ್ಕು ಪ್ರಮುಖ ಕೋಡಗಳನ್ನು ಜಾರಿಗೆ ತರಲಾಗಿದೆ. ದೇಶದ ನೂರಕ್ಕೂ ಹೆಚ್ಚು ಕಾರ್ಮಿಕ ಕಾನೂನುಗಳನ್ನು ಕ್ರೋಢೀಕರಿಸಿ, ಅಸಂಘಟಿತ ವಲಯದ ಕಾರ್ಮಿಕರಿಗೂ ಸಾಮಾಜಿಕ ಭದ್ರತೆ ಮತ್ತು ಸೌಲಭ್ಯಗಳನ್ನು ಕಲ್ಪಿಸುವುದು ಇದರ ಮುಖ್ಯ ಉದ್ದೇಶವಾಗಿದೆ.
>
> – ಶ್ರೀನಿವಾಸ್ ನವಲೆ, ಕಾರ್ಯದರ್ಶಿ

> ಹೈಕೋರ್ಟ ಮತ್ತು ಜಿಲ್ಲಾ ಕೋರ್ಟಗಳಲ್ಲಿ ಪ್ರಾದೇಶಿಕ ಭಾಷೆ ಕನ್ನಡವನ್ನು ಬಳಸಬೇಕು ಮತ್ತು ಮಾತನಾಡುವಾಗಲೂ ಮಾತೃಭಾಷೆಗೆ ಆದ್ಯತೆ ನೀಡಬೇಕು ಹಾಗೂ ಕಾರ್ಮಿಕ ಇಲಾಖೆಗೆ ಸಂಬಂಧಿಸಿದ ಪ್ರಕರಣಗಳಿಗೆ ಕಾರ್ಮಿಕ ಕಾನೂನುಗಳ ಬಗ್ಗೆ ಸರಿಯಾದ ಪರಿಜ್ಞಾನವಿರುವ ನ್ಯಾಯಾಧೀಶರ ಅವಶ್ಯಕತೆಯಿದೆ.
>
> – ಪಿ. ವಿಲಾಸ ಕುಮಾರ, ವಕೀಲ

ಹೊಸ ಕಾಯ್ದೆಗಳು ಮತ್ತು ತಿದ್ದುಪಡಿಗಳ ಬಗ್ಗೆ ವಕೀಲರು ಹಾಗೂ ನ್ಯಾಯಾಧೀಶರು ಸಂಪೂರ್ಣವಾಗಿ ತಿಳಿದುಕೊಂಡು, ಅವುಗಳ ಸರಿಯಾದ ಅರ್ಥ ವಿವರಣೆಯನ್ನು ನೀಡಬೇಕಾದ ಜವಾಬ್ದಾರಿಯಿದೆ. ಯಾವುದೇ ಕಾನೂನು ತಂದಾಗ ಅದು ಸಂವಿಧಾನದ ಆಶಯಗಳಿಗೆ ಮತ್ತು ಕಾರ್ಮಿಕರ ಹಕ್ಕುಗಳಿಗೆ ಅನುಗುಣವಾಗಿರಬೇಕು. ಕೇವಲ ಕಾನೂನು ಜಾರಿಗೆ ತಂದರೆ ಸಾಲದು, ಅದರ ಹಿಂದಿನ ಉದ್ದೇಶವನ್ನು ಮತ್ತು ಸರಿಯಾದ ಅರ್ಥವನ್ನು ಎಲ್ಲರು ತಿಳಿದುಕೊಳ್ಳುವುದು ಮುಖ್ಯ ಎಂದರು. ಕಲಬುರಗಿ ಪ್ರಾದೇಶಿಕ ಉಪ ಕಾರ್ಮಿಕ ಆಯುಕ್ತರಾದ ಡಾ. ವೆಂಕಟೇಶ ಶಿಂದಿಹಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ, ಕೇಂದ್ರ ಸರ್ಕಾರವು ಹಳೆಯ ಕಾನೂನುಗಳನ್ನು ಸರಳೀಕರಿಸಿ ಸಮಿತಿಗಳ ರೂಪದಲ್ಲಿ ಹೊಸ ಕಾರ್ಮಿಕ ಸಂಹಿತೆಗಳನ್ನು ಜಾರಿಗೊಳಿಸಲಾಗುತ್ತಿದೆ. ಕಾರ್ಮಿಕ ನ್ಯಾಯಾಲಯಗಳ ಕೊರತೆ ಹಾಗೂ ಅಕ್ರಮ ನೇಮಕಾತಿಯಲ್ಲಿ ಉಂಟಾಗುತ್ತಿರುವ ಗೊಂದಲಗಳು ಹಾಗೂ ಅರ್ಹತಾ ಮಾನದಂಡಗಳ ಬಗ್ಗೆ ವಿಸ್ತøತವಾಗಿ ತಿಳಿಸಿದ ಅವರು ಉಮಾದೇವಿ ಪ್ರಕರಣದ ತೀರ್ಪನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗುತ್ತಿದ್ದು, ಕಾನೂನುಬದ್ಧವಾಗಿ ನೇಮಕಗೊಂಡ ನೌಕರರ ಹಿತಾಸಕ್ತಿ ಕಾಪಾಡುವುದು ಮುಖ್ಯ. ಜಿಲ್ಲೆಗಳಲ್ಲಿ ಕಾರ್ಮಿಕ ನ್ಯಾಯಾಲಯಗಳು (ಲೇಬರ್ ಕೋರ್ಟ್) ಇಲ್ಲದಿರುವ ಕಡೆಗಳಲ್ಲಿ ಅವುಗಳನ್ನು ಸ್ಥಾಪಿಸುವುದು ಹಾಗೂ ಎಲ್ಲರಿಗೂ ಸುಲಭವಾಗಿ ನ್ಯಾಯ ದೊರೆಯುವಂತೆ ಮಾಡುವುದು ಮತ್ತು ಸಂವಿಧಾನದ ಅಡಿಯಲ್ಲಿ ಕಾರ್ಮಿಕರಿಗೆ ಸಿಗಬೇಕಾದ ಮೂಲಭೂತ ಹಕ್ಕುಗಳು ಮತ್ತು ಅವುಗಳ ಅನುಷ್ಠಾನದ ಪ್ರಾಮುಖ್ಯತೆಯನ್ನು ವಿವರಿಸಿದರು.

## ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ನುರಿಸುವ ಹಂಗಾಮಿಗೆ ಚಾಲನೆ


ಉದಯವಾಹಿನಿ ಚಿತ್ರ

**ಉದಯವಾಹಿನಿ, ವಿಜಯಪುರ**
ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ಕೃಷ್ಣನಗರದ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ 2026–27ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನ ಬಾಯ್ಲರ್ ಅಗ್ನಿ ಪ್ರದೀಪನ ಹಾಗೂ ಕೇನ್ ಕ್ಯಾರಿಯರ್ ಪೂಜಾ ಕಾರ್ಯಕ್ರಮ ಸೋಮವಾರ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾರ್ಖಾನೆ ಅಧ್ಯಕ್ಷ ಕುಮಾರ ಚಂದ್ರಕಾಂತ ದೇಸಾಯಿ (ಜೈನಾಪುರ) ಮಾತನಾಡಿ, ಪ್ರಸಕ್ತ ಹಂಗಾಮಿನಲ್ಲಿ 10 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ಗುರಿ ಹೊಂದಲಾಗಿದೆ. ರೈತರು ಹೆಚ್ಚಿನ ಪ್ರಮಾಣದಲ್ಲಿ ಕಬ್ಬನ್ನು ಕಾರ್ಖಾನೆಗೆ ಕಳುಹಿಸಬೇಕು. ಮುಂಬರುವ ದಿನಗಳಲ್ಲಿ ಹೊಸ ಕಾರ್ಖಾನೆಗೆ ಚಾಲನೆ ನೀಡಲಾಗುವುದು. ಅಧಿಕಾರಿಗಳು ಹಾಗೂ ಸಿಬ್ಬಂದಿ ಹೆಚ್ಚಿನ ಶ್ರಮ ವಹಿಸಬೇಕು ಎಂದು ಹೇಳಿದರು.

ಮಮದಾಪುರದ ಅಭಿನವ ಮುರುಗೇಂದ್ರ ಸ್ವಾಮೀಜಿ ಆಶೀರ್ವಚನ ನೀಡಿ, ಕಾರ್ಖಾನೆ ಉಳಿದರೆ ನಾವೆಲ್ಲರೂ ಉಳಿಯುತ್ತೇವೆ. ನಮ್ಮ ಭಾಗದಲ್ಲಿ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ಇರುವುದು ಹೆಮ್ಮೆಯ ವಿಷಯ. ರೈತರು ಹಾಗೂ ಕಾರ್ಮಿಕರು ಕಾರ್ಖಾನೆಯ ಅಭಿವೃದ್ಧಿಗೆ ಹೆಚ್ಚಿನ ಶ್ರಮ ವಹಿಸಬೇಕು ಎಂದರು.

ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕ ಜಯರಾಮ ಆಚಾರ್ಯ ಹಾಗೂ ಹಿರಿಯ ಆಚಾರ್ಯ ರಾಮಾಚಾರಿ ಕಟ್ಟಿ ಮಾತನಾಡಿದರು. ನಿರ್ದೇಶಕ ಎಸ್.ಟಿ. ಪಾಟೀಲ ಸ್ವಾಗತಿಸಿದರು. ರಾಮಾಚಾರಿ ಕಟ್ಟಿ ವಿಧಿವಿಧಾನದೊಂದಿಗೆ ಬಾಯ್ಲರ್ ಅಗ್ನಿ ಪ್ರದೀಪನ ಹಾಗೂ ಪೂಜಾ ಕಾರ್ಯಕ್ರಮ ನೆರವೇರಿಸಿದರು. ಪ್ರಧಾನ ವ್ಯವಸ್ಥಾಪಕ ಜಯರಾಮ ಆಚಾರ್ಯ ದಂಪತಿ ಪೂಜೆಯಲ್ಲಿ ಪಾಲ್ಗೊಂಡರು.

ವಿವಿಧ ಮಠಾಧೀಶರಾದ ರುದ್ರಮುನಿ ಶಿವಾಚಾರ್ಯ, ಪ್ರಭು ತೋಂಟದಾರ್ಯ ಸ್ವಾಮೀಜಿ, ಪ್ರಭು ಮಹಾಸ್ವಾಮೀಜಿ, ಅಡವಿಸಿದ್ದೇಶ್ವರ ಸ್ವಾಮೀಜಿ, ಬಸವಲಿಂಗ ದೇವರು, ಡಾ. ಶಿವಲಿಂಗೇಶ್ವರ ಸ್ವಾಮೀಜಿ, ಡಾ. ವಿವೇಕಾನಂದ ದೇವರು, ಸದಾಶಿವಯ್ಯ ಹೊಳಿಮಠ ಹಾಗೂ ವಿಶ್ವನಾಥ ಕರಿಬಸವೇಶ್ವರ ಸ್ವಾಮೀಜಿ ಉಪಸ್ಥಿತರಿದ್ದರು.

## ಜಿಪಂ ಚುನಾವಣೆ: ಚಂದ್ರಶೆಟ್ಟಿ ಜಾಧವ ಪ್ರಬಲ ಆಕಾಂಕ್ಷಿ

**ಉದಯವಾಹಿನಿ, ಚಿಂಚೋಳಿ**
ತಾಲ್ಲೂಕಿನ ಕುಂಚಾವರಂ ಜಿಲ್ಲಾ ಪಂಚಾಯತ್ ಪರಿಶಿಷ್ಟ ಜಾತಿ ಮತಕ್ಷೇತ್ರಕ್ಕೆ ಪ್ರಬಲ ಆಕಾಂಕ್ಷಿಯಾಗಿದ್ದು ಬಿಜೆಪಿ ಹೈಕಮಾಂಡ್ ಟಿಕೆಟ್ ನೀಡಿದರೆ ಗೆಲುವು ಶತಃಸಿದ್ಧವೆಂದು ಜಿಪಂ.ಆಕಾಂಕ್ಷಿ ಅಭ್ಯರ್ಥಿ ಚಂದ್ರಶೇಟ್ಟಿ ಜಾಧವ ವಕೀಲರು ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಬಿಜೆಪಿ ಪಕ್ಷದಲ್ಲಿ ಸುಮಾರು ದಿನಗಳಿಂದ ಸಾಮಾನ್ಯ ಕಾರ್ಯಕರ್ತನಾಗಿ ಕೆಲಸ ಮಾಡುತ್ತಿದ್ದು ಮಾಜಿ ಸಂಸದ ಡಾ.ಉಮೇಶ ಜಾಧವ ಮತ್ತು ಚಿಂಚೋಳಿ ಕ್ಷೇತ್ರದ ಶಾಸಕ ಡಾ.ಅವಿನಾಶ ಜಾಧವ ಅವರ ಸೂಚನೆಯಂತೆ ಪಕ್ಷದ ಎಲ್ಲಾ ಚಟುವಟಿಕೆಗಳಲ್ಲಿ ಭಾಗಿಯಾಗಿ ಪಕ್ಷ ನೀಡಿದ ಜವಾಬ್ದಾರಿ ನಿಭಾಯಿಸಿದ್ದೇನೆ. ಕುಂಚಾವರಂ ವ್ಯಾಪ್ತಿಯಲ್ಲಿ ಬರುವ ವಿವಿಧ ಗ್ರಾಮ ತಾಂಡಾಗಳಲ್ಲಿ ಉತ್ತಮ ಜನಸಂಪರ್ಕ ಹೊಂದಿದ್ದೇನೆ ವೃತ್ತಿಯಲ್ಲಿ ವಕೀಲನಾಗಿ ಸಾರ್ವಜನಿಕರ ಬಹಳಷ್ಟು ಸಮಸ್ಯೆಗಳಿಗೆ ಪರಿಹರಿಸಿದ್ದೇನೆ ನಮ್ಮ ತಂದೆಯವರು ಸಹ ಹಿಂದೆ ತಾಲ್ಲೂಕಾ ಪಂಚಾಯತ್ ಚುನಾವಣೆಯಲ್ಲಿ ಗೆಲುವು ಸಾಧಿಸಿ ಸಾರ್ವಜನಿಕರ ಹಲವಾರು ಸಮಸ್ಯೆಗಳನ್ನು ಪರಿಹರಿಸಿದ್ದಾರೆ ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು ಸಾವಿರಾರು ಜನರು ಜಿಲ್ಲಾ ಪಂಚಾಯತ್ ಚುನಾವಣೆಗೆ ಸ್ವರ್ಧಿಸುವಂತೆ ಒತ್ತಡ ಹೇರುತ್ತಿದ್ದಾರೆ ಹಾಗಾಗಿ ಬಿಜೆಪಿ ಪಕ್ಷದ ಜಿಲ್ಲಾ ಹಾಗೂ ತಾಲ್ಲೂಕು ಮುಖಂಡರು ಮತ್ತು ಶಾಸಕರು ಮಾಜಿ ಸಂಸದರು ಬಿಜೆಪಿ ಹೈಕಮಾಂಡ್ ನನಗೆ ಕುಂಚಾವರಂ ಜಿಪಂ.ಟಿಕೆಟ್ ನೀಡಿದರೆ ಬಿಜೆಪಿ ಬಾವುಟ ಹಾರಿಸುವುದು ಶತಃಸಿದ್ಧ ಹಾಗಾಗಿ ಪಕ್ಷದ ಮುಖಂಡರು ಶಾಸಕರು ಒಮ್ಮತದಿಂದ ನನಗೆ ಆಶೀರ್ವಾದ ಮಾಡಿ ಟಿಕೆಟ್ ನೀಡಿದರೆ ಗೆಲುವು ಖಚಿತವೆಂದು ಹೇಳಿದರು.

## ದೆಹಲಿ ಹೋರಾಟದಲ್ಲಿ ಶಾಸಕ ನಾಗೇಂದ್ರ ಭಾಗಿ

**ಉದಯವಾಹಿನಿ, ಬಳ್ಳಾರಿ**
ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿ ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಒತ್ತಾಯಿಸಿ ನಿನ್ನೆ ದೆಹಲಿಯಲ್ಲಿ ಕಾಂಗ್ರೇಸ್ ಮತ್ತು ಇಂಡಿ ಮೈತ್ರಿಕೂಟದಿಂದ ನಡೆದ ಪ್ರತಿಭಟನೆಯಲ್ಲಿ ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ ಭಾಗವಹಿಸಿದ್ದರು.

ಸುಪ್ರೀಂಕೋರ್ಟ್ ಮತ್ತು ದೆಹಲಿ ಚಲೋ ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡ ನಾಗೇಂದ್ರ ಚುನಾವಣಾ ಆಯೋಗವನ್ನು ಬಳಸಿ ಬಿಜೆಪಿ ಪಕ್ಷವು ಎಸ್ ಐ ಆರ್ ಪ್ರಕ್ರಿಯೆ ಮೂಲಕ ಕರ್ನಾಟಕದಲ್ಲಿ ಅಹಿಂದ ವರ್ಗಗಳ ಮತದಾರರ ವೋಟುಗಳನ್ನು ಪಟ್ಟಿಯಿಂದ ಕಡಿತಗೊಳಿಸುವ ಹುನ್ನಾರದ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಮಾಜಿ ಸಚಿವರಾದ ಹೆಚ್.ಕೆ.ಪಾಟೀಲ್, ಲಕ್ಷ್ಮೀ ಹೆಬ್ಬಾಳ್ಕರ್, ಉಮಾಶ್ರೀ ಮೊದಲಾದವರು ಇದ್ದರು.



ಉದಯವಾಹಿನಿ ಚಿತ್ರ

**ಬಳ್ಳಾರಿ:** ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ನಿನ್ನೆ ನಗರದ ವಾಲ್ಮೀಕಿ ಸರ್ಕಲ್ ನಲ್ಲಿ ಬಸ್ಸಿನ ಸಮಸ್ಯೆಗಳ ನಿವಾರಣೆಗೆ ಒತ್ತಾಯಿಸಿ ಹೋರಾಟ ನಡೆಸಿದರು.

ಸಂಘಟನೆಯ ವಿಭಾಗ ಸಂಚಾಲಕ ಕ. ದಿಲೀಪಕುಮಾರ, ಬಳ್ಳಾರಿ ನಗರಕ್ಕೆ ಸುತ್ತಮುತ್ತಲಿನ ವಿವಿಧ ಹಳ್ಳಿಗಳಿಂದ ಪ್ರತಿದಿನ ವಿದ್ಯಾಭ್ಯಾಸಕ್ಕಾಗಿ ಆಗಮಿಸುವ ವಿದ್ಯಾರ್ಥಿಗಳು ಸಮರ್ಪಕ ಬಸ್ ಸೌಲಭ್ಯವಿಲ್ಲದೆ ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಸರಿಯಾದ ಸಮಯಕ್ಕೆ ಕಾಲೇಜು ತಲುಪಲು ಬಸ್ಗಳ ಕೊರತೆ, ಸಮಯಕ್ಕೆ ಸರಿಯಾಗಿ ಬಸ್ಗಳು ಸಂಚರಿಸದಿರುವುದು ಹಾಗೂ ಜನದಟ್ಟಣೆಯಿಂದಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆಂದರು. ಎಬಿವಿಪಿ ಕಾರ್ಯಕರ್ತ ಮನೋಜಕುಮರ್, ವಿದ್ಯಾರ್ಥಿಗಳಿಗೆ ಸಮರ್ಪಕ ಸಾರಿಗೆ ಸೌಲಭ್ಯ ಕಲ್ಪಿಸುವುದು ಅವರ ಶಿಕ್ಷಣದ ಹಕ್ಕು ಮತ್ತು ಶೈಕ್ಷಣಿಕ ಪ್ರಗತಿಗೆ ಪೂರಕವಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸಮಸ್ಯೆಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಮುಂದಿನ ಹಂತದ ಹೋರಾಟವನ್ನು ಕೈಗೊಳ್ಳಲಾಗುವುದೆಂದರು.

ಅಂತರ್ ರಾಜ್ಯ ಬಸ್ಸುಗಳಿಗೆ ವಿದ್ಯಾರ್ಥಿಗಳ ಬಸ್ಸ ಪಾಸ್ ಪರಿಗಣಿಸಲು ಅವಕಾಶ ಮಾಡಿಕೊಡಬೇಕು ಬೆಳಗ್ಗೆ ಮತ್ತು ಸಂಜೆ ತೋರಣಗಲ್ಲಿನಿಂದ ಹೊರಟು ಕುಡತಿನಿ ಮಾರ್ಗವಾಗಿ ಬಳ್ಳಾರಿಗೆ, ಬಳ್ಳಾರಿಯಿಂದ ತೋರಣಗಲ್ಲಿಗೆ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ಬಸ್ ಓಡಿಸಬೇಕು.ಕಾಲೇಜುಗಳ ಆರಂಭ ಮತ್ತು ಮುಕ್ತಾಯದ ಸಮಯಕ್ಕೆ ಅನುಗುಣವಾಗಿ ಬಸ್ಗಳ ಸಮಯವ 'ನ್ನುನಿಗದಿಪಡಿಸಬೇಕುಎಂದು ಆಗ್ರಹಿಸಿದರು. ನಗರ ಸಂಘಟನಾ ಕಾರ್ಯದರ್ಶಿ ಸಂದೀಪ ಅರಳಗುಂಡಿ, ಸಹ ಕಾರ್ಯದರ್ಶಿಗಳಾದ ರಘು, ಹರ್ಷಿತ ರೆಡ್ಡಿ, ಕಾರ್ಯಕರ್ತರಾದ ಸಿ ಡಿ ಮಹೇಶ, ದೇವೇಂದ್ರ, ಪ್ರಜ್ವಲ್, ರೇವತಿ, ಭೂಮಿಕಾ, ಸಂಗಮ್ಮ, ಕೀರ್ತಿ, ಸ್ಪಂದನಾ ಸಾಯಿ ಗಣೇಶ ಶರತ್ ಮೊದಲಾದವರು ಇದ್ದರು.

## ಭಕ್ತಿಭಾವದೊಂದಿಗೆ ಜರುಗಿದ ದುರ್ಗಾಮಾತಾ ದೌಡ

**ಉದಯವಾಹಿನಿ, ತಾಳಿಕೋಟೆ**
ಪಟ್ಟಣದಲ್ಲಿ ನವರಾತ್ರೋತ್ಸವ ಅಂಗವಾಗಿ ಹಿಂದೂ ಧಾರ್ಮಿಕ ಪದ್ಧತಿಯಂತೆ ದುರ್ಗಾಮಾತಾ ದೌಡ ಕಾರ್ಯಕ್ರಮವು ಶ್ರದ್ಧಾ ಭಕ್ತಿಭಾವದೊಂದಿಗೆ ಜರುಗಿತು.

ಪಟ್ಟಣದಲ್ಲಿಯ ಹಿಂದೂ ಭಾಂಧವರೊಂದಿಗೆ ಈ ಕಾರ್ಯಕ್ರಮವು ರಾಜವಾಡೆಯ ಶ್ರೀ ಶಿವಭವಾನಿ ಮಂದಿರದಿಂದ ಭಗವಾಧ್ವಜಾ ರೋಹಣ ಗೈಯುವದರೊಂದಿಗೆ ಸುಮಂಗಲೆಯರಿಂದ ಶ್ರೀದೇವಿಗೆ ಮಹಾ ಆರತಿ ಬೆಳಗುವದರೊಂದಿಗೆ ಪ್ರಾರಂಭಗೊಂಡ ದುರ್ಗಾಮಾತಾ ದೌಡ ಪಥಸಂಚಲನವು ಕಾಮನಕಟ್ಟೆ ಬಢಾವಣೆಯ ಶ್ರೀ ದುರ್ಗಾಮಾತೆಗೆ ಹಾಗೂ ರಜಪೂತ ಗಲ್ಲಿಯಲ್ಲಿ ಪ್ರತಿಷ್ಠಾಪಿಸಲಾದ ದುರ್ಗಾಮಾತೆಗೆ ಆರತಿ ಬೆಳಗುವ ಮೂಲಕ ಭಾವಸಾರ ಕ್ಷತ್ರೀಯ ಸಮಾಜದ ಶ್ರೀ ಅಂಬಾಭವಾನಿ ಮಂದಿರದಲ್ಲಿಯ ಶ್ರೀ ಭವಾನಿಗೆ ಮಹಾಪೂಜೆಗೈಯುವ ಮೂಲಕ ಮುನ್ನಡೆದಂತಹ ಈ ಪಥಸಂಚಲನವು ಶ್ರೀ ವಿಠ್ಠಲ ಮಂದಿರದಲ್ಲಿ ಪ್ರತಿಷ್ಠಾಪಿಸಲಾದ ಶ್ರೀ ದುರ್ಗಾದೇವಿಗೆ ಸುಮಂಗಲೆಯರು ಆರತಿ ಬೆಳಗುವದರೊಂದಿಗೆ ಭಕ್ತಿಭಾವ ಮೆರೆದರು.


ಉದಯವಾಹಿನಿ ಚಿತ್ರ

ದುರ್ಗಾಮಾತಾ ದೌಡಪಥಸಂಚಲನದಲ್ಲಿ ಪಾಲ್ಗೊಂಡ ಮುದ್ದೇಬಿಹಾಳ ಹಾಗೂ ತಾಳಿಕೋಟೆಯ ಸುಮಂಗಲೆಯರು ಹಾಗೂ ಪುರುಷರು ಮೊಳಗಿಸಿದ ಜಯಘೋಷಣೆಗಳಲ್ಲಿ ಜೈ ಭವಾನಿ, ಜೈಭವಾನಿ, ಭಾರತಮಾತಾಕೀ ಜೈ ಎಂಬ ಘೋಷಣೆಗಳು ಸ್ಪೂರ್ತಿ ತುಂಬಿತ್ತು. ಈ ಪಥಸಂಚಲನವನ್ನು ವೀಕ್ಷಿಸಲು ಜನತೆ ತಂಡೋಪತಂಡವಾಗಿ ಪಥಸಂಚಲನದ ಮಾರ್ಗದಲ್ಲಿ ಎಡಬಲ ನಿಂತು ವೀಕ್ಷಿಸಿದಲ್ಲದೇ ಸಚಲನದಲ್ಲಿ ಪಾಲ್ಗೊಂಡಂತಹ ಭಕ್ತರ ಮೇಲೆ ಹೂವಿನ ಸುರಿಮಳೆಗೈದರು. ಹಿಂದೂ ಧರ್ಮದಲ್ಲಿ ಪಾರ್ವತಿದೇವಿ ಆದಿಶಕ್ತಿಯ ಮುಖ್ಯರೂಪಗಳಲ್ಲಿ ಒಂದಾದ ಶ್ರೀ ದುರ್ಗಾದೇವಿಯನ್ನು ಸೂಚಿಸುತ್ತದೆ ದುಷ್ಟರನ್ನು ಸಂಹರಿಸಿ ಶಿಷ್ಟರನ್ನು ರಕ್ಷಿಸುವಂತಹ ಪರಮ ಶಕ್ತಿಯ ಸಂಕೇತವೇ ದುರ್ಗಾಮಾತೆಯಾಗಿದ್ದು 9 ಶಕ್ತಿಯುತ ಶಕ್ತಿದೇವತೆಗಳಲ್ಲಿ ದುರ್ಗಾದೇವಿ ಪ್ರಮುಖವಾಗಿದ್ದು ಧರ್ಮ ಮತ್ತು ಶಕ್ತಿಯ ಸಂಕೇತವಾದ ಕೈಯಲ್ಲಿ ತ್ರಿಶೂಲ ಹಿಡಿದು ಹುಲಿಯನ್ನೇರಿ ಬರುವಂತ ದುರ್ಗಾದೇವಿಯ 8 ಕೈಗಳನ್ನು ಹೊಂದಿದ್ದ.

ಯುವಜನರ ಸಾಮರ್ಥ್ಯವನ್ನು ಸಮರ್ಪಕವಾಗಿ ಬಳಸಿಕೊಂಡರೆ ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಲು ಸಾಧ್ಯ

# ಯುವಶಕ್ತಿಯಿಂದ ದೇಶ ನಿರ್ಮಾಣ ಸಾಧ್ಯ: ಸಂಸದ ಸಾಗರ್ ಖಂಡ್ರೆ

**ಉದಯವಾಹಿನಿ, ಬೀದರ್**
ತಾಲ್ಲೂಕಿನ ಯದಲಾಪುರದಲ್ಲಿರುವ ಬ್ರಹ್ಮಾಕುಮಾರೀಸ್ ಸಂಸ್ಥೆಯ ಪರಿಸರ ಸ್ನೇಹಿ ರಿಟ್ರೀಟ್ ಸೆಂಟರ್ 'ರಾಜಋಷಿ ವನ'ದಲ್ಲಿ ಎರಡು ತಿಂಗಳ ಕಾಲ ನಡೆದ ರಾಜಯೋಗಿ ರಾಜರ್ಷಿ ರೂಹಾನಿ ಸೇನೆಯ ಆಧ್ಯಾತ್ಮಿಕ, ದೈಹಿಕ ಹಾಗೂ ವಿಪತ್ತು ನಿರ್ವಹಣಾ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಭಾನುವಾರ ಅದ್ದೂರಿಯಾಗಿ ಜರುಗಿತು. ಸಂಸ್ಥೆಯ ಭದ್ರತಾ ಸೇವಾ ವಿಭಾಗದ ವತಿಯಿಂದ ಆಯೋಜಿಸಿದ್ದ ತರಬೇತಿಯಲ್ಲಿ 28 ಬ್ರಹ್ಮಚಾರಿ ಯುವಕರು ಹಾಗೂ 13 ಬ್ರಹ್ಮಾಕುಮಾರಿ ಸಹೋದರಿಯರು ಭಾಗವಹಿಸಿದ್ದರು. ಶಿಬಿರಾರ್ಥಿಗಳು ಪ್ರದರ್ಶಿಸಿದ ಶಿಸ್ತುಬದ್ಧ ಪಥಸಂಚಲನ ನೆರೆದಿದ್ದ ಗಣ್ಯರು ಹಾಗೂ ಸಾರ್ವಜನಿಕರ ಗಮನ ಸೆಳೆಯಿತು.

1. ಯುವಶಕ್ತಿ ದೇಶದ ಬಹುದೊಡ್ಡ ಆಸ್ತಿ
2. ಶಿಸ್ತು ಆತ್ಮವಿಶ್ವಾಸ ಯಶಸ್ಸಿನ ಮೂಲ
3. ಸೇವೆಯೇ ತರಬೇತಿಯ ಮುಖ್ಯ ಉದ್ದೇಶ

ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬೀದರ್ ಸಂಸದ ಸಾಗರ್ ಈಶ್ವರ್ ಖಂಡ್ರೆ ಮಾತನಾಡಿ, ಬ್ರಹ್ಮಾಕುಮಾರೀಸ್ ಸಂಸ್ಥೆಯು ಯುವಜನರನ್ನು ಆಧ್ಯಾತ್ಮಿಕವಾಗಿ ಹಾಗೂ ದೈಹಿಕವಾಗಿ ಸಶಕ್ತಗೊಳಿಸುವುದರ ಜೊತೆಗೆ ವಿಪತ್ತು ನಿರ್ವಹಣೆಗೆ ಸಜ್ಜುಗೊಳಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ ಎಂದರು. ದೇಶದಲ್ಲಿ ನೈಸರ್ಗಿಕ ವಿಕೋಪಗಳು ಹಾಗೂ ತುರ್ತು ಪರಿಸ್ಥಿತಿಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಯುವಜನರು ವಿಪತ್ತು ನಿರ್ವಹಣೆಯ ತರಬೇತಿ ಪಡೆದು ದೇಶಸೇವೆಗೆ ಮುಂದಾಗಬೇಕು. ವಿಶ್ವದಲ್ಲಿಯೇ ಅತ್ಯಧಿಕ ಯುವಶಕ್ತಿಯನ್ನು ಹೊಂದಿರುವ ರಾಷ್ಟ್ರಗಳಲ್ಲಿ ಭಾರತ ಪ್ರಮುಖವಾಗಿದೆ. ಯುವಜನರ ಸಾಮರ್ಥ್ಯವನ್ನು ಸಮರ್ಪಕವಾಗಿ ಬಳಸಿಕೊಂಡರೆ ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಲು ಸಾಧ್ಯ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ಬ್ರಹ್ಮಾಕುಮಾರೀಸ್ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿದಾಗ ಮನಸ್ಸಿಗೆ ಶಾಂತಿ, ಸಕಾರಾತ್ಮಕ ಶಕ್ತಿ ಹಾಗೂ ಸಮಾಜಕ್ಕಾಗಿ ಉತ್ತಮ ಕಾರ್ಯಗಳನ್ನು ಮಾಡುವ ಪ್ರೇರಣೆ ದೊರೆಯುತ್ತದೆ. ಮನುಷ್ಯ ಜೀವನದುದ್ದಕ್ಕೂ ವಿದ್ಯಾರ್ಥಿಯಂತೆ ಹೊಸ ವಿಷಯಗಳನ್ನು ಕಲಿಯುತ್ತಿರಬೇಕು. ನಿರಂತರ ಕಲಿಕೆಯಿಂದಲೇ ಸಮಾಜದಲ್ಲಿ ಹೊಸ ಬದಲಾವಣೆಗಳನ್ನು ತರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿದ್ದ ಭಾರತೀಯ ಸೇನೆಯ ನಿವೃತ್ತ ಕರ್ನಲ್ ಬಿ.ಕೆ. ಸತಿ ಮಾತನಾಡಿ, ಒಂದು ಯೋಜನೆಯನ್ನು ರೂಪಿಸುವುದಕ್ಕಿಂತ ಅದನ್ನು ಯಶಸ್ವಿಯಾಗಿ ಕಾರ್ಯರೂಪಕ್ಕೆ ತರುವುದು ದೊಡ್ಡ ಸವಾಲಾಗಿದೆ. ಈ ನಿಟ್ಟಿನಲ್ಲಿ ತರಬೇತಿ ಆಯೋಜಕರು ಹಾಗೂ ಶಿಬಿರಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶಿಸ್ತು, ಆತ್ಮವಿಶ್ವಾಸ, ದೃಢಸಂಕಲ್ಪ, ಸಹಕಾರ, ಸಮನ್ವಯ ಹಾಗೂ ಕರ್ತವ್ಯನಿಷ್ಠೆ ಯಾವುದೇ ಕ್ಷೇತ್ರದಲ್ಲಿ ಯಶಸ್ಸು ಸಾಧಿಸಲು ಅತ್ಯಗತ್ಯವಾಗಿವೆ.

> ರಾಜಯೋಗದ ಮೂಲಕ ಮನಸ್ಸಿನ ಶಾಂತಿ, ಧ್ಯಾನ, ಪ್ರಾಣಾಯಾಮ, ಯೋಗ, ಓಟ ಮತ್ತು ದೈಹಿಕ ವ್ಯಾಯಾಮಗಳ ಮೂಲಕ ಆರೋಗ್ಯವಂತ ಹಾಗೂ ಶಕ್ತಿಶಾಲಿ ಯುವಜನರನ್ನು ರೂಪಿಸುವ ಉದ್ದೇಶದಿಂದ ಈ ತರಬೇತಿ ಆಯೋಜಿಸಲಾಗಿತ್ತು.
>
> – ಡಾ. ಇ.ವಿ. ಸ್ವಾಮಿನಾಥನ್

> ಈ ತರಬೇತಿಯ ಉದ್ದೇಶ ಶಸ್ತ್ರಸಜ್ಜಿತ ಸೈನಿಕರನ್ನು ಸಿದ್ಧಪಡಿಸುವುದಲ್ಲ. ಬದಲಾಗಿ ಜ್ಞಾನ, ಆತ್ಮಬಲ, ಶಾಂತಿ ಹಾಗೂ ಸೇವಾ ಮನೋಭಾವವನ್ನೇ ಅಸ್ತ್ರಗಳನ್ನಾಗಿಸಿಕೊಂಡ ಆಧ್ಯಾತ್ಮಿಕ ಸೇವಕರನ್ನು ರೂಪಿಸುವುದಾಗಿದೆ.
>
> – ಬಿ.ಕೆ. ಗುರುಮೂರ್ತಿ, ಕಮಾಂಡೊ

ಯುವಜನರಲ್ಲಿ ಈ ಗುಣಗಳನ್ನು ಬೆಳೆಸುವ ಇಂತಹ ತರಬೇತಿ ಕಾರ್ಯಕ್ರಮಗಳು ದೇಶಾದ್ಯಂತ ನಡೆಯಬೇಕು ಎಂದು ಹೇಳಿದರು. ದೇಶದ ಪ್ರತಿಯೊಬ್ಬ ಯುವಕನಿಗೂ ಆತ್ಮಶಿಸ್ತು ಹಾಗೂ ಆಧ್ಯಾತ್ಮಿಕ ಸಶಕ್ತೀಕರಣದ ತರಬೇತಿ ದೊರೆಯುವಂತಾಗಬೇಕು. ಈ ಕುರಿತು ಸಂಸತ್ತಿನಲ್ಲಿ ಪ್ರಸ್ತಾಪಿಸುವಂತೆ ಸಂಸದ ಸಾಗರ್ ಖಂಡ್ರೆ ಅವರಿಗೆ ಮನವಿ ಮಾಡಿದರು. ಸೇನೆಯಲ್ಲಿ ಸೇವೆ ಸಲ್ಲಿಸುವ ಸಂದರ್ಭದಲ್ಲಿ ಆಧ್ಯಾತ್ಮಿಕ ಚಿಂತನೆ ಹಾಗೂ ರಾಜಯೋಗದಿಂದ ತಮಗೆ ದೊರೆತ ಆತ್ಮಸ್ಥೈರ್ಯ ಮತ್ತು ಸಕಾರಾತ್ಮಕ ಅನುಭವಗಳನ್ನು ಹಂಚಿಕೊಂಡರು.

ಯುವಜನರಲ್ಲಿ ಶಿಸ್ತು, ಜವಾಬ್ದಾರಿ, ಕಾರ್ಯದಕ್ಷತೆ ಹಾಗೂ ಸೇವಾ ಮನೋಭಾವ ಬೆಳೆಸಿ, ರಾಷ್ಟ್ರ ಮತ್ತು ವಿಶ್ವದ ಸಂಕಷ್ಟದ ಸಂದರ್ಭಗಳಲ್ಲಿ ಮಾನವೀಯ ಸೇವೆ ಸಲ್ಲಿಸಲು ಸಿದ್ಧಗೊಳಿಸುವುದು ಶಿಬಿರದ ಪ್ರಮುಖ ಗುರಿಯಾಗಿದೆ ಎಂದರು.

## ಮಿನಿ ನ್ಯೂಸ್

### ಎಲ್ಲಾ ಪಕ್ಷಗಳ ಕಳ್ಳರು ವಿದೇಶದಲ್ಲಿ ಆಸ್ತಿ ಮಾಡಿದ್ದಾರೆ

**ಉದಯವಾಹಿನಿ, ವಿಜಯಪುರ**
ಭೀಕರ ಬರಗಾಲ ಹಿನ್ನೆಲೆಯಲ್ಲಿ ರೈತರಿಗೆ ಪರಿಹಾರ ವಿತರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಆರು ತಿಂಗಳ ವೇತನವನ್ನು ದೇಣಿಗೆಯಾಗಿ ನೀಡಲಾಗುವುದು ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಘೋಷಿಸಿದ್ದಾರೆ.



ರೈತರಿಗೆ ಪರಿಹಾರ ನೀಡಲು ಒತ್ತಾಯಿಸಿ, ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ ಕುಮಾರ್ ಅವರ ತೇಜೋವಧೆ ಮಾಡಿ ಅರಾಜಕತೆ ಸೃಷ್ಟಿ ಮಾಡುತ್ತಿರುವ ರಾಷ್ಟ್ರ ವಿರೋಧಿ ಶಕ್ತಿಗಳ ವಿರುದ್ಧ ಸೋಮವಾರ ನಗರದಲ್ಲಿ ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು. ಬರಗಾಲ ಪರಿಸ್ಥಿತಿಯಿಂದ ತೊಂದರೆ ಎದುರಿಸುತ್ತಿರುವ ರೈತರಿಗೆ ಕೇವಲ 2,500 ರೂ. ಇನ್ಪುಟ್ ಸಬ್ಸಿಡಿಯನ್ನು ಸರ್ಕಾರ ನೀಡಿದೆ ಎಂದು ಅಸಮಾಧಾನ ಹೊರಹಾಕಿದರು.
ರೈತರ ಪರವಾಗಿ ಯಾವ ಒಬ್ಬ ಶಾಸಕರು ಸಹ ಮಾತನಾಡಲು ತಯಾರಿಲ್ಲ. ಮಂತ್ರಿ ಸ್ಥಾನಕ್ಕಾಗಿ ಕೆಲ ಶಾಸಕರು ರಾಜೀನಾಮೆ ಕೊಡಲು ಹೋಗಿದ್ದರು. ಈಗ ರೈತರಿಗಾಗಿ ರಾಜೀನಾಮೆ ಕೊಡಲು ಮುಂದೆ ಬರಲಿ ನೋಡೋಣ. ರೈತರಿಗಾಗಿ ಎಲ್ಲಾ ಶಾಸಕರು ತಮ್ಮ ಸಂಬಳ ಕೊಡಲಿ ಎಂದು ಸವಾಲು ಹಾಕಿದರು.
ಈಗ ಸರ್ಕಾರ ಘೋಷಿಸಿರುವ 2,500 ರೂ.ಗಳನ್ನು ಗಂಡ–ಹೆಂಡತಿ ಸೇರಿ ಒಂದೇ ದಿನಕ್ಕೆ ದುಡಿಯುತ್ತಾರೆ. ಈ ಹಣ ತರಕಾರಿ ಮಾರಾಟ ಮಾಡುವವರು ಹಾಗೂ ಹಮಾಲಿಗಳ ಒಂದು ದಿನದ ಗಳಿಕೆಯಾಗಿದೆ. ರೈತರ ಬೀಜ ಹಾಗೂ ಗೊಬ್ಬರಕ್ಕೆ ಆಗುವಷ್ಟು ಪರಿಹಾರವಾದರೂ ನೀಡಬೇಕು. ಅದೂ ಆಗದಿದ್ದರೆ ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಎಂದ ಕಿಡಿಕಾರಿದ ಯತ್ನಾಳ್, ರೈತರಿಗೆ ಕನಿಷ್ಠ 25 ಸಾವಿರ ರೂ. ಪರಿಹಾರ ಕೊಡಬೇಕು ಎಂದು ಆಗ್ರಹಿಸಿದರು.

### ಗಮನ ಸೆಳೆದ ನಿವೃತ್ತ ವಾರ್ತಾಧಿಕಾರಿಯ ಸುಗಮ ಸಂಗೀತ

**ಉದಯವಾಹಿನಿ, ಬೀದರ**
ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ 2026ರ ಅಂಗವಾಗಿ ಮೈಸೂರಿನ ಕರ್ನಾಟಕ ಕಲಾ ಮಂದಿರದಲ್ಲಿ ಸೋಮವಾರ ಸಂಜೆ ಜರುಗಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಗೋರ ಚಿಂಚೋಳಿ ಗ್ರಾಮದ ನಿವೃತ್ತ ವಾರ್ತಾಧಿಕಾರಿ ಜಿ. ಚಂದ್ರಕಾಂತ ಅವರ ಸುಗಮ ಸಂಗೀತ ಗಾಯನ ಎಲ್ಲರ ವಿಶೇಷ ಗಮನ ಸೆಳೆಯಿತು. ಸುಗಮ ಸಂಗೀತದಲ್ಲಿ ಚಂದ್ರಕಾಂತ ಅವರು ಬಸವಣ್ಣನವರ ವಚನ, ಪುರಂದರದಾಸರ ಪದಗಳು ಹಾಗೂ ಕುವೆಂಪು ಅವರ ಭಾವಗೀತೆಗಳನ್ನು ವಿವಿಧ ರಾಗಗಳಲ್ಲಿ ಸುಶ್ರಾವ್ಯವಾಗಿ ಹಾಡಿ ಎಲ್ಲರ ಮನ ಸೂರೆಗೊಂಡರು. ವಿಶೇಷವಾಗಿ ಕುವೆಂಪು ಅವರ "ಕಲ್ಲಿನಲ್ಲಿ ಕೆತ್ತಿದನು ಶಿಲ್ಪಿ " ಗೀತೆ ಶಿವರಂಜನಿ ರಾಗದಲ್ಲಿ ಮತ್ತು "ಯಾವ ಕಾಲದ ಶಾಸ್ತ್ರ " ಗೀತೆ ಮಾಲಕಂಸ ರಾಗದಲ್ಲಿ ಹಾಡಿದಾಗ ಸಭಿಕರು ಎರಡೂ ಗೀತೆಗಳ ಭಾವಾರ್ಥಕ್ಕೆ ಮಾರುಹೋಗಿ ಚಪ್ಪಾಳೆ ತಟ್ಟಿ ಹರ್ಷ ವ್ಯಕ್ತಪಡಿಸಿದರು. ಅಂತಿಮವಾಗಿ ಸೊಹನಿ ರಾಗದಲ್ಲಿ ಬಸವಣ್ಣನವರ "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ." ವಚನವನ್ನು ಹಾಡಿ ಸುಗಮ ಸಂಗೀತದ ಗಾಯನಕ್ಕೆ ತೆರೆ ಎಳೆದರು. ಇವರ ಸುಗಮ ಸಂಗೀತ ಗಾಯನಕ್ಕೆ ಶಿವದೇವಸ್ವಾಮಿ ಹಾರ್ಮೋನಿಯಂ, ರಾಮಪ್ಪ ಪರಮಪ್ಪ ಹೂಗಾರ ತಬಲಾ ಹಾಗೂ ಮೌನೇಶ್ವರಿ ತಾಳವಾದ್ಯ ಸಾಥ್ ನೀಡಿದರು.

### ಪ್ರತ್ಯೇಕ ಅಪಘಾತ: ಇಬ್ಬರು ಸಾವು

**ಉದಯವಾಹಿನಿ, ಕಲಬುರಗಿ**
ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ಶಹಾಬಾದ ರಿಂಗ್ ರೋಡ್ ಕಡೆಯಿಂದ ನಂದೂರ ಕಡೆಗೆ ಹೋಗುವ ರಸ್ತೆ ಮತ್ತು ನಗರದ ಶ್ರೀರಾಮ ಯಾರ್ಡ್ ಹತ್ತಿರ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ. ಶಹಾಬಾದ ರಿಂಗ್ ರೋಡ್ ಕಡೆಯಿಂದ ನಂದೂರ ಕಡೆಗೆ ಹೋಗುವ ರಸ್ತೆಯಲ್ಲಿ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ 50–60 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಗೆ ಯಾವುದೋ ವಾಹನ ಡಿಕ್ಕಿ ಹೊಡೆದು ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಮೃತ ವ್ಯಕ್ತಿ 5 ಅಡಿ 6 ಇಂಚು ಎತ್ತರವಿದ್ದು, ನೆಹರು ಶರ್ಟ್ ಮತ್ತು ಬಿಳಿ ಬಣ್ಣದ ಪ್ಯಾಂಟ್ ಧರಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಗುಬ್ಬಿ ಕಾಲೋನಿಯ ಆನಂದ ವಾಘಮೋರೆ ಎಂಬುವವರು ಈ ಬಗ್ಗೆ ಸಂಚಾರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ಇನ್ನೊಂದು ಪ್ರಕರಣದಲ್ಲಿ ಚಿತ್ತಾಪುರದಿಂದ ಕಲಬುರಗಿ ಕಡೆಗೆ ಮಗ–ತಾಯಿ ಬೈಕ್ ಮೇಲೆ ಬರುತ್ತಿದ್ದಾಗ ಶ್ರೀರಾಮ ಯಾರ್ಡ್ ಹತ್ತಿರ ತಾಯಿ ಬೈಕ್ ಮೇಲಿಂದ ಬಿದ್ದು, ಗಂಭೀರವಾಗಿ ಗಾಯಗೊಂಡಿದ್ದರು. ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತಪಟ್ಟಿದ್ದಾರೆ. ಮೃತ ಮಹಿಳೆಯನ್ನು ಚಿತ್ತಾಪುರ ಪಾಲಪಗಲ್ಲಿಯ ಶಾಮಬಾಯಿ ನಾಗಣ್ಣ ಯಾದವ್ (59) ಎಂದು ಗುರುತಿಸಲಾಗಿದೆ.

### ಡಾ.ಸುಧಾ ಯಾದವ್ ರಾಜ್ಯದ ನೂತನ ರಾಜ್ಯಪಾಲರು

**ಉದಯವಾಹಿನಿ, ಬಳ್ಳಾರಿ**
ಕರ್ನಾಟಕದ ನೂತನ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆ ಹರಿಯಾಣದ ಡಾ. ಸುಧಾ ಯಾದವ್ ಇವರು ಥಾವರ್ ಚಂದ್ ಗೆಹ್ಲೋಟ್ ಅವರ ಉತ್ತರಾಧಿಕಾರಿಯಾಗಿದ್ದಾರೆ. ಇವರು ಅಕ್ಟೋಬರ್ 16, 1965 ರಂದು ಹರಿಯಾಣದ ರೇವಾರಿ ಜಿಲ್ಲೆಯ ಮೋತ್ಲಾ ಕಲಾನ್ ಗ್ರಾಮದಲ್ಲಿ ಜನಿಸಿದರು. ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು, ರೂರ್ಕಿ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದಾರೆ. ಇವರು 1999 ರ ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಗಡಿ ಭದ್ರತಾ ಪಡೆಯ ಡೆಪ್ಯುಟಿ ಕಮಾಂಡೆಂಟ್ ಸುಖಬೀರ್ ಸಿಂಗ್ ಯಾದವ್ ಅವರ ಪತ್ನಿ. 2019 ರಿಂದ 2022 ರವರೆಗೆ ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.



### ಶರಣಪ್ಪ ಮಟ್ಟೂರು ಪರ ಕೈ ಮುಖಂಡರಿಂದ ಮತ ಯಾಚನೆ

**ಉದಯವಾಹಿನಿ, ಬಳ್ಳಾರಿ**
ಈಶಾನ್ಯ ಕರ್ನಾಟಕ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯ ಕಾಂಗ್ರೇಸ್ ಅಭ್ಯರ್ಥಿ ಶರಣಪ್ಪ ಮಟ್ಟೂರು ಅವರ ಪರವಾಗಿ ಬಳ್ಳಾರಿ ನಗರದ ಎಸ್ ಜಿ ಕಾಲೇಜು, ಲಾ ಕಾಲೇಜು, ಅಲ್ಲಂ ಸುಮಂಗಳಮ್ಮ ಕಾಲೇಜು ಹಾಗೂ ಪ್ಯೂಪಿಲ್ ಟ್ರೀ ಸ್ಕೂಲು ಮತ್ತು ಕಾಲೇಜು, ಬಸವರಾಜೇಶ್ವರಿ ಪಬ್ಲಿಕ್ ಸ್ಕೂಲ್ ಮತ್ತು ಕಾಲೇಜು ನಲ್ಲಿ ನಿನ್ನೆ ಡಿಸಿಸಿ ಅಧ್ಯಕ್ಷ ಅಲ್ಲಂ ಪ್ರಶಾಂತ್ ಅವರ ನೇತೃತ್ವದಲ್ಲಿ ಮತಯಾಚನೆ ಮಾಡಲಾಯಿತು ಡಿ.ಸಿ.ಸಿ. ಕಾರ್ಯಾಧ್ಯಕ್ಷ ಬೋಯಪಾಟಿ ವಿಷ್ಣುವರ್ಧನ, ಮುಖಂಡರಾದ ಸತೀಶ್ ಕಾಂಡ್ರಾ, ಸೇವದಾಳ ಅಧ್ಯಕ್ಷರಅತಾವುಲ್ಲಾ, ಮಲ್ಲೇಶರಿ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಗ್ಗೆ | 07:30 ರಿಂದ 09:00 |

**ಮೇಷ**
ನಿಮ್ಮ ಹಠಮಾರಿ ಧೋರಣೆ ಕೇವಲ ಸಮಯ ವ್ಯರ್ಥವಾದದ್ದರಿಂದ ಆದನ್ನು ನಿಮ್ಮ ಸಂತೋಷದ ಜೀವನದ ಸಲುವಾಗಿ ತೊರೆದುಬಿಡಿ. ಹಣ ನಿಮಗೆ ಅಗತ್ಯವಾಗಿದೆ ಆದರೆ ನಿಮ್ಮ ಸಂಬಂಧಗಳನ್ನು ಹಾಳುಮಾಡುವಷ್ಟು ಹಣದ ಬಗ್ಗೆ ಗಂಭೀರವಾಗಬೇಡಿ.

**ವೃಷಭ**
ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ, ಇದರಿಂದ ನೀವು ಹಣದ ಲಾಭವನ್ನು ಪಡೆಯಬಹುದು.

**ಮಿಥುನ**
ನಗುವಿನ ಚಿಕಿತ್ಸೆ ಎಲ್ಲಾ ಸಮಸ್ಯೆಗಳಿಗೂ ಮದ್ದಾಗಿರುವುದರಿಂದ ನಿಮ್ಮ ಅನಾರೋಗ್ಯ ಗುಣಪಡಿಸಲು ನಗುವಿನ ಚಿಕಿತ್ಸೆ ಬಳಸಿ. ಇಂದು ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿಕೆ ಮಾಡುವವರು ತಮ್ಮ ಹಣವನ್ನು ಕಳೆದುಕೊಳ್ಳಬಹುದು

**ಕರ್ಕಾಟಕ**
ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ವಿದೇಶಿ ಸಂಪರ್ಕಗಳನ್ನು ಹೊಂದಿರುವ ವ್ಯಾಪಾರಿಗಳಿಗೆ ಇಂದು ಹಣದ ನಷ್ಟವಾಗುವ ಸಾಧ್ಯತೆ ಇದೆ ಆದ್ದರಿಂದ ಇಂದು ಯೋಚಿಸಿ ಅರ್ಥಮಾಡಿಕೊಂಡು ನಡೆಯಿರಿ. ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸಲು ಹೊಸ ತಂತ್ರಗಳಿಗೆ ಹೊಂದಿಕೊಳ್ಳಿ.

**ಸಿಂಹ**
ನಿಮ್ಮ ಕುಂದಿದ ಜೀವಂತಿಕೆ ವ್ಯವಸ್ಥೆಯಲ್ಲಿ ದೀರ್ಘಕಾಲೀನ ವಿಷದಂತೆ ವರ್ತಿಸುತ್ತದೆ. ನಿಮ್ಮನ್ನು ಸೃಜನಶೀಲ ಕೆಲಸದಲ್ಲಿ ತೊಡಗಿಸಿಕೊಳ್ಳುವುದು. ಇಂದು ನಿಮಗೆ ಹಣದ ಲಾಭವಾಗುವ ಪೂರ್ತಿ ಸಾಧ್ಯತೆ ಇದೆ. ಆದರೆ ಇದರೊಂದಿಗೆ ನೀವು ದಾನವನ್ನು ಸಹ ಮಾಡಬೇಕು.

**ಕನ್ಯಾ**
ನಿಮ್ಮ ಆರೋಗ್ಯ ಸುಧಾರಿಸಲು ಸಹಕಾರಿಯಾಗುವ ಕೆಲಸಗಳನ್ನು ಮಾಡಬಹುದಾದ ಒಂದು ದಿನ. ಈ ರಾಶಿಚಕ್ರದ ಕೆಲವು ಜನರಿಗೆ ಇಂದು ಮಕ್ಕಳ ಬದಿಯಿಂದ ಆರ್ಥಿಕ ಲಾಭವನ್ನು ಪಡೆಯುವ ಭರವಸೆ ಇದೆ. ಇಂದು ನೀವು ನಿಮ್ಮ ಮಕ್ಕಳ ಮೇಲೆ ಹೆಮ್ಮೆಯನ್ನು ಅನುಭವಿಸುವಿರಿ.

**ತುಲಾ**
ನಿಮ್ಮನ್ನು ನೀವೇ ಅನಗತ್ಯವಾಗಿ ದೂಷಿಸುವುದು ನಿಮ್ಮ ಚೈತನ್ಯವನ್ನು ಕುಗ್ಗಿಸಬಹುದು. ನೀವು ಮನೆಯಿಂದ ಹೊರ ಇದ್ದು ಉದ್ಯೋಗ ಅಥವಾ ಅಧ್ಯಯನ ಮಾಡುತ್ತಿದ್ದರೆ, ನಿಮ್ಮ ಹಣ ಮತ್ತು ಸಮಯವನ್ನು ವ್ಯರ್ಥ ಮಾಡುವಂತಹ ಜನರಿಂದ ದೂರವಿರುವುದು ಒಳಿತು.

**ವೃಶ್ಚಿಕ**
ನಿಮ್ಮ ಹಠಾತ್ ಪ್ರವೃತ್ತಿ ನಿಮಗೆ ಗಂಭೀರವಾದ ಆರೋಗ್ಯದ ಸಮಸ್ಯೆಗಳನ್ನು ಉಂಟುಮಾಡಬಹುದು. ಈ ರಾಶಿಚಕ್ರದ ದೊಡ್ಡ ಉದ್ಯಮಿಗಳು ಇಂದು ತುಂಬಾ ಯೋಚಿಸಿ ಅರ್ಥಮಾಡಿಕೊಂಡು ಹಣದ ಹೂಡಿಕೆ ಮಾಡುವ ಅಗತ್ಯವಿದೆ.

**ಧನಸ್ಸು**
ಮೋಜಿಗಾಗಿ ಹೊರಹೋಗುವವರಿಗೆ ಸಂತೋಷ ಮತ್ತು ಆನಂದವನ್ನು ಹಂಚಿಕೊಳ್ಳಿ. ವೆಚ್ಚ ಏರಿದರೂ ಆದಾಯದಲ್ಲಿನ ಹೆಚ್ಚಳ ನಿಮ್ಮ ಖರ್ಚುಗಳನ್ನು ನೋಡಿಕೊಳ್ಳುತ್ತದೆ. ನೀವು ಪ್ರೀತಿಪಾತ್ರರ ಜೊತೆ ವಾದಗಳಿಗೆ ಕಾರಣವಾಗಬಹುದಾದ ವಿವಾದಾತ್ಮಕ ವಿಷಯಗಳನ್ನು ತಪ್ಪಿಸಬೇಕು.

**ಮಕರ**
ಅನಗತ್ಯ ಆಲೋಚನೆಗಳು ನಿಮ್ಮ ಮನಸ್ಸನ್ನು ಆವರಿಸಬಹುದು. ಖಾಲಿ ಮೆದುಳು ದೆವ್ವಗಳ ಕಾರ್ಖಾನೆಯಾದ್ದರಿಂದ ದೈಹಿಕ ವ್ಯಾಯಾಮದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಪ್ರಯತ್ನಿಸಿ. ಡೈರಿ ಉದ್ಯಮಕ್ಕೆ ಸೇರಿರುವವರು ಇಂದು ಆರ್ಥಿಕ ಲಾಭವನ್ನು ಪಡೆಯುವ ಪ್ರಬಲ ಸಾಧ್ಯತೆ ಇದೆ.

**ಕುಂಭ**
ಮನರಂಜನೆ ಮತ್ತು ಮೋಜಿನ ಒಂದು ದಿನ. ಯಾರ ಹತ್ತಿರವಾದರು ಸಾಲವನ್ನು ತೆಗೆದುಕೊಂಡಿರುವ ಜನರು, ಇಂದು ಯಾವುದೇ ಪರಿಸ್ಥಿತಿಯಲ್ಲೂ ಸಾಲವನ್ನು ಮರುಪಾವತಿಸಬೇಕಾಗುತ್ತದೆ. ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ದುರ್ಬಲವಾಗುತ್ತದೆ.

**ಮೀನ**
ನಿಮ್ಮ ಸುತ್ತಲಿನ ಸುಮಾರು ತುಂಬ ಬೇಡಿಕೆಯಿಡುತ್ತಾರೆಂದು ನಿಮಗನಿಸುತ್ತದೆ–ನಿಮಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ಮಾಡಲು ಒಪ್ಪಿಕೊಳ್ಳಬೇಡಿ– ಮತ್ತು ಇತರರನ್ನು ಸಂತೋಷಪಡಿಸಲು ನಿಮ್ಮ ಮೇಲೆ ಒತ್ತಡ ಹಾಕಬೇಡಿ.

34 ಜಿಲ್ಲಾ ಪಂಚಾಯತ್ ಕ್ಷೇತ್ರಗಳಿದ್ದು, ಈ ಹಿಂದೆ 12ರಷ್ಟಿದ್ದ ಎಸ್‌ಸಿ ಮೀಸಲು ಕ್ಷೇತ್ರಗಳನ್ನು ಯಾವುದೇ ಸ್ಪಷ್ಟ ಕಾರಣವಿಲ್ಲದೆ 9ಕ್ಕೆ ಇಳಿಸಲಾಗಿದೆ

# ಮೀಸಲಾತಿ ಕೈಬಿಟ್ಟಿದ್ದಕ್ಕೆ ಆಕ್ರೋಶ: 16ರಂದು ಉಗ್ರ ಹೋರಾಟದ ಎಚ್ಚರಿಕೆ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಬೀದರ್**
ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ 6 ಜಿಲ್ಲಾ ಪಂಚಾಯತ್ ಕ್ಷೇತ್ರಗಳ ಪೈಕಿ ಒಂದೇ ಒಂದು ಕ್ಷೇತ್ರವನ್ನೂ ಪರಿಶಿಷ್ಟ ಜಾತಿಗೆ ಮೀಸಲಿಡದೆ ದಲಿತ ಸಮುದಾಯಕ್ಕೆ ತೀವ್ರ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿ, ಬೀದರ್ ದಕ್ಷಿಣ ಕ್ಷೇತ್ರದ ಎಸ್‌ಸಿ ಜಿಲ್ಲಾ ಪಂಚಾಯತ್ ಹೋರಾಟ ಸಮಿತಿ ಆಕ್ರೋಶ ವ್ಯಕ್ತಪಡಿಸಿದೆ. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಸಮಿತಿಯ ಪ್ರಚಾರ ಸಮಿತಿಯ ಸಲಹೇಗಾರ ರಾಜಕುಮಾರ ಸಿಂಧೆ, ಹಾಲಿ ಮತ್ತು ಮಾಜಿ ಶಾಸಕರು ಹಾಗೂ ಜಿಲ್ಲಾಡಳಿತದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

> 1. ಎಸ್‌ಟಿ ಜನಸಂಖ್ಯೆ ಶೇ. 42.96 ರಷ್ಟಿದೆ
> 2. ಸಾಮಾನ್ಯ ಮಹಿಳೆಗೆ ಮೀಸಲಿಡಲಾಗಿತ್ತು
> 3. ವೋಟ್ ಬ್ಯಾಂಕ್ ಆಗಿ ಬಳಸಿಕೊಳ್ಳಬೇಕು

ಬೀದರ್ ಜಿಲ್ಲೆಯಲ್ಲಿ ಒಟ್ಟು 34 ಜಿಲ್ಲಾ ಪಂಚಾಯತ್ ಕ್ಷೇತ್ರಗಳಿದ್ದು, ಈ ಹಿಂದೆ 12ರಷ್ಟಿದ್ದ ಎಸ್‌ಸಿ ಮೀಸಲು ಕ್ಷೇತ್ರಗಳನ್ನು ಯಾವುದೇ ಸ್ಪಷ್ಟ ಕಾರಣವಿಲ್ಲದೆ 9ಕ್ಕೆ ಇಳಿಸಲಾಗಿದೆ. ಬೀದರ್ ದಕ್ಷಿಣ ಕ್ಷೇತ್ರದಲ್ಲಿ 80 ಸಾವಿರಕ್ಕೂ ಅಧಿಕ ದಲಿತ ಮತದಾರರಿದ್ದಾರೆ. ಕ್ಷೇತ್ರದಲ್ಲಿ ಎಸ್‌ಸಿ ಮತ್ತು ಎಸ್‌ಟಿ ಜನಸಂಖ್ಯೆ ಶೇ. 42.96 ರಷ್ಟಿದೆ. ಹೀಗಿದ್ದರೂ 6 ಜಿ.ಪಂ ಕ್ಷೇತ್ರಗಳಲ್ಲಿ ಒಂದನ್ನೂ ಎಸ್‌ಸಿ ಸಮುದಾಯಕ್ಕೆ ಮೀಸಲಿಟ್ಟಿಲ್ಲ. ಬೇಮಳಖೇಡ ಹಾಗೂ ಔರಾದ್ (ಎಸ್) ಕ್ಷೇತ್ರಗಳನ್ನು ಈ ಹಿಂದೆಯೂ ಸಾಮಾನ್ಯ ಮಹಿಳೆಗೆ ಮೀಸಲಿಡಲಾಗಿತ್ತು, ಈಗಲೂ ಅದೇ ಮೀಸಲಾತಿ ಮುಂದುವರಿಸಲಾಗಿದೆ ಹಾಗೂ ಬಗ್ದಲ್, ಕಮಠಾಣ, ಮನ್ನಳ್ಳಿ ಕ್ಷೇತ್ರಗಳನ್ನು ಸಾಮಾನ್ಯ ವರ್ಗಕ್ಕೆ ನೀಡಲಾಗಿದೆ. ಹಿಂದುಳಿದ ಪ್ರದೇಶವಾದ ಬೇಮಳಖೇಡ ಹಾಗೂ ಔರಾದ್ (ಎಸ್) ಸೇರಿದಂತೆ ಅನುಪಾತದ ಆಧಾರದ ಮೇಲೆ ಕನಿಷ್ಠ 2 ರಿಂದ 3 ಕ್ಷೇತ್ರಗಳನ್ನು ಎಸ್‌ಸಿ ಮೀಸಲು ಕ್ಷೇತ್ರವನ್ನಾಗಿ ಘೋಷಿಸಬೇಕಿತ್ತು ಎಂದು ಅವರು ಆಗ್ರಹಿಸಿದರು. ಇದೇ 16ರಂದು ಹಮ್ಮಿಕೊಂಡಿರುವ ಹೋರಾಟದಲ್ಲಿ ಬೀದರ್ ದಕ್ಷಿಣ ಕ್ಷೇತ್ರದ ದಲಿತ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಹೋರಾಟ ಸಮಿತಿಯ ರಾಜಕುಮಾರ್ ಸಿಂಧೆ ಮನವಿ ಮಾಡಿದರು.

> ದಲಿತರ ಮತಗಳನ್ನು ಪಡೆದು ಗೆದ್ದಿರುವ ಹಾಲಿ ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ ಹಾಗೂ ಕಾಂಗ್ರೆಸ್ ಸರ್ಕಾರದಲ್ಲಿ ಜವಾಬ್ದಾರಿ ಸ್ಥಾನದಲ್ಲಿರುವ ಮಾಜಿ ಶಾಸಕ ಅಶೋಕ ಖೇಣಿ ಅವರು ಈ ಅನ್ಯಾಯದ ಬಗ್ಗೆ ತುಟಿ ಬಿಚ್ಚುತ್ತಿಲ್ಲ. ಸಲ್ಲಿಸುವ ವರದಿ ಆಧಾರದ ಮೇಲೆ ಮೀಸಲಾತಿ ಪ್ರಕಟವಾಗುವುದರಿಂದ ಈ ಅನ್ಯಾಯಕ್ಕೆ ಇವರೇ ನೇರ ಹೊಣೆ.
> – ಗೌತಮ ಬಗ್ದಲಕರ್

> ಪ್ರಸ್ತುತ ಪ್ರಕಟವಾಗಿರುವುದು ತಾತ್ಕಾಲಿಕ ಪಟ್ಟಿಯಾಗಿದ್ದು, ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶವಿದೆ. ಸಂವಿಧಾನದ ಆರ್ಟಿಕಲ್ 243(ಆ) ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಅಡಿಯಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು.
> – ದಿಲೀಪಕುಮಾರ ವರ್ಮಾ

ಸಮಿತಿಯ ಉಪಾಧ್ಯಕ್ಷ ವೀರಶೆಟ್ಟಿ ಬಂಬುಳಗಿ ಮಾತನಾಡಿ, ಸ್ವಾಭಿಮಾನಿ ದಲಿತ ಹೋರಾಟಗಾರರು ಹಾಗೂ ಆಕಾಂಕ್ಷಿಗಳು ರಾಜಕೀಯವಾಗಿ ಬೆಳೆಯಬಾರದು ಮತ್ತು ದಲಿತರನ್ನು ಕೇವಲ ವೋಟ್ ಬ್ಯಾಂಕ್ ಆಗಿ ಬಳಸಿಕೊಳ್ಳಬೇಕು ಎಂಬ ಉದ್ದೇಶದಿಂದ ಕಾಂಗ್ರೆಸ್, ಬಿಜೆಪಿ ಹಾಗೂ ಜೆಡಿಎಸ್‌ನ ಮನುವಾದಿ ನಾಯಕರು ನಡೆಸಿರುವ ದೊಡ್ಡ ಷಡ್ಯಂತ್ರ ಇದಾಗಿದೆ ಎಂದು ಕಿಡಿ ಕಾರಿದರು.

ಬರುವ 16ನೇ ತಾರೀಖಿನೊಳಗೆ ಈ ತಪ್ಪನ್ನು ಸರಿಪಡಿಸಿ ಎಸ್‌ಸಿ ಮೀಸಲಾತಿ ಘೋಷಿಸದಿದ್ದರೆ, ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಹಾಗೂ ಚುನಾವಣಾ ಆಯೋಗಕ್ಕೆ ಆಕ್ಷೇಪಣೆ ಸಲ್ಲಿಸಿ, ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳನ್ನು ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಲಾಗುವುದು. ಅಲ್ಲದೆ ನ್ಯಾಯಕ್ಕಾಗಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಲಾಗುವುದು ಎಂದು ತಿಳಿಸಿದರು. ಸಮಿತಿಯ ಸಲಹೇಗಾರ ರಾಜಕುಮಾರ ಜ್ಯೋತಿ ಮಾತನಾಡಿದರು.

## ಮುಧೋಳ ಜಿಪಂ ಕ್ಷೇತ್ರಕ್ಕೆ ಚಂದ್ರು ದೇಸಾಯಿ ಸ್ವತಂತ್ರ ಅಭ್ಯರ್ಥಿ ಸ್ಪರ್ಧೆ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಯಲಬುರ್ಗಾ**
ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಮೀಸಲಾತಿ ಈಗಾಗಲೇ ನಿಗದಿಯಾಗಿದೆ. ಚಂದ್ರಶೇಖರ ದೇಸಾಯಿ ತಾಲ್ಲೂಕಿನ ಮುಧೋಳ ಜಿಪಂ ಕ್ಷೇತ್ರ ಹಿಂದುಳಿದ ವರ್ಗ ಮೀಸಲು ನಿಗದಿಯಾಗಿದ್ದು ನಾನು ಸ್ವತಂತ್ರ ಅಭ್ಯರ್ಥಿಯಾಗಿದ್ದೇನೆ ಸಮಾಜ ಸೇವೆಯೆ ನನ್ನ ಗುರಿ ಆಗಬೇಕು ಎಂದರು.

ತಾಲ್ಲೂಕಿನ ಮುಧೋಳ ಗ್ರಾಮದ ಹುಲಿಗೆಮ್ಮ ದೇವಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಮಾಧ್ಯಮ ದವರಿಗೆ ಮಾತನಾಡಿ ಮುಧೋಳ ಜಿಪಂ ಕ್ಷೇತ್ರ ಚುನಾವಣೆ ಎದುರಿಸಲು ಚಂದ್ರಶೇಖರ ದೇಸಾಯಿ ಅವರ ಅಭಿಮಾನ ಬಳಗದವರು ಸೇರಿಕೊಂಡು ಹುಲಿಗೆಮ್ಮ ದೇವಿ ದರ್ಶನ ಪಡೆದು ಪೂಜೆ ಸಲ್ಲಿಸಿ ಮಾತನಾಡಿದರು.

**ಹಿನ್ನಲೆ:** ದಿವಂಗತರಾದ ಹನುಮಂತ್ ರಾವ್ ದೇಸಾಯಿ ಮನೆತನವು ಐತಿಹಾಸಿಕವಾಗಿ ಜನಪರ ಕಾರ್ಯಗಳಿಗೆ, ಬಡವರ ಸೇವೆಗೆ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ಅಮೂಲ್ಯವಾದ ಕೊಡುಗೆ ಇದೆ. ಈ ದೇಸಾಯಿ ಮನೆತನದವರು ಗ್ರಾಮದಲ್ಲಿ ಸರ್ಕಾರಿ ಶಾಲೆಗಳು ತಲೆಯೆತ್ತಲು ತಮ್ಮ ಒಡೆತನದ ಜಮೀನನ್ನು ದಾನವಾಗಿ ನೀಡಿದ್ದರು. ಇವರ ಈ ಕೊಡುಗೆಯಿಂದಾಗಿ ಮುಧೋಳ ಹಾಗೂ ಸುತ್ತಮುತ್ತಲಿನ ಗ್ರಾಮಗಳ ನೂರಾರು ಬಡ ಮಕ್ಕಳಿಗೆ ಅಕ್ಷರ ಕಲಿಯಲು ಆಸರೆಯಾಗಿದೆ. ಕೇವಲ ಶಿಕ್ಷಣ ಮಾತ್ರವಲ್ಲದೆ, ಗ್ರಾಮದ ಅಭಿವೃದ್ಧಿ, ದೇವಸ್ಥಾನಗಳ ಜೀರ್ಣೋದ್ಧಾರ ಹಾಗೂ ಬಡವರ ಕಲ್ಯಾಣಕ್ಕಾಗಿ ಈ ಮನೆತನದವರು ಧನಸಹಾಯವನ್ನು ಮಾಡಿರುವ ಇತಿಹಾಸವಿದೆ. ಮತ್ತು ಆರಾಧ್ಯ ದೇವನಾದ ಶ್ರೀ ತ್ರಿಲಿಂಗ ಬಸವೇಶ್ವರ ಹೆಸರ ಉಳಿಯಲಿ ಎಂದು 1974/75 ರಲ್ಲಿ ಆರಂಭ ಗೊಂಡ ತಮ್ಮದೇ ಆದ ಒಂದು ಸಂಸ್ಥೆಯ ತೆರೆದರು. ತ್ರಿಲಿಂಗೇಶ್ವರ ಪ್ರೌಢ ಶಾಲೆ ಈ ಶಾಲೆ ಆರಂಭಗೊಂಡು ಇಂದಿಗೆ 50 ವರ್ಷ ಗತಿಸಿ ಸುವರ್ಣ ಸಂಭ್ರಮಚರಣೆ ಕಾರ್ಯಕ್ರಮ ಮೂರು ದಿನ ಅದ್ದೂರಿಯಾಗಿ ಚಂದ್ರಶೇಖರ ದೇಸಾಯಿ ಇವರ ಅಧ್ಯಕ್ಷತೆಯಲ್ಲಿ ನೆಡೆಯಿತು.

ಈಗ ನಡೆಯಲಿರುವ ಚುನಾವಣೆ ಯಲ್ಲಿ ಮುಧೋಳ ಜಿಪಂ ಕ್ಷೇತ್ರಕ್ಕೆ ಸ್ವತಂತ್ರ ಅಭ್ಯರ್ಥಿ ಯಾಗಿ ಚಂದ್ರಶೇಖರ ಹನುಮಂತರಾವ್ ದೇಸಾಯಿ ಅವರು ಬಡ ಜನರ ಸೇವೆ ಉಳಿಸಲು ಗ್ರಾಮದವರ ಅಭಿಮಾನ ಹಾಗೂ ಸೇವೆಗಾಗಿ ಸ್ವತಂತ್ರ ಅಭ್ಯರ್ಥಿಯಾಗಿ ನಾನು ಸ್ಪರ್ಧೆ ಮಾಡುವೆ ಸೋಲು-ಗೆಲುವು ನಿರ್ಧರಿಸುವುದು ಮತದಾರರ ನಿರ್ಧಾರ ಎಂದು ತಿಳಿಸಿದರು.

ಇದೆ ಸಂದರ್ಭದಲ್ಲಿ ಗ್ರಾಮದ ಮುಖಂಡರು ಡಾ, ಅಂದಾನಯ್ಯ ಶಾಡ್ಲಿಗೇರಿ. ಅಪ್ಪಣ್ಣ ಪಲ್ಲೆದ. ಶರಣಪ್ಪ ಹಿರೇಹಾಳ. ಮುತ್ತಣ್ಣ ಬೆಲ್ಲದ. ಎಲ್ಲಪ್ಪ ಹುನಗುಂದ. ಶರಣಪ್ಪ ಪುರ್ತಗೇರಿ. ಈರಣ್ಣ ಕಮತರ್. ಕಾದಿರಾಬಾಷಾ ತೋಳಗಲ್. ಕರೆಸಿದ್ದಯ್ಯ ಮಠದ. ಚನಸಂಗಪ್ಪ ಶಿಳ್ಳಿನ. ಚತ್ರೇಪ್ಪ ಛಲವಾದಿ. ಇನ್ನೂ ಅಭಿಮಾನಿ ಬಳಗದವರು ಉಪಸ್ಥಿತರಿದ್ದರು.

## ಹಿಂಗಾರು ಬಿತ್ತನೆ ಬೀಜಗಳ ವಿತರಣೆಗೆ ಚಾಲನೆ

**ಉದಯವಾಹಿನಿ, ಬೀದರ**
ಬೀದರ ಉತ್ತರ ರೈತ ಸಂಪರ್ಕ ಕೇಂದ್ರದಲ್ಲಿ ಹಿಂಗಾರು ಹಂಗಾಮಿನ ಬೆಳೆಗಳಾದ ಕಡಲೆ, ಜೋಳ, ಗೋಧಿ ಹಾಗೂ ಇನ್ನಿತರೆ ಬಿತ್ತನೆ ಬೀಜಗಳ ವಿತರಣೆಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಗಿತ್ತೆ ಮಾಧವ ವಿಠಲರಾವ್ ಅವರು ಚಾಲನೆ ನೀಡಿದರು.


ಉದಯವಾಹಿನಿ ಚಿತ್ರ

ಸೂಕ್ತ ತಳಿಗಳ ಆಯ್ಕೆ, ಬರ ಪರಿಸ್ಥಿತಿಯಲ್ಲಿ ಬೆಳೆಗಳಿಗೆ ನೀರಿನ ಹಾಗೂ ಪೋಷಕಾಂಶಗಳ ಸಮರ್ಪಕ ಬಳಕೆ, ಕಡಿಮೆ ನೀರು ಬೇಕಾಗುವ ಸೂಕ್ತ ಬೆಳೆ ಮತ್ತು ತಳಿಗಳ ಆಯ್ಕೆಯ ಕುರಿತು ಹಾಗೂ ಸರ್ಕಾರದ ವಿವಿಧ ಯೋಜನೆಗಳನ್ನು ರೈತರು ಸದುಪಯೋಗಪಡಿಸಿಕೊಳ್ಳುವಂತೆ ಅವರು ತಿಳಿಸಿದರು. ಸಮಗ್ರ ಬೇಸಾಯ, ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಾದ ಶ್ರೀಮತಿ ದೇವಿಕಾ ಆರ್. ಅವರು ಮಾತನಾಡಿ, ರೈತರು ಸಮಗ್ರ ಬೇಸಾಯ ಹಾಗೂ ಕೃಷಿ ಭಾಗ್ಯ ಯೋಜನೆಯ ಸೌಲಭ್ಯಗಳನ್ನು ಪಡೆಯಬೇಕೆಂದು ತಿಳಿಸಿದರು.

ಬೀಜೋಪಚಾರ ಸಲಹೆ, ರೈತರು ಕಡ್ಡಾಯವಾಗಿ ಬೀಜೋಪಚಾರ ಹಾಗೂ ಮೊಳಕೆ ಪರೀಕ್ಷೆಯನ್ನು ಮಾಡಿ ನಂತರ ಬಿತ್ತನೆ ಮಾಡುವಂತೆ ಸಲಹೆ ನೀಡಿದರು.

ಮಿನಿ ಕಿಟ್ ವಿತರಣೆ, ಬೀದರ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಾದ ಶ್ರೀಮತಿ ಆರತಿ ಪಾಟೀಲ್ ಅವರ ಉಪಸ್ಥಿತಿಯಲ್ಲಿ, ಹೋಬಳಿಯ ವಿವಿಧ ಗ್ರಾಮಗಳ ರೈತರಿಗೆ ಉಚಿತ ಕಡಲೆ ಮಿನಿ ಕಿಟ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಆಗಮಿಸಿದ ಎಲ್ಲಾ ರೈತರಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ಸ್ವಾಗತ ಕೋರಲಾಯಿತು. ಕಾರ್ಯಕ್ರಮದಲ್ಲಿ ಬೀದರ ಹೋಬಳಿಯ ಕೃಷಿ ಅಧಿಕಾರಿ ಶ್ರೀಮತಿ ವರ್ಷಾ ಗಾಯತೊಂಡೆ ಬಸವರಾಜ, ಮಹಾನಂದಾ, ಕೃಷಿ ಸಖಿಯರು ಹಾಗೂ ಇತರರು ಉಪಸ್ಥಿತರಿದ್ದರು.

## ವಿವಿಧ ಜಯಂತಿಗಳ ಪೂರ್ವಭಾವಿ ಸಭೆ


ಉದಯವಾಹಿನಿ ಚಿತ್ರ

**ಉದಯವಾಹಿನಿ, ವಿಜಯಪುರ**
ಕಿತ್ತೂರು ರಾಣಿ ಚೆನ್ನಮ್ಮ, ವೀರವನಿತೆ ಒನಕೆ ಓಬವ್ವ ಹಾಗೂ ಕನಕದಾಸರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಲು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಜಯಂತಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅಕ್ಟೋಬರ್ 23ರಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ, ನವೆಂಬರ್ 11ರಂದು ಒನಕೆ ಓಬವ್ವ ಜಯಂತಿ ಹಾಗೂ ನವೆಂಬರ್ 27ರಂದು ಕನಕದಾಸ ಜಯಂತಿಯನ್ನು ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು ಎಂದರು.

**ಚನ್ನಮ್ಮ ಜಯಂತಿ:** ಅ.23ರಂದು ಬೆಳಿಗ್ಗೆ 9.30ಕ್ಕೆ ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದವರೆಗೆ ವಿವಿಧ ಕಲಾತಂಡಗಳೊಂದಿಗೆ ಕಿತ್ತೂರು ರಾಣಿ ಚೆನ್ನಮ್ಮ ಅವರ ಭಾವಚಿತ್ರದ ಮೆರವಣಿಗೆ ನಡೆಯಲಿದೆ. ಬಳಿಕ ವೇದಿಕೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

**ಒನಕೆ ಓಬವ್ವ ಜಯಂತಿ:** ನ.11ರಂದು ರಂಗಮಂದಿರದಲ್ಲಿ ಒನಕೆ ಓಬವ್ವ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ, ವಿಶೇಷ ಉಪನ್ಯಾಸ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಅವರ ಅಪ್ರತಿಮ ಸಾಹಸ, ಶೌರ್ಯ ಹಾಗೂ ಜೀವನಾದರ್ಶಗಳನ್ನು ಜನರಿಗೆ ಪರಿಚಯಿಸಲಾಗುವುದು.

## ವಿಬಿ ಜಿ ರಾಮ್‌ಜೀ ಕೂಲಿ ಬಾಕಿ, ಕಾರ್ಮಿಕರಿಗೆ ಸಂಕಷ್ಟ

**ಉದಯವಾಹಿನಿ, ಮಸ್ಕಿ**
ತಾಲ್ಲೂಕಿನ ಮಾರಲದಿನ್ನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಿಬಿಜಿ ರಾಮ್‌ಜೀ ಯೋಜನೆಯಡಿ ಕೆಲಸ ನಿರ್ವಹಿಸಿ ಎರಡು ತಿಂಗಳು ಕಳೆದರೂ ಕೂಲಿ ಕಾರ್ಮಿಕರಿಗೆ ಈವರೆಗೆ ವೇತನ ಪಾವತಿಯಾಗಿಲ್ಲ. ಇದರಿಂದ ಕೂಲಿ ಕಾರ್ಮಿಕರು ಆರ್ಥಿಕ ಸಂಕಷ್ಟ ಎದುರಿಸುವಂತಾಗಿದೆ. ಯೋಜನೆಯಡಿ ಗ್ರಾಮೀಣ ಪ್ರದೇಶದ ಕಾರ್ಮಿಕರು ಕೆಲಸ ಮಾಡಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಆದರೆ, ದುಡಿದ ಹಣ ಸಕಾಲಕ್ಕೆ ಕೈ ಸೇರದಿರುವುದರಿಂದ ದಿನನಿತ್ಯದ ಕುಟುಂಬ ನಿರ್ವಹಣೆ, ದಿನಸಿ ಖರೀದಿ ಸೇರಿದಂತೆ ಅಗತ್ಯ ಖರ್ಚುಗಳನ್ನು ನಿಭಾಯಿಸಲು ತೊಂದರೆಯಾಗುತ್ತಿದೆ ಎನ್ನಲಾಗಿದೆ. ಬೇಸಾಯದ ಕೆಲಸಗಳ ಜೊತೆಗೆ ಕೂಲಿ ಕೆಲಸವನ್ನೇ ನಂಬಿಕೊಂಡಿರುವ ಕಾರ್ಮಿಕರು, ತಾವು ದುಡಿದ ಹಣಕ್ಕಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರದ ಯೋಜನೆಯಡಿ ಕೆಲಸ ಮಾಡಿದ ಕಾರ್ಮಿಕರಿಗೆ ನಿಗದಿತ ಸಮಯದಲ್ಲಿ ಕೂಲಿ ಪಾವತಿಯಾಗಬೇಕು ಎಂಬ ನಿರೀಕ್ಷೆ ಇದ್ದರೂ, ಎರಡು ತಿಂಗಳಾದರೂ ಹಣ ಜಮೆಯಾಗದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಕುರಿತು ಪರಿಶೀಲನೆ ನಡೆಸಿ, ಬಾಕಿ ಉಳಿದಿರುವ ಕೂಲಿಯನ್ನು ಶೀಘ್ರವಾಗಿ ಪಾವತಿಸಲು ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಇಂತಹ ವಿಳಂಬವಾಗದಂತೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದು ಕೂಲಿ ಕಾರ್ಮಿಕರು ಒತ್ತಾಯಿಸಿದ್ದಾರೆ.


ಉದಯವಾಹಿನಿ ಚಿತ್ರ

## ಹಳೆಯಂಗಡಿಯಲ್ಲಿ ಸ್ವಚ್ಛತಾ ಅಭಿಯಾನ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಮಂಗಳೂರು**
ಭಾರತ ಸರ್ಕಾರದ ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯ ಮೈ ಭಾರತ್, ದಕ್ಷಿಣ ಕನ್ನಡ, ಗ್ರಾಮ ಪಂಚಾಯತ್ ಹಳೆಯಂಗಡಿ ಸಹಯೋಗದೊಂದಿಗೆ, ಕರ್ನಾಟಕ ರಾಜ್ಯ ಪ್ರಶಸ್ತಿ ಪುರಸ್ಕೃತ ಹಳೆಯಂಗಡಿ ಶ್ರೀ ವಿದ್ಯಾವಿನಾಯಕ ಯುವಕ ಮಂಡಲ, ಶ್ರೀ ವಿದ್ಯಾವಿನಾಯಕ ರಜತ ಸೇವಾ ಟ್ರಸ್ಟ್ ಯುವತಿ ಮತ್ತು ಮಹಿಳಾ ಮಂಡಲ, ಕಿಶೋರ–ಕಿಶೋರಿ ಸಂಘ ಹಾಗೂ ಅನೇಕ ವಿದ್ಯಾ ಸಂಸ್ಥೆಗಳ ಮತ್ತು ಸಂಘ ಸಂಸ್ಥೆಗಳ ಆಶ್ರಯದಲ್ಲಿ "ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ" ಎಂಬ ಆಶಯದೊಂದಿಗೆ "ಸ್ವಚ್ಛತಾ ಹೀ ಸೇವಾ ಅಭಿಯಾನ"ವನ್ನು ಆಯೋಜಿಸಲಾಯಿತು.

ಸ್ವಚ್ಛತಾ ಕಾರ್ಯಕ್ರಮಕ್ಕೆ ಹಳೆಯಂಗಡಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಸಾಯೇಶ ಚೌಟ. ಕೆ., ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಟ್ರಸ್ಟಿ ವಿವೇಕ್ ಆಳ್ವ ಚಾಲನೆ ನೀಡಿದರು. ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದ ದ್ವಾರದಿಂದ ಮುಂಡ ಬೀಚ್‌ವರೆಗೆ ಬೀಚ್ ಸ್ವಚ್ಛತಾ ಮಹಾ ಅಭಿಯಾನ ನಡೆಯಿತು. ಅಭಿಯಾನದ ಸಂದರ್ಭದಲ್ಲಿ ಬೀಚ್‌ಬದಿಯಲ್ಲಿ ಬಿದ್ದಿದ್ದ ಪ್ಲಾಸ್ಟಿಕ್ ಸೇರಿದಂತೆ ವಿವಿಧ ತ್ಯಾಜ್ಯಗಳನ್ನು ಹೆಕ್ಕಿ ಸಂಗ್ರಹಿಸಿ, ವಿಲೇವಾರಿ ಮಾಡಲಾಯಿತು. ಈ ಸ್ವಚ್ಛತಾ ಅಭಿಯಾನದಲ್ಲಿ ಯುವಕ, ಯುವತಿ, ಮಹಿಳಾ ಮಂಡಲ, ಅನೇಕ ವಿದ್ಯಾಸಂಸ್ಥೆಗಳ ವಿದ್ಯಾರ್ಥಿಗಳು, ವಿವಿಧ ಸಂಘ ಸಂಸ್ಥೆಯ ಸದಸ್ಯರು, ಪಂಚಾಯಿತಿನ ಮಾಜಿ ಸದಸ್ಯರು, ಪಂಚಾಯಿತಿನ ಸಿಬ್ಬಂದಿಗಳು, ಪಂಚಾಯಿತಿನ ಪೌರಕಾರ್ಮಿಕರು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿದರು.

## ಹಿಂಗಾರು ಬಿತ್ತನೆ ಬೀಜಗಳ ವಿತರಣೆಗೆ ಚಾಲನೆ

**ಉದಯವಾಹಿನಿ, ಬೀದರ**
ಬೀದರ ಉತ್ತರ ರೈತ ಸಂಪರ್ಕ ಕೇಂದ್ರದಲ್ಲಿ ಹಿಂಗಾರು ಹಂಗಾಮಿನ ಬೆಳೆಗಳಾದ ಕಡಲೆ, ಜೋಳ, ಗೋಧಿ ಹಾಗೂ ಇನ್ನಿತರೆ ಬಿತ್ತನೆ ಬೀಜಗಳ ವಿತರಣೆಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಗಿತ್ತೆ ಮಾಧವ ವಿಠಲರಾವ್ ಅವರು ಚಾಲನೆ ನೀಡಿದರು. ಬೀಜೋಪಚಾರ ಸಲಹೆ, ರೈತರು ಕಡ್ಡಾಯವಾಗಿ ಬೀಜೋಪಚಾರ ಹಾಗೂ ಮೊಳಕೆ ಪರೀಕ್ಷೆಯನ್ನು ಮಾಡಿ ನಂತರ ಬಿತ್ತನೆ ಮಾಡುವಂತೆ ಸಲಹೆ ನೀಡಿದರು. ಮಿನಿ ಕಿಟ್ ವಿತರಣೆ, ಬೀದರ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರಾದ ಶ್ರೀಮತಿ ಆರತಿ ಪಾಟೀಲ್ ಅವರ ಉಪಸ್ಥಿತಿಯಲ್ಲಿ, ಹೋಬಳಿಯ ವಿವಿಧ ಗ್ರಾಮಗಳ ರೈತರಿಗೆ ಉಚಿತ ಕಡಲೆ ಮಿನಿ ಕಿಟ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಆಗಮಿಸಿದ ಎಲ್ಲಾ ರೈತರಿಗೂ ಹಾಗೂ ಸಿಬ್ಬಂದಿ ವರ್ಗದವರಿಗೂ ಸ್ವಾಗತ ಕೋರಲಾಯಿತು. ಕಾರ್ಯಕ್ರಮದಲ್ಲಿ ಬೀದರ ಹೋಬಳಿಯ ಕೃಷಿ ಅಧಿಕಾರಿ ಶ್ರೀಮತಿ ವರ್ಷಾ ಗಾಯತೊಂಡೆ ಬಸವರಾಜ, ಮಹಾನಂದಾ, ಕೃಷಿ ಸಖಿಯರು ಹಾಗೂ ಇತರರು ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

## ಸಂಪೂರ್ಣ ಸಾಕ್ಷರ ಜಿಲ್ಲೆ ಎಂದು ಘೋಷಿಸಲು ಸಿದ್ಧತೆ

**ಉದಯವಾಹಿನಿ, ಉಡುಪಿ**
ಕರಾವಳಿ ಕರ್ನಾಟಕದ ಉಡುಪಿ ಜಿಲ್ಲೆಯನ್ನು ಅಧಿಕೃತವಾಗಿ 'ಸಂಪೂರ್ಣ ಸಾಕ್ಷರ ಜಿಲ್ಲೆ' ಎಂದು ಘೋಷಿಸಲು ಸಿದ್ಧತೆ ನಡೆದಿದೆ. ಈ ಕುರಿತಾದ ಜಿಲ್ಲಾ ಮಟ್ಟದ ಘೋಷಣೆಯು ನವೆಂಬರ್ 1 ರಂದು, ಅಂದರೆ ಕನ್ನಡ ರಾಜ್ಯೋತ್ಸವದ ದಿನದಂದು ನಡೆಯುವ ಸಾಧ್ಯತೆಯಿದೆ. ಕೇಂದ್ರ ಸರ್ಕಾರ ನಿಗದಿಪಡಿಸಿದ ಮಾನದಂಡದಂತೆ ಶೇ. 95 ರಷ್ಟು ಸಾಕ್ಷರತಾ ಪ್ರಮಾಣವನ್ನು ಸಾಧಿಸಿದ ನಂತರ, ಉಡುಪಿಯನ್ನು ಸಂಪೂರ್ಣ ಸಾಕ್ಷರ ಜಿಲ್ಲೆ ಎಂದು ಘೋಷಿಸಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ. ನಿಗದಿತ ನಿಯಮಗಳ ಪ್ರಕಾರ, ಘೋಷಣೆಯ ಉದ್ದೇಶಕ್ಕಾಗಿ ಶೇ. 95 ರಷ್ಟು ಸಾಕ್ಷರತಾ ಪ್ರಮಾಣವನ್ನು ಶೇ. 100 ರಷ್ಟು ಸಾಕ್ಷರತೆಗೆ ಸಮಾನವೆಂದು ಪರಿಗಣಿಸಲಾಗುತ್ತದೆ. ಉಡುಪಿಯನ್ನು ಸಂಪೂರ್ಣ ಸಾಕ್ಷರ ಜಿಲ್ಲೆ ಎಂದು ಘೋಷಿಸುವ ಪ್ರಸ್ತಾವನೆಯನ್ನು ಉಡುಪಿ ಜಿಲ್ಲಾ ಪಂಚಾಯತ್ ಸರ್ಕಾರಕ್ಕೆ ಸಲ್ಲಿಸಿತ್ತು. ಸರ್ಕಾರ ಮಟ್ಟದಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಆದೇಶವನ್ನು ಹೊರಡಿಸಲಾಗಿದ್ದು, ಇದು ಜಿಲ್ಲಾ ಮಟ್ಟದ ಅಧಿಕೃತ ಘೋಷಣೆಗೆ ದಾರಿ ಮಾಡಿಕೊಟ್ಟಿದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿಗೆ ಅನುಗುಣವಾಗಿ, ಜಿಲ್ಲೆಯ ಎಲ್ಲಾ 155 ಗ್ರಾಮ ಪಂಚಾಯತ್‌ಗಳು, ಏಳು ತಾಲ್ಲೂಕು ಪಂಚಾಯತ್‌ಗಳು ಮತ್ತು ಎಂಟು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಾಕ್ಷರತಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆ. ಸಂಪೂರ್ಣ ಸಾಕ್ಷರತೆಗೆ ನಿಗದಿಪಡಿಸಿದ ಮಾನದಂಡಗಳನ್ನು ಪೂರೈಸಿರುವುದನ್ನು ಖಚಿತಪಡಿಸುವ ಅಗತ್ಯ ಪ್ರಮಾಣಪತ್ರಗಳನ್ನು ಸಹ ಜಿಲ್ಲೆಯು ಪಡೆದುಕೊಂಡಿದೆ. ಉಡುಪಿಯು ಶೇ. 95 ಕ್ಕಿಂತ ಹೆಚ್ಚಿನ ಸಾಕ್ಷರತಾ ಪ್ರಮಾಣವನ್ನು ಹೊಂದಿರುವುದರಿಂದ, ನಿರ್ದಿಷ್ಟ ಷರತ್ತುಗಳು ಮತ್ತು ನಿಯಮಗಳಿಗೆ ಒಳಪಟ್ಟು ಜಿಲ್ಲೆಯನ್ನು ಸಂಪೂರ್ಣ ಸಾಕ್ಷರ ಜಿಲ್ಲೆ ಎಂದು ಘೋಷಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಸರ್ಕಾರ ಜಿಪಂ ಸಿಇಒಗೆ ನಿರ್ದೇಶನ ನೀಡಿದೆ.

ಮಂಗಳೂರು ನಗರದ ಪ್ರಮುಖ ಆಸ್ಪತ್ರೆಗಳಲ್ಲಿ ಕೆ.ಎ.ಎಸ್.ಎಸ್ ಯೋಜನೆಯಡಿ ನಗದು ರಹಿತವಾಗಿ ಚಿಕಿತ್ಸೆ ದೊರಕಲು ಆರೋಗ್ಯ ಇಲಾಖೆ ಕ್ರಮ ಕೈಗೊಳ್ಳಬೇಕು

# ಸರಕಾರಿ ನೌಕರರ ನಗದುರಹಿತ ಚಿಕಿತ್ಸೆ: ಇನ್ನಷ್ಟು ಸೇರ್ಪಡೆ– ಜಿಲ್ಲಾಧಿಕಾರಿ

**ಉದಯವಾಹಿನಿ, ಮಂಗಳೂರು**
ರಾಜ್ಯ ಸರಕಾರವು ಸರಕಾರಿ ಅಧಿಕಾರಿ ಮತ್ತು ನೌಕರರಿಗೆ ನಗದು ರಹಿತ ಚಿಕಿತ್ಸೆಗೆ ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ (ಕೆ.ಎ.ಎಸ್.ಎಸ್) ಜಾರಿಗೆ ತಂದಿದ್ದು, ಇದರಿಂದ ನೌಕರರ ಚಿಕಿತ್ಸೆ ಸುಲಲಿತವಾಗಲಿದೆ ಎಂದು ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ತಿಳಿಸಿದ್ದಾರೆ.

> 1. ಕೆ.ಜಿ.ಐ.ಡಿ. ಸಂಖ್ಯೆ ಆಸ್ಪತ್ರೆಗಳಿಗೆ ನೀಡಬೇಕಿದೆ
> 2. 15 ರಷ್ಟು ಪ್ರೋತ್ಸಾಹಧನಕ್ಕೂ ಅವಕಾಶವಿದೆ
> 3. 30 ದಿನಗಳೊಳಗೆ ಆಸ್ಪತ್ರೆ ಪಾವತಿಯಾಗಲಿದೆ

ಅವರು ಸೋಮವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಆರೋಗ್ಯ ಇಲಾಖೆ ವತಿಯಿಂದ ಕೆ.ಎ.ಎಸ್.ಎಸ್ ಯೋಜನೆಯ ಪರಿಣಾಮಕಾರಿ ಅನುಷ್ಠಾನ ಕುರಿತು ಜಿಲ್ಲೆಯ ವಿವಿಧ ಖಾಸಗಿ ಆಸ್ಪತ್ರೆಗಳಿಗೆ ತರಬೇತಿ ಮತ್ತು ಮಾಹಿತಿ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಿಲ್ಲೆಯ ಎಲ್ಲಾ ತಾಲ್ಲೂಕು ಮತ್ತು ಮಂಗಳೂರು ನಗರದ ಪ್ರಮುಖ ಆಸ್ಪತ್ರೆಗಳಲ್ಲಿ ಕೆ.ಎ.ಎಸ್.ಎಸ್ ಯೋಜನೆಯಡಿ ನಗದು ರಹಿತವಾಗಿ ಚಿಕಿತ್ಸೆ ದೊರಕಲು ಆರೋಗ್ಯ ಇಲಾಖೆ ಕ್ರಮ ಕೈಗೊಳ್ಳಬೇಕು ಎಂದು ಅವರು ಹೇಳಿದರು. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಉಪನಿರ್ದೇಶಕ ಡಾ. ಮಹೇಶ್ ಮಾತನಾಡಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ 14 ಆಸ್ಪತ್ರೆಗಳು ಈ



ಉದಯವಾಹಿನಿ ಚಿತ್ರ

> ಇನ್ನಷ್ಟು ಆಸ್ಪತ್ರೆಗಳನ್ನು ಯೋಜನೆಯಡಿ ತರಲು ಪ್ರಯತ್ನಗಳಾಗುತ್ತಿವೆ. ಕೆ.ಎ.ಎಸ್.ಎಸ್ ಯೋಜನೆಯಲ್ಲಿ ಆಸ್ಪತ್ರೆಗಳಿಗೆ ಉತ್ತಮ ಪ್ಯಾಕೇಜ್ ದರವನ್ನು ನಿಗದಿಗೊಳಿಸಲಾಗಿದೆ. ಯೋಜನೆಯಡಿ ಆಸ್ಪತ್ರೆಗಳಿಗೆ ಶೇ.15 ರಷ್ಟು ಪ್ರೋತ್ಸಾಹಧನಕ್ಕೂ ಅವಕಾಶವಿದೆ.
> – ದರ್ಶನ್ ಎಚ್.ವಿ., ಜಿಲ್ಲಾಧಿಕಾರಿ

ಯೋಜನೆಯಡಿ ಸೇರ್ಪಡೆಯಾಗಿದೆ.

ರಾಜ್ಯ ಸರಕಾರಿ ನೌಕರರು ಯಾವುದೇ ರೆಫರೆನ್ಸ್ ಇಲ್ಲದೆ ನಿಗದಿತ ಆಸ್ಪತ್ರೆಗಳಿಗೆ ನೇರವಾಗಿ ದಾಖಲಾಗಬಹುದು. ಈ ಸಂದರ್ಭದಲ್ಲಿ ಕೆ.ಜಿ.ಐ.ಡಿ. ಸಂಖ್ಯೆ ಆಸ್ಪತ್ರೆಗಳಿಗೆ ನೀಡಬೇಕಿದೆ. ಸರಕಾರಿ ನೌಕರರ ಗ್ರೂಪ್ ಅನುಸಾರ ಚಿಕಿತ್ಸಾ ಪ್ಯಾಕೇಜ್ ನಿಗದಿಗೊಳಿಸಲಾಗಿದೆ.

ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ನವೀನ್ ಕುಮಾರ್ ಎಂ.ಎಸ್ ಮಾತನಾಡಿ, ಸರಕಾರಿ ನೌಕರರು ಪ್ರತೀ ತಿಂಗಳು ತಮ್ಮ ವೇತನದಲ್ಲಿ ಕೆ.ಎ.ಎಸ್.ಎಸ್ ಯೋಜನೆಗೆ ನಿಗದಿತ ಮೊತ್ತವನ್ನು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಗೆ ಪಾವತಿಸುತ್ತಿದ್ದಾರೆ.

ಈ ಯೋಜನೆಯಡಿಯಲ್ಲಿ ರಸ್ತೆ ಅಪಘಾತದಲ್ಲಿ ಗಾಯಗೊಂಡವರಿಗೆ ಮೊದಲ 7 ದಿನಗಳ ವರೆಗೆ ಕೇಂದ್ರ ಸರಕಾರದಿಂದ ರೂ.1.5 ಲಕ್ಷ ವರೆಗಿನ ಚಿಕಿತ್ಸೆ ಉಚಿತವಾಗಿ ದೊರಕಲಿದೆ. ಈ ಮೊತ್ತ ಸಾಕಾಗದಿದ್ದರೆ, ರಾಜ್ಯ ಸರಕಾರದಿಂದ ಹೆಚ್ಚುವರಿಯಾಗಿ ಮತ್ತೆ ರೂ. 1 ಲಕ್ಷ ದವರೆಗೆ ಚಿಕಿತ್ಸೆ ದೊರಕಲಿದೆ. ಒಟ್ಟಾರೆ ರೂ. 2.5 ಲಕ್ಷದವರೆಗೆ ಎಪಿಎಲ್/ಬಿಪಿಎಲ್ ಸೇರಿದಂತೆ ಎಲ್ಲರಿಗೂ ಚಿಕಿತ್ಸೆ ದೊರಕಲಿದೆ. ನಂತರ, ಆಯುಷ್ಮಾನ್ ಯೋಜನೆಗೂ ಇದನ್ನು ಜೋಡಣೆ ಮಾಡಬಹುದು ಎಂದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಉಪನಿರ್ದೇಶಕ ಡಾ. ಮಹೇಶ್ ತಿಳಿಸಿದರು. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಮಾತನಾಡಿ, ರಸ್ತೆ ಅಪಘಾತದಂತಹ ತುರ್ತು ಸಂಧರ್ಭಗಳಲ್ಲಿ ಯಾವುದೇ ಹಣಕಾಸಿನ ಸಮಸ್ಯೆ ಇಲ್ಲದೆ, ತ್ವರಿತವಾಗಿ ಗಾಯಾಳುಗಳಿಗೆ ಚಿಕಿತ್ಸೆ ದೊರಕಬೇಕೆಂಬ ಉದ್ದೇಶದಿಂದ ಪಿಎಂ ರಾಹತ್ ಯೋಜನೆ ಜಾರಿಗೆ ಬಂದಿದೆ. ಆಸ್ಪತ್ರೆಗಳು ರೋಗಿಗಳನ್ನು ಅಪಾಯದಿಂದ ಪಾರು ಮಾಡಿ, ಅವರಿಗೆ ಉತ್ತಮ ಜೀವನ ದೊರಕಿಸಲು ಯೋಜನೆಯ ಲಾಭ ಪಡೆದು ರೋಗಿಗಳಿಗೆ ನೀಡಬೇಕು ಎಂದು ಹೇಳಿದರು.

### ನಿಷೇಧಾಜ್ಞೆ ಉಲ್ಲಂಘನೆ ಆರೋಪದ ಮೇಲೆ ಕನ್ನಾಟ್ ಪ್ಲೇಸ್, ತಿಲಕ್ ಮಾರ್ಗ್, ಬರಾಖಂಬಾ ಮತ್ತು ಮಂದಿರ ಮಾರ್ಗ್ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲು

# ಪ್ರತಿಭಟನಾ ಮೆರವಣಿಗೆ; ರಾಹುಲ್, ಖರ್ಗೆ ಸೇರಿ ಹಲವು ನಾಯಕರ ವಿರುದ್ಧ ಎಫ್‌ಐಆರ್

**ನವದೆಹಲಿ:** ಮತ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿನ ಅಕ್ರಮಗಳ ವಿರುದ್ಧ ಸೋಮವಾರ ಸುಪ್ರೀಂ ಕೋರ್ಟ್‌ವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದ್ದ ಇಂಡಿಯಾ ಬಣದ ನಾಯಕರು ಮತ್ತು ಬೆಂಬಲಿಗರ ವಿರುದ್ಧ ಹಲವು ಎಫ್‌ಐಆರ್‌ಗಳು ದಾಖಲಾಗಿವೆ.

ನಿಷೇಧಾಜ್ಞೆ ಉಲ್ಲಂಘನೆ ಆರೋಪದ ಮೇಲೆ ಬಿಎನ್‌ಎಸ್‌ಎಸ್‌ನ ಸೆಕ್ಷನ್ 163 ಅಡಿ ಕನ್ನಾಟ್ ಪ್ಲೇಸ್, ತಿಲಕ್ ಮಾರ್ಗ್, ಬರಾಖಂಬಾ ಮತ್ತು ಮಂದಿರ ಮಾರ್ಗ್ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಾಗಿದೆ.

> 1. ನಿಷೇಧಾಜ್ಞೆ ಉಲ್ಲಂಘನೆ ಆರೋಪ
> 2. ಸೆಕ್ಷನ್ 163 ಅಡಿ ಪ್ರಕರಣ ದಾಖಲು
> 3. ವಿವಿಧ ಪ್ರಕರಣ ದಾಖಲು

ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಇತರೆ ವಿಪಕ್ಷ ನಾಯಕರ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಮೆರವಣಿಗೆಗೆ ಸಂಬಂಧಿಸಿದಂತೆ ಈ ಕ್ರಮ ಕೈಗೊಳ್ಳಲಾಗಿದೆ.

ಪ್ರತಿಭಟನಾಕಾರರು ಬ್ಯಾರಿಕೇಡ್‌ಗಳನ್ನು ಮುರಿದು, ಅನುಮತಿಯಿಲ್ಲದೆ ಸುಪ್ರೀಂ ಕೋರ್ಟ್‌ನತ್ತ ತೆರಳಲು ಪ್ರಯತ್ನಿಸಿದ್ದರು. ಬ್ಯಾರಿಕೇಡ್‌ಗಳನ್ನು ತಳ್ಳಿಕೊಂಡು ಮುಂದೆ ನುಗ್ಗಲು ಕೆಲವು ಪ್ರತಿಭಟನಾಕಾರರು ಮಿನಿ-ಟ್ರಕ್ ಅನ್ನು ಕೂಡ ಬಳಸಿದರು ಎಂದು ಅಧಿಕಾರಿಗಳು ಆರೋಪಿಸಿದ್ದಾರೆ.

ಕಾನ್ಸಟಿಟ್ಯೂಷನ್ ಕ್ಲಬ್‌ನಿಂದ ಆರಂಭವಾಗಿದ್ದ ಪ್ರತಿಭಟನಾ ಮೆರವಣಿಗೆಯನ್ನು ಸುಪ್ರೀಂ ಕೋರ್ಟ್‌ನಿಂದ 500 ಮೀಟರ್ ದೂರದಲ್ಲಿ ತಡೆಯಲಾಗಿತ್ತು. ರಾಹುಲ್ ಗಾಂಧಿ, ಖರ್ಗೆ, ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಮತ್ತು ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಸೇರಿದಂತೆ 11 ವಿಪಕ್ಷ ನಾಯಕರು ಸುಪ್ರೀಂ ಕೋರ್ಟ್ ಸಂಕೀರ್ಣ ಪ್ರವೇಶಿಸಿ, ಎಸ್‌ಐಆರ್ ಪ್ರಕ್ರಿಯೆ ಪ್ರಶ್ನಿಸಿ, ಜಂಟಿಯಾಗಿ ಅರ್ಜಿ ಸಲ್ಲಿಸಿದ್ದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣಾ ಪ್ರಕ್ರಿಯೆಯ ಸಂದರ್ಭದಲ್ಲಿ ಚುನಾವಣಾ ಆಯೋಗದ ನಿರ್ಧಾರಗಳು ಮತ್ತು ಅವುಗಳ ಅನುಷ್ಠಾನದ ಕುರಿತು ನ್ಯಾಯಾಂಗದಿಂದ ಪರಿಶೀಲನೆ ಆಗಬೇಕೆಂದು ಅರ್ಜಿದಾರರು ಕೋರಿದ್ದಾರೆ.




**ಹೋರಾಟ ಮುಂದುವರೆಯಲಿದೆ**

ಇಂಡಿಯಾ ಮೈತ್ರಿಕೂಟವು ಬೆದರಿಕೆಗಳಿಗೆ ಮಣಿಯುವುದಿಲ್ಲ. ಭಾರತದ ಜನರು ಬೆದರುವುದಿಲ್ಲ ಎಂಬುದನ್ನು ನಾವು ಸರ್ಕಾರಕ್ಕೆ ತೋರಿಸಬೇಕಿತ್ತು. ನೀವು ನಮ್ಮನ್ನು ದಮನಿಸಲು, ಬೆದರಿಸಲು ಅಥವಾ ಭಯಪಡಿಸಲು ಸಾಧ್ಯವಿಲ್ಲ. ಸಂವಿಧಾನ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಲು ವಿರೋಧ ಪಕ್ಷವು ತನ್ನ ಹೋರಾಟ ಮುಂದುವರಿಸಲಿದೆ ಎಂದು ತಿಳಿಸಿದರು.

ಪೊಲೀಸ್ ಕ್ರಮಕ್ಕೆ ಪ್ರತಿಯಾಗಿ ಮಾತನಾಡಿದ ರಾಹುಲ್ ಗಾಂಧಿ, ಪ್ರಜಾಸತ್ತಾತ್ಮಕ ಪ್ರತಿಭಟನೆಯನ್ನು ಹತ್ತಿಕ್ಕಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ. ಇದು ದೇಶದ ಸಂವಿಧಾನ ಮತ್ತು ಯುವಜನರ ಹಕ್ಕುಗಳಿಗಾಗಿ ನಡೆಯುತ್ತಿರುವ ಹೋರಾಟವಾಗಿದ್ದು, ಪೊಲೀಸ್ ಬಲಪ್ರಯೋಗದಿಂದ ತಮ್ಮನ್ನು ತಡೆಯಲು ಸಾಧ್ಯವಿಲ್ಲ ಎಂದಿದ್ದಾರೆ.

ಈ ನಡುವೆ ಮಾತನಾಡಿರುವ ದೆಹಲಿ ಪೊಲೀಸ್‌ನ ಹಿರಿಯ ಅಧಿಕಾರಿಗಳು, ರಾಜಧಾನಿಯ ಅತಿ-ಭದ್ರತೆಯ ಪ್ರದೇಶಗಳಲ್ಲಿನ ನಿಯಮ ಉಲ್ಲಂಘನೆಗಳನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ವಿಡಿಯೋ ದೃಶ್ಯಾವಳಿಗಳ ಮೂಲಕ ಗಲಭೆಕೋರರು ಮತ್ತು ನಿಯಮ ಉಲ್ಲಂಘಿಸಿದವರನ್ನು ಗುರುತಿಸಲು ಪೊಲೀಸರು ದಾಖಲಾದ ಪ್ರಕರಣಗಳನ್ನು ಪರಿಶೀಲಿಸುತ್ತಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದಿದ್ದಾರೆ.

## ಜಗತ್ತಿನೊಂದಿಗೆ, ಜಗತ್ತಿಗಾಗಿ ಬೆಳೆಯುತ್ತಿದ್ದೇವೆ

**ನವದೆಹಲಿ:** ಭಾರತದ ಡಿಜಿಟಲ್ ಪರಿಸರ ವ್ಯವಸ್ಥೆ ಹಾಗೂ ಎಲ್ಲರನ್ನೂ ಒಳಗೊಳ್ಳುವಿಕೆಯನ್ನು ಉತ್ತೇಜಿಸುವಲ್ಲಿ ತಂತ್ರಜ್ಞಾನದ ಪಾತ್ರವನ್ನು ಶ್ಲಾಘಿಸಿದರು. ವಿವಿಧ ಉದ್ಯಮಗಳು ಒಂದೇ ವ್ಯವಸ್ಥೆಯನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದಕ್ಕೆ ದೇಶದ ಡಿಜಿಟಲ್



ಪಾವತಿ ವೇದಿಕೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.

ಬ್ಲೂಮ್‌ಬರ್ಗ್ ನ್ಯೂ ಎಕಾನಮಿ ಫೋರಂನಲ್ಲಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಇಂದು ತಂತ್ರಜ್ಞಾನ, ದತ್ತಾಂಶ, ಜ್ಞಾನ ಮತ್ತು ನಾವೀನ್ಯತೆಗಳು ಶಕ್ತಿಯ ಮೂಲಗಳಾಗಿ ಹೊರಹೊಮ್ಮಿವೆ. ತಾಂತ್ರಿಕ ಪ್ರಗತಿಯ ಪ್ರಯೋಜನಗಳು ಸಮಾಜದ ವಿಶಾಲ ವರ್ಗಕ್ಕೆ ತಲುಪುವುದನ್ನು ಖಚಿತಪಡಿಸಿಕೊಳ್ಳುವ ಅಗತ್ಯವಿದೆ. ಅಧಿಕಾರವು ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾಗುವ ಬದಲು, ಜನರನ್ನು ಸಬಲೀಕರಣಗೊಳಿಸಲು ಅದನ್ನು ಹೇಗೆ ಬಳಸಬಹುದು ಎಂಬುದರತ್ತ ಗಮನಹರಿಸಬೇಕು ಎಂದರು.

ನಾವೀನ್ಯತೆಯ ಅವಕಾಶಗಳು ಹೆಚ್ಚಿನ ಜನರನ್ನು ತಲುಪುತ್ತಿವೆ. ಹೆಚ್ಚಿನ ಪ್ರತಿಭೆಗಳು ಹೊರಹೊಮ್ಮುತ್ತಿವೆ. ಭಾರತವು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಕುರಿತ ತನ್ನ ಅನುಭವವನ್ನು ಆ ದೇಶಗಳೊಂದಿಗೆ ಹಂಚಿಕೊಳ್ಳುತ್ತಿದೆ. ಭಾರತವನ್ನು ಪ್ರಜಾಪ್ರಭುತ್ವದ ತಾಯಿ ಎಂದು ಬಣ್ಣಿಸಿದ ಅವರು, ದೇಶದ ಭಾಷಾ ವೈವಿಧ್ಯತೆ, ಮಾಧ್ಯಮ ಕ್ಷೇತ್ರ ಮತ್ತು ಬೆಳೆಯುತ್ತಿರುವ ಸಾಮಾಜಿಕ ಜಾಲತಾಣ ಬಳಕೆದಾರರ ವಿವಿಧ ದೃಷ್ಟಿಕೋನಗಳಿಗೆ ಮುಕ್ತತೆ ಹೊಂದಿದೆ. ದೇಶದಲ್ಲಿ 50 ಕೋಟಿಗೂ ಹೆಚ್ಚು ಯೂಟ್ಯೂಬ್ ಮತ್ತು 50 ಕೋಟಿಗೂ ಹೆಚ್ಚು ಇನ್‌ಸ್ಟಾಗ್ರಾಮ್ ಬಳಕೆದಾರರಿದ್ದು, ಭಾರತದಲ್ಲಿ ಜನರು ಮುಕ್ತವಾಗಿ ವಿಷಯಗಳ ಬಗ್ಗೆ ಚರ್ಚಿಸುತ್ತಾರೆ. ವಿವಿಧ ದೃಷ್ಟಿಕೋನಗಳನ್ನು ಹಂಚಿಕೊಳ್ಳುತ್ತಾರೆ. ಇಂತಹ ವಿನಿಮಯಗಳಿಗೆ ಡಿಜಿಟಲ್ ಶಕ್ತಿಯು ಮಹತ್ವದ ಪಾತ್ರ ವಹಿಸುತ್ತಿದೆ ಎಂದು ತಿಳಿಸಿದ್ದಾರೆ. ತಂತ್ರಜ್ಞಾನವು ಲಕ್ಷಾಂತರ ಜನರಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುತ್ತದೆ. ಇದಕ್ಕೆ ಸಬಲೀಕರಣಗೊಳಿಸುವ ಶಕ್ತಿ ಇದೆ. ಈ ವಿಧಾನವು ಚಿಂತನೆಯಲ್ಲಿ ಬದಲಾವಣೆಯನ್ನು ಬಯಸುತ್ತದೆ. ಇದರಲ್ಲಿ ನಿಯಂತ್ರಣಕ್ಕಿಂತ ಸಬಲೀಕರಣಕ್ಕೆ, ಸ್ಪರ್ಧೆಗಿಂತ ಸಹಕಾರಕ್ಕೆ ಮತ್ತು ವೈಯಕ್ತಿಕ ಯಶಸ್ಸಿಗಿಂತ ಇತರರು ಯಶಸ್ವಿಯಾಗಲು ಸಹಾಯ ಮಾಡುವುದಕ್ಕೆ ಆದ್ಯತೆ ನೀಡಲಾಗುತ್ತದೆ ಎಂದರು.

## ಗೆಳತಿಯನ್ನ ಜಲಪಾತದಿಂದ ತಳ್ಳಿ ಹತ್ಯೆ ಮಾಡಿದ ಪ್ರೇಮಿ!

**ಕೊಲ್ಹಾಪುರ:** ಇಲ್ಲಿನ ಜಲಪಾತವೊಂದರ ಬಳಿ ತನ್ನ ಗೆಳತಿಯನ್ನು ತಳ್ಳಿ ಹತ್ಯೆಗೈದ ಆರೋಪಿಯನ್ನು ಐದು ದಿನ ಪೊಲೀಸ್ ವಶಕ್ಕೆ ಒಪ್ಪಿಸಲಾಗಿದೆ. ಇತ್ತ, ಸಂತ್ರಸ್ತೆಯ ಕುಟುಂಬವು ಈ ಪ್ರಕರಣದ ವಿಚಾರಣೆಯನ್ನು ತ್ವರಿತಗತಿ ನ್ಯಾಯಾಲಯದಲ್ಲಿ ನಡೆಸಬೇಕೆಂದು ಒತ್ತಾಯಿಸಿದೆ. ಆರೋಪಿ ಶ್ರೀಪಾದ್ ವಾದರ್ (25) ಮತ್ತು ತರನ್ನುಮ್ ಬಶೀರ್ ನಾಯ್ಕ್ (23) ಕಳೆದ ಐದು ವರ್ಷಗಳಿಂದ ಪ್ರೀತಿಸುತ್ತಿದ್ದರು. ಆದರೆ, ನಾಲ್ಕು ತಿಂಗಳ ಹಿಂದೆ ತರನ್ನುಮ್‌ಗೆ ಬೇರೆ ಯುವಕನೊಂದಿಗೆ ಮದುವೆ ನಿಶ್ಚಯವಾಗಿತ್ತು. ಇದು ಶ್ರೀಪಾದ್‌ಗೆ ಕೋಪ ತರಿಸಿತ್ತು. ವಿವಾಹಕ್ಕೂ ಮೊದಲು ಕೊನೆಯ ಬಾರಿಗೆ ಭೇಟಿಯಾಗೋಣ ಎಂದು ಅಕ್ಟೋಬರ್ 9 ರಂದು ಭುದರಗಡ ತಾಲ್ಲೂಕಿನ ಪಾಟಗಾಂವ್ ಗ್ರಾಮದ ಬಳಿಕ ಪ್ರವಾಸಿ ತಾಣಕ್ಕೆ ಆಕೆಯನ್ನು ಕರೆದೊಯ್ದಿದ್ದಾನೆ. ಅಲ್ಲಿ ತರನ್ನುಮ್‌ಗೆ ತನ್ನನ್ನು ವಿವಾಹವಾಗಲು ಒತ್ತಾಯಿಸಿದ್ದಾನೆ. ಆದರೆ, ಆಕೆ ನಿರಾಕರಿಸಿದಾಗ ಇಬ್ಬರ ನಡುವೆ ಜಗಳವಾಗಿದೆ. ಈ ವೇಳೆ ಶ್ರೀಪಾದ್ ಕೋಪದಲ್ಲಿ ಆಕೆಯನ್ನು ಜಲಪಾತದ ಮೇಲಿನಿಂದ ಕಣಿವೆಗೆ ತಳ್ಳಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

**ಹತ್ಯೆ ಮಾಡಿ ನಾಪತ್ತೆ ನಾಟಕ:** ಕೃತ್ಯ ಎಸಗಿದ ಬಳಿಕ ಮನೆಗೆ ಮರಳಿದ ಶ್ರೀಪಾದ್, ತರನ್ನುಮ್ ನಾಪತ್ತೆಯಾಗಿದ್ದಾಳೆ ಎಂದು ನಾಟಕವಾಡಿದ್ದ. ತಾನು ಬೈಕ್ ನಿಲ್ಲಿಸಿ ಆಕೆಗೆ ನೀರು ತರಲು ಹೋದಾಗ ಆಕೆ ತಪ್ಪಿಸಿಕೊಂಡಿದ್ದಾಳೆ ಎಂದು ಕುಟುಂಬದವರಿಗೆ ಸುಳ್ಳು ಹೇಳಿದ್ದ. ಆರಂಭದಲ್ಲಿ ಪೊಲೀಸರು ನಾಪತ್ತೆ ಪ್ರಕರಣ ದಾಖಲಿಸಿಕೊಂಡಿದ್ದರು. ಆದರೆ, ವಿಚಾರಣೆಯಲ್ಲಿ ಆರೋಪಿ ಗೊಂದಲದ ಹೇಳಿಕೆ ನೀಡಿದ್ದನ್ನು ಪೊಲೀಸರು ಗುರುತಿಸಿದ್ದಾರೆ. ಇಬ್ಬರ ಮೊಬೈಲ್ ಚಾಟ್ ಪರಿಶೀಲಿಸಿದಾಗ ಸತ್ಯ ಬಯಲಾಗಿದೆ. ಬಳಿಕ, ವಿಚಾರಣೆಯಲ್ಲಿ ಆರೋಪಿ ತಾನೇ ಕೊಲೆ ಮಾಡಿದ್ದಾಗಿ ಒಪ್ಪಿಕೊಂಡಿದ್ದಾನೆ. ಅಂಬೋಲಿಯ ಸಹ್ಯಾದ್ರಿ ರಕ್ಷಣಾ ತಂಡದ ನೆರವಿನಿಂದ ಕಣಿವೆಯಿಂದ ತರನ್ನುಮ್ ಶವವನ್ನು ಹೊರತೆಗೆದಿದ್ದಾರೆ.

## ಇಂಧನ ಸ್ಥಾವರಗಳ ಮೇಲಿನ ದಾಳಿ ನಿಲ್ಲಿಸಲು ರಷ್ಯಾ-ಉಕ್ರೇನ್ ಒಪ್ಪಿವೆ

**ರಷ್ಯಾ:** ರಷ್ಯಾ ಮತ್ತು ಉಕ್ರೇನ್ ಪರಸ್ಪರರ ಇಂಧನ ಮೂಲಸೌಕರ್ಯಗಳ ಮೇಲಿನ ದಾಳಿಯನ್ನು ನಿಲ್ಲಿಸಲು ಒಪ್ಪಿಕೊಂಡಿವೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ತಮ್ಮ ಟ್ರೂತ್ ನಲ್ಲಿ 'ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧದಲ್ಲಿ ಈಗ ಇಂಧನ ಕದನ ವಿರಾಮ ಜಾರಿಗೆ ಬಂದಿದೆ. ಎರಡೂ ಕಡೆಯವರು ಇದಕ್ಕೆ ಒಪ್ಪಿಕೊಂಡಿದ್ದಾರೆ. ಅದನ್ನು ಮುರಿಯಬೇಡಿ ಎಂದು ಹೇಳಿದರು.



ರಷ್ಯಾದಲ್ಲಿನ ಡೀಸೆಲ್ ಸಂಸ್ಕರಣಾಗಾರದ ಮೇಲೆ ದಾಳಿ ಮಾಡಿ ಜಾಗತಿಕ ಇಂಧನ ಕೊರತೆಯನ್ನು ಉಂಟುಮಾಡಿದ್ದಕ್ಕಾಗಿ ಉಕ್ರೇನಿಯನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿಯನ್ನು ದೂಷಿಸಿದ ಒಂದು ದಿನದ ನಂತರ ಟ್ರಂಪ್ ಅವರಿಂದ ಈ ಘೋಷಣೆ ಬಂದಿದೆ. ಯುದ್ಧದ ಸಮಯದಲ್ಲಿ ರಷ್ಯಾ ಮತ್ತು ಉಕ್ರೇನ್ ಪರಸ್ಪರರ ಇಂಧನ ಮೂಲಸೌಕರ್ಯವನ್ನು ಪದೇ ಪದೇ ಗುರಿಯಾಗಿಸಿಕೊಂಡಿವೆ. ಸಾಮಾಜಿಕ ಮಾಧ್ಯಮದಲ್ಲಿ ಸಂಕ್ಷಿಪ್ತ ಪೋಸ್ಟ್‌ನಲ್ಲಿ, ದಾಳಿಗಳನ್ನು ನಿಲ್ಲಿಸುವ ಒಪ್ಪಂದವು ತಕ್ಷಣವೇ ಜಾರಿಗೆ ಬರಲಿದೆ ಮತ್ತು ಎರಡೂ ಕಡೆಯವರು ಅದಕ್ಕೆ ಒಪ್ಪಿಕೊಂಡಿದ್ದಾರೆ ಎಂದು ಟ್ರಂಪ್ ಬರೆದುಕೊಂಡಿದ್ದಾರೆ. ಶ್ವೇತಭವನವು ಅಧ್ಯಕ್ಷರ ಪೋಸ್ಟ್ ಗೆ ಯಾವುದೇ ಸ್ಪಷ್ಟೀಕರಣ ನೀಡಿಲ್ಲ ಅಥವಾ ಯಾವುದೇ ಹೆಚ್ಚುವರಿ ಮಾಹಿತಿಯನ್ನು ಹಂಚಿ ಕೊಳ್ಳಲಿಲ್ಲ. ಇದಕ್ಕೂ ಮೊದಲು, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಉಕ್ರೇನ್ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡುವ ಸಮಯ ಬಂದಿದೆ ಎಂದು ಹೇಳಿದ್ದರು. ಏಕೆಂದರೆ ಪ್ರಸ್ತುತ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರು ರಷ್ಯಾದೊಂದಿಗಿನ ತಮ್ಮ ದೇಶದ ಯುದ್ಧವನ್ನು ಕೊನೆಗೊಳಿಸಲು ಏನನ್ನು ಮಾಡಿಲ್ಲ. ಅಮೆರಿಕದಲ್ಲಿ ಡೀಸೆಲ್ ಬೆಲೆ ಏರಿಕೆಗೆ ಟ್ರಂಪ್ ಜೆಲೆನ್ಸ್ಕಿ ಅವರನ್ನು ದೂಷಿಸಿದ್ದರು.

## ವಯನಾಡಲ್ಲಿ ಮಂಡ್ಯ ವಿವಿ ವಿದ್ಯಾರ್ಥಿಗಳಿದ್ದ ವ್ಯಾನ್‌ಗೆ ಲಾರಿ ಡಿಕ್ಕಿ, ಇಬ್ಬರು ಸಾವು

**ವಯನಾಡ್:** ಕೇರಳಂ ರಾಜ್ಯದ ವಯನಾಡ್ ಜಿಲ್ಲೆಯ ಸುಲ್ತಾನ್ ಬತ್ತೇರಿ ಬಳಿ ಮಂಡ್ಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿದ್ದ ಪ್ರವಾಸಿ ವ್ಯಾನ್ ಮತ್ತು ಲಾರಿ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ ಮತ್ತು 13 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಸೋಮವಾರ ಮುಂಜಾನೆ ಸುಮಾರು 1:30 ರಿಂದ 1:45 ರ ಅವಧಿಯಲ್ಲಿ ಸುಲ್ತಾನ್ ಬತ್ತೇರಿಯ 54ನೇ ಮೈಲಿ ಬಳಿ ಈ ದುರ್ಘಟನೆ ನಡೆದಿದೆ. ಮಂಡ್ಯ ವಿಶ್ವವಿದ್ಯಾಲಯದ 13 ವಿದ್ಯಾರ್ಥಿಗಳು ಕೇರಳಂನ ಮುನ್ನಾರ್‌ಗೆ ಪ್ರವಾಸ ಮುಗಿಸಿ ವಾಪಸ್ ಬರುತ್ತಿದ್ದಾಗ ಸೋಮವಾರ ಮುಂಜಾನೆ ಸುಮಾರು 1:45 ಕ್ಕೆ ಸುಲ್ತಾನ್ ಬತ್ತೇರಿಯ 54ನೇ ಮೈಲಿ (ಕೊಲಗಪ್ಪರ) ಬಳಿ ಈ ಅಪಘಾತ ನಡೆದಿದೆ. ಇನ್ನು, ಅಪಘಾತದಲ್ಲಿ ಮೃತಪಟ್ಟವರನ್ನು ಮೈಸೂರು ಮೂಲದ ಟೆಂಪೋ ಟ್ರಾವೆಲರ್ ಚಾಲಕ 40 ವರ್ಷದ ರಂಜಿತ್ ಮತ್ತು ಅಡುಗೆಯವರಾದ 22 ವರ್ಷದ ಭರತ್ ಎಂದು ಗುರುತಿಸಲಾಗಿದೆ. ಮುಂದುವರೆದು, ಲಾರಿಗೆ ಮುಖಾಮುಖಿ



ಡಿಕ್ಕಿ ಹೊಡೆದ ನಂತರ ವಿದ್ಯಾರ್ಥಿಗಳಿದ್ದ ವ್ಯಾನ್ ನಿಯಂತ್ರಣ ತಪ್ಪಿ ರಸ್ತೆ ಬದಿಯ ಹಳ್ಳಕ್ಕೆ ಉರುಳಿ ಬಿದ್ದಿದೆ. ಡಿಕ್ಕಿಯ ರಭಸಕ್ಕೆ ವಾಹನದ ಬಾಗಿಲುಗಳು ಸಂಪೂರ್ಣವಾಗಿ ಜಖಂಗೊಂಡು ಲಾಕ್ ಆಗಿದ್ದರಿಂದ ವಿದ್ಯಾರ್ಥಿ ಗಳು ಒಳಗೆ ಸಿಲುಕಿಕೊಂಡಿದ್ದರು. ಇನ್ನು, ಸ್ಥಳೀಯ ನಿವಾಸಿಗಳು ಮತ್ತು ಅಗ್ನಿಶಾಮಕ ಸಿಬ್ಬಂದಿ ಗ್ಯಾಸ್ ಕಟ್ಟರ್‌ಗಳನ್ನು ಬಳಸಿ ವಾಹನವನ್ನು ಕತ್ತರಿಸಿ ವಿದ್ಯಾರ್ಥಿಗಳನ್ನು ಹೊರತೆಗೆದಿದ್ದಾರೆ. ಏತನ್ಮಧ್ಯೆ, ಗಾಯಗೊಂಡ ವಿದ್ಯಾರ್ಥಿಗಳನ್ನು ಮೊದಲು ಸುಲ್ತಾನ್ ಬತ್ತೇರಿಯ ಆಸ್ಪತ್ರೆಗೆ ಹಾಗೂ ನಂತರ ವಯನಾಡ್‌ನ ಮೇಪ್ಪಾಡಿಯಲ್ಲಿರುವ ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಲ್ವರು ವಿದ್ಯಾರ್ಥಿಗಳ ಸ್ಥಿತಿ ಗಂಭೀರವಾಗಿದೆ ಎಂದು ವರದಿಯಾಗಿದೆ.

## ಕಬ್ಬು ಬೆಳೆಗಾರರ ಸಮಸ್ಯೆ ಪರಿಹರಿಸಲು ಬದ್ಧ; ಪ್ರತಿಭಟನೆ, ರಸ್ತೆ ತಡೆ ನಡೆಸುವ ಅವಶ್ಯವಿಲ್ಲ

**ನವದೆಹಲಿ/ಹುಬ್ಬಳ್ಳಿ:** ಕೇಂದ್ರ ಸರ್ಕಾರ, ಇದೇ ಮೊದಲ ಬಾರಿ ಕಬ್ಬು ಬೆಳೆಗಾರರನ್ನು ದೆಹಲಿಗೆ ಕರೆಸಿ ಅಹವಾಲುಗಳನ್ನು ಆಲಿಸಿದ್ದು,



ಯಶಸ್ವಿ ಮಾತುಕತೆ ಸಹ ನಡೆಸಿದೆ. ಇದರ ಹೊರತಾಗಿಯೂ ಕೆಲವರು 'ರಸ್ತೆ ತಡೆ ನಡೆಸುತ್ತೇವೆ' ಎನ್ನುತ್ತಿದ್ದಾರೆ. ಇದರ ಅಗತ್ಯವಿಲ್ಲ, ಸರ್ಕಾರ ತಮ್ಮ ಪರವಾಗಿಯೇ ಇದ್ದು, ಸಕಾರಾತ್ಮಕ ಕ್ರಮಗಳನ್ನೇ ಕೈಗೊಳ್ಳಲಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಸ್ಪಷ್ಟಪಡಿಸಿದ್ದಾರೆ.

ದೆಹಲಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ಯಾವತ್ತೂ ರೈತಪರವಾಗಿಯೇ ಇದೆ. ಹಾಗಾಗಿ ಯಾರೂ ಪ್ರತಿಭಟನೆ, ರಸ್ತೆ ತಡೆ ನಡೆಸುವ ಅವಶ್ಯವಿಲ್ಲ. ಯಾರೂ ಇದಕ್ಕೆ ಅವಕಾಶ ಕೂಡ ಕಡಬಾರದು ಎಂದು ರೈತರಲ್ಲಿ ಮನವಿ ಮಾಡಿದರು.

ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಪರಿಹರಿಸಲು ಕೇಂದ್ರ ಸರ್ಕಾರ ಬದ್ಧವಿದೆ. ಪಕ್ಷಾತೀತವಾಗಿ ಎಲ್ಲಾ ರಾಜ್ಯ ಸರ್ಕಾರಗಳ ಸಹಕಾರ ಪಡೆದು ಅಗತ್ಯ ಕ್ರಮ ಕೈಗೊಳ್ಳುತ್ತದೆ. ಕೃಷಿ ಸಚಿವ ಶಿವರಾಜಸಿಂಗ್ ಚವ್ಹಾಣ್ ಮತ್ತು ಆಹಾರ ಸಚಿವನಾಗಿ ನಾನು ರೈತರ ಸಮಸ್ಯೆಗಳನ್ನೆಲ್ಲ ಆಲಿಸಿದ್ದು, ಶೀಘ್ರದಲ್ಲೇ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು.

ಕಬ್ಬು ಬೆಳೆಗಾರರ ಸಮಸ್ಯೆಗಳಿಗೆ ಪರಿಹಾರ ಒಂದೆರೆಡು ದಿನದಲ್ಲಿ ಅಥವಾ ಒಂದೆರೆಡು ಸಚಿವಾಲಯಗಳಿಂದ ಆಗುವಂಥದ್ದಲ್ಲ, ಬಹು ಸಚಿವಾಲಯಗಳ ಸಹಕಾರ, ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಆಗಬೇಕಿದೆ. ಹಾಗಾಗಿ ಅತಿ ಶೀಘ್ರದಲ್ಲೇ ಕಬ್ಬು ಬೆಳೆಗಾರರಿಗೆ ತಮ್ಮ ಸರ್ಕಾರ ಸಿಹಿ ಸುದ್ದಿ ನೀಡಲಿದೆ. ಕಾರಣ ಯಾರೊಬ್ಬರೂ ರಸ್ತೆ ರೋಖೋ ನಡೆಸಬೇಕಿಲ್ಲ ಎಂದು ಜೋಶಿ ತಿಳಿಸಿದ್ದಾರೆ.

**ಇದೇ ಮೊದಲು ದೆಹಲಿಗೆ ಕರೆಸಿ ಚರ್ಚೆ:** ಕೇಂದ್ರ ಸರ್ಕಾರ ಕಬ್ಬು ಬೆಳೆಗಾರರನ್ನು ದೆಹಲಿಗೆ ಕರೆಸಿ ಉನ್ನತ ಮಟ್ಟದ ಸಭೆ ನಡೆಸಿರುವುದು ಇದೇ ಮೊದಲು. ಶಿವರಾಜಸಿಂಗ್ ಚವ್ಹಾಣ್ ಅವರ ನೇತೃತ್ವದಲ್ಲಿ, ಕೇಂದ್ರದ ಉನ್ನತ ಅಧಿಕಾರಿಗಳು, ರಾಜ್ಯ ಸರ್ಕಾರಗಳ ಸಂಬಂಧಿತ ಸಚಿವರು ಹಾಗೂ ಕಬ್ಬು ಬೆಳೆಗಾರರ ಸಮ್ಮುಖದಲ್ಲೇ ಸತತ ಮೂರ್ನಾಲ್ಕು ತಾಸುಗಳ ಕಾಲ ಸುದೀರ್ಘವಾಗಿ ಮಾತುಕತೆ ನಡೆಸಿದೆ. ರೈತರ ಎಲ್ಲಾ ಸಮಸ್ಯೆಗಳನ್ನು ಸಹನಾಭೂತಿಯಿಂದ ಆಲಿಸಿದ್ದೇವೆ. ಅತ್ಯಂತ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಲೆಂದೇ ಜಂಟಿ ಸಮಿತಿ ಸಹ ರಚಿಸಲು ತೀರ್ಮಾನಿಸಿದೆ ಎಂದರು.

### ಅಂತಾರಾಷ್ಟ್ರೀಯ ಹಣಕಾಸು ನಿಧಿಯು 2026ನೇ ಸಾಲಿನ ಭಾರತದ ಆರ್ಥಿಕ ಬೆಳವಣಿಗೆಯ ಮುನ್ಸೂಚನೆಯನ್ನು ಶೇಕಡಾ 7 ರಷ್ಟು ಏರಿಸಿದೆ

# ವಿಶ್ವದ ಆರ್ಥಿಕ ಬೆಳವಣಿಗೆ ಶೇ.3.1 ಇದ್ದರೆ, ಭಾರತದ ಆರ್ಥಿಕತೆ ಶೇ.7 ರಷ್ಟು ಬೆಳವಣಿಗೆ

**ನವದೆಹಲಿ:** ಅಂತಾರಾಷ್ಟ್ರೀಯ ಹಣಕಾಸು ನಿಧಿಯು 2026ನೇ ಸಾಲಿನ ಭಾರತದ ಆರ್ಥಿಕ ಬೆಳವಣಿಗೆಯ ಮುನ್ಸೂಚನೆಯನ್ನು ಶೇಕಡಾ 7 ರಷ್ಟು ಏರಿಸಿದೆ. ಹೆಚ್ಚುತ್ತಿರುವ ಸಾರ್ವಜನಿಕ ಸಾಲ ಮತ್ತು ಹೆಚ್ಚಿನ ಬಡ್ಡಿದರಗಳು ಭವಿಷ್ಯದ ಆರ್ಥಿಕ ಬಿಕ್ಕಟ್ಟುಗಳನ್ನು ಎದುರಿಸುವ ಸಾಮರ್ಥ್ಯವನ್ನು ಸೀಮಿತಗೊಳಿಸುತ್ತಿವೆ. ಪ್ರಮುಖ ಆರ್ಥಿಕತೆಗಳು ತಮ್ಮ ಹಣಕಾಸಿನ ಕೊರತೆಯನ್ನು ನಿಯಂತ್ರಿಸಲು ಮತ್ತು ಬಫರ್‌ಗಳನ್ನು ಮರುನಿರ್ಮಿಸಲು ಹೆಚ್ಚಿನ ಒತ್ತಡವನ್ನು ಎದುರಿಸುತ್ತಿವೆ ಎಂದು ಐಎಂಎಫ್ ಕಳವಳ ವ್ಯಕ್ತಪಡಿಸಿದೆ.

> 1. ಬಫರ್‌ಗಳನ್ನು ಮರುನಿರ್ಮಿಸಲು ಹೆಚ್ಚಿನ ಒತ್ತಡ
> 2. ಅಮೆರಿಕ-ಇರಾನ್ ಸಂಘರ್ಷದಿಂದ ವ್ಯತಿರಿಕ್ತ ಪರಿಣಾಮ
> 3. ಅನೇಕ ರಾಷ್ಟ್ರಗಳು ವಿತ್ತೀಯ ಕೊರತೆ ಎದುರಿಸುತ್ತಿವೆ

ಈ ಜಾಗತಿಕ ಹಣಕಾಸು ಸಂಸ್ಥೆಯು ಭಾರತವನ್ನು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಗಳಲ್ಲಿ ಒಂದೆಂದು ಗುರುತಿಸಿದೆ. ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಅಮೆರಿಕ-ಇರಾನ್ ಸಂಘರ್ಷ ಮತ್ತು ತೈಲ ಬೆಲೆ ಏರಿಕೆಯು ಜಗತ್ತಿನ ಬಹುಭಾಗದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದ್ದರೂ, ಐಎಂಎಫ್ ತನ್ನ ಅಕ್ಟೋಬರ್ 2026ರ ವಿಶ್ವ ಆರ್ಥಿಕ ದೃಷ್ಟಿಕೋನ ವರದಿಯಲ್ಲಿ ಭಾರತದ ಬೆಳವಣಿಗೆಯ ಮುನ್ಸೂಚನೆಯನ್ನು ಹೆಚ್ಚಿಸಿದೆ.

ಅನೇಕ ದೇಶಗಳ ಆರ್ಥಿಕತೆಗಳು ಹೆಚ್ಚಿನ ಸಾರ್ವಜನಿಕ ಸಾಲದ ಒತ್ತಡವನ್ನು ಎದುರಿಸುತ್ತಿವೆ. ಕೋವಿಡ್-19 ಸಾಂಕ್ರಾಮಿಕ ಪೂರ್ವದ ಅವಧಿಗಿಂತ ಈಗ ಅನೇಕ ರಾಷ್ಟ್ರಗಳಲ್ಲಿ ವಿತ್ತೀಯ ಕೊರತೆಯು ಗಮನಾರ್ಹವಾಗಿ ಹೆಚ್ಚಾಗಿದೆ ಎಂದು ಐಎಂಎಫ್ ಹೇಳಿದೆ. ಹೆಚ್ಚಿನ ಹಣಕಾಸು ವೆಚ್ಚಗಳು ಸರ್ಕಾರದ ಹಣಕಾಸಿನ ಸುಸ್ಥಿರತೆಯ ಬಗೆಗಿನ ಕಳವಳವನ್ನು ಹೆಚ್ಚಿಸುತ್ತಿವೆ ಎಂದು ವರದಿಯು ಎಚ್ಚರಿಸಿದೆ.




ಜಾಗತಿಕ ಆರ್ಥಿಕತೆಯು ಮತ್ತೊಮ್ಮೆ ಚೇತರಿಕೆಯ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದೆ. ಆದರೆ, ಈ ಬೆಳವಣಿಗೆಯು ಅಸಮವಾಗಿದೆ. ಅಲ್ಪಾವಧಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಅವಕಾಶಗಳು ವೇಗವಾಗಿ ಕಡಿಮೆಯಾಗುತ್ತಿವೆ ಎಂದು ಐಎಂಎಫ್ ಹೇಳಿದೆ. ಪ್ರಸ್ತುತ ಭೌಗೋಳಿಕ-ರಾಜಕೀಯ ಅನಿಶ್ಚಿತತೆ, ಹೆಚ್ಚಿನ ಇಂಧನ ಬೆಲೆಗಳು ಮತ್ತು ವ್ಯಾಪಾರ ನೀತಿಗಳಲ್ಲಿನ ಬದಲಾವಣೆಗಳನ್ನು ಪರಿಗಣನೆಗೆ ತೆಗೆದುಕೊಂಡರೆ, ಜಾಗತಿಕ ಬೆಳವಣಿಗೆಯು 2025ರಲ್ಲಿನ ಶೇಕಡಾ 3.5ರಿಂದ 2026ರಲ್ಲಿ ಶೇಕಡಾ 3.1ಕ್ಕೆ ಕುಸಿಯುವ ನಿರೀಕ್ಷೆಯಿದೆ.

2026ರ ಅಮೆರಿಕದ ಬೆಳವಣಿಗೆಯ ಮುನ್ಸೂಚನೆಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. 2027ರ ಬೆಳವಣಿಗೆಯ ಅಂದಾಜಿನಲ್ಲಿ ಎಪ್ರಿಲ್ ತಿಂಗಳಿಗಿಂತ ಶೇಕಡಾ 0.2ರಷ್ಟು ಹೆಚ್ಚಳವಾಗಿದೆ. ಅಮೆರಿಕದ ಗ್ರಾಹಕ ಬೆಲೆ ಹಣದುಬ್ಬರವು 2025ರಲ್ಲಿ ಶೇಕಡಾ 2.7ರಷ್ಟಿದ್ದು, 2026ರಲ್ಲಿ ಶೇಕಡಾ 3.6ಕ್ಕೆ ಏರಿಕೆಯಾಗಲಿದೆ ಮತ್ತು ನಂತರ 2027ರಲ್ಲಿ ಶೇಕಡಾ 2.8ಕ್ಕೆ ಇಳಿಕೆಯಾಗಲಿದೆ ಎಂದು ಐಎಂಎಫ್ ಅಂದಾಜಿಸಿದೆ.

**ಅಮೆರಿಕದ ಆರ್ಥಿಕತೆಯ ಬೆಳವಣಿಗೆಯ ಅಂದಾಜು**

ಅಮೆರಿಕದ ಆರ್ಥಿಕತೆಯು 2026 ಮತ್ತು 2027ರ ಅವಧಿಯಲ್ಲಿ ಶೇಕಡಾ 2.3ರಷ್ಟು ಬೆಳೆಯುವ ನಿರೀಕ್ಷೆಯಿದೆ ಎಂದು ಐಎಂಎಫ್ ತನ್ನ ವರದಿಯಲ್ಲಿ ತಿಳಿಸಿದೆ. ಬಲವಾದ ಗ್ರಾಹಕ ವೆಚ್ಚ ಮತ್ತು ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿನ ಹೂಡಿಕೆಯು ವಿಶ್ವದ ಅತಿದೊಡ್ಡ ಆರ್ಥಿಕತೆಗೆ ಬೆಂಬಲ ನೀಡಲಿದೆ ಎಂದು ಎಂದಿದೆ. ಹಣದುಬ್ಬರ, ಸರ್ಕಾರದ ಸಾಲದ ವೆಚ್ಚದಲ್ಲಿನ ಏರಿಕೆ ಮತ್ತು ಹಣಕಾಸು ಮಾರುಕಟ್ಟೆಯ ಅಪಾಯಗಳು ಈ ಆರ್ಥಿಕ ದೃಷ್ಟಿಕೋನಕ್ಕೆ ಸವಾಲೊಡ್ಡಬಹುದು ಎಂದೂ ಚ್ಚರಿಸಿದೆ.

2027ರಲ್ಲಿ ಅಮೆರಿಕದ ಒಟ್ಟಾರೆ ಹಣದುಬ್ಬರವು ಶೇಕಡಾ 4ರ ಗಡಿಯನ್ನು ದಾಟುವ ಸಾಧ್ಯತೆ ಶೇಕಡಾ 30ರಷ್ಟಿದೆ ಎಂದು ಐಎಂಎಫ್ ಅಂದಾಜಿಸಿದೆ. ಜಾಗತಿಕ ಇಂಧನ ಪೂರೈಕೆ, ವ್ಯಾಪಾರ ಉದ್ವಿಗ್ನತೆಗಳು ಮತ್ತು ಮಧ್ಯಪ್ರಾಚ್ಯ ಸಂಘರ್ಷದ ಆರ್ಥಿಕ ಪರಿಣಾಮಗಳ ಕುರಿತಾದ ತೀವ್ರ ಅನಿಶ್ಚಿತತೆಯಂತಹ ಸವಾಲುಗಳ ನಡುವೆಯೇ ಐಎಂಎಫ್‌ನ ಈ ಅಂದಾಜುಗಳು ಹೊರಬಿದ್ದಿವೆ.

**ಅಮೆರಿಕ-ಚೀನಾ ಸುಂಕ ಸಮರದ ಪರಿಣಾಮ:** ಅಮೆರಿಕ ಮತ್ತು ಚೀನಾ ವಿಧಿಸಿರುವ ಕಠಿಣ ಸುಂಕಗಳ ಕುರಿತು ಪ್ರತಿಕ್ರಿಯಿಸಿದ ಐಎಂಎಫ್ ವರದಿಯು, ಈ ತೆರಿಗೆಗಳು ದ್ವಿಪಕ್ಷೀಯ ವ್ಯಾಪಾರವನ್ನು ತೀವ್ರವಾಗಿ ಕಡಿಮೆ ಮಾಡಿವೆ. ಆದರೆ, ಎರಡೂ ದೇಶಗಳ ಉದ್ಯಮಗಳು ಈ ಪರಿಣಾಮವನ್ನು ಸಮರ್ಥವಾಗಿ ನಿಭಾಯಿಸಿವೆ ಎಂದು ಉಲ್ಲೇಖಿಸಿದೆ.

ಫೆಬ್ರುವರಿ 2025 ಮತ್ತು ಜನವರಿ 2026ರ ನಡುವೆ ಅಮೆರಿಕಕ್ಕೆ ಚೀನಾದ ರಫ್ತು ಶೇಕಡಾ 22ರಷ್ಟು ಕುಸಿತ ಕಂಡಿದೆ. ಫೆಬ್ರುವರಿ 2025 ಮತ್ತು ಜನವರಿ 2026ರ ನಡುವೆ ಚೀನಾಕ್ಕೆ ಅಮೆರಿಕದ ರಫ್ತು ಶೇಕಡಾ 25ರಷ್ಟು ಕುಸಿತ ಕಂಡಿದೆ.

# ಮಿನಿ ನ್ಯೂಸ್

## ಪುಣೆ ಟೆಕ್ಕಿ ಆತ್ಮಹತ್ಯೆ: ಡೆತ್‌ನೋಟ್ ಪತ್ತೆ

**ಪುಣೆ:** ಮಹಾರಾಷ್ಟ್ರದ ಪುಣೆಯಲ್ಲಿ ವರದಕ್ಷಿಣೆಗಾಗಿ ಅತ್ತೆ-ಮಾವಂದಿರು ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ 33 ವರ್ಷದ ಐಟಿ ಎಂಜಿನಿಯರ್ ಮಹಿಳೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಪೊಲೀಸರು ಆಕೆಯ ಪತಿ, ಆತನ ಕುಟುಂಬದ ಸದಸ್ಯರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತ ಮಹಿಳೆಯನ್ನು ತ್ರಿಷ್ಣಾ ರಾಹುಲ್ ಸಕ್ಪಾಲ್ ಎಂದು ಗುರುತಿಸಲಾಗಿದೆ. ಆಕೆಯ ತಂದೆ ಬಾಲಕೃಷ್ಣ ನಿಕಮ್ ಅವರು ನೀಡಿದ ದೂರಿನ ಪ್ರಕಾರ, ತ್ರಿಷ್ಣಾ ಅವರು 2018ರಲ್ಲಿ ರಾಹುಲ್ ಸಕ್ಪಾಲ್ ಅವರನ್ನು ವಿವಾಹವಾಗಿದ್ದರು. ವಿವಾಹದ ನಂತರ, ತಮ್ಮ ಸಂಪೂರ್ಣ ವೇತನ ನೀಡುವಂತೆ ಮತ್ತು ತವರು ಮನೆಯ ಕೋಟ್ಯಾಂತರ ರೂ. ಬೆಲೆ ಬಾಳುವ ಫ್ಲಾಟ್ ಅನ್ನು ಅತ್ತೆಯ ಹೆಸರಿಗೆ ವರ್ಗಾಯಿಸುವಂತೆ ಹಾಗೂ ಮಾವನಿಗಾಗಿ 1 ಕೋಟಿ ರೂ. ಮೌಲ್ಯದ ಫ್ಲಾಟ್ ಅನ್ನು ಖರೀದಿಸುವಂತೆ ಆಕೆಯ ಮೇಲೆ ಒತ್ತಡ ಹೇರಲಾಗುತ್ತಿತ್ತು ಎಂದು ನಿಕಮ್ ಆರೋಪಿಸಿದ್ದಾರೆ. ದೈಹಿಕ ಹಾಗೂ ಮಾನಸಿಕ ಕಿರುಕುಳದಿಂದ ನೊಂದ ತ್ರಿಷ್ಣಾ ಅವರು 2021ರಲ್ಲಿ ತಮ್ಮ ತವರು ಮನೆಗೆ ಮರಳಿದ್ದರು. ನಂತರ ಆಕೆಯ ಪತಿ ಮರುಮದುವೆಯಾಗುವ ಉದ್ದೇಶದಿಂದ ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದರು. ಆದರೆ ಈ ಪ್ರಕರಣವು ಪ್ರಸ್ತುತ ನ್ಯಾಯಾಲಯದಲ್ಲಿ ಬಾಕಿ ಇದೆ. ನಂತರ, ಕಳೆದ ಸೆಪ್ಟೆಂಬರ್ 29 ರಂದು ಅವರು ತಮ್ಮ ಮನೆಯಲ್ಲಿಯೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪೊಲೀಸರಿಗೆ ದೊರೆತ ಆತ್ಮಹತ್ಯೆ ಪತ್ರದಲ್ಲಿ, ತಮ್ಮ ಸಾವಿಗೆ ಪತಿ, ಅತ್ತೆ ವೈಶಾಲಿ, ಮಾವ ಸಂಜಯ್, ನಾದಿನಿ ಶೈಲಿ ಮತ್ತು ಅಜ್ಜಿ ಶಕುಂತಲಾ ಸಾಳುಂಕೆ ಕಾರಣರೆಂದು ಅವರು ಉಲ್ಲೇಖಿಸಿದ್ದರು. ಮಹಿಳೆ ತಂದೆ ನೀಡಿದ ದೂರಿನ ಆಧಾರದ ಮೇಲೆ ಐವರು ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

## ಪರ್ವಿಂದರ್ ಸಿಂಗ್ ಗುಂಡೇಟಿಗೆ ಬಲಿ!

**ಚಂಡೀಗಢ:** ಪಂಜಾಬ್‌ನ ಮನ್ಸಾದಲ್ಲಿರುವ ಮೆಡಿಕಲ್ ಸ್ಟೋರ್ ವೊಂದರಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಮಾದಕವಸ್ತು ವಿರೋಧಿ ಹೋರಾಟಗಾರ ಪರ್ವಿಂದರ್ ಸಿಂಗ್ ಜೋತಾ ಅವರನ್ನು ಗುಂಡಿಕ್ಕಿ ಕೊಲ್ಲಲಾಗಿದೆ. ಈ ಘಟನೆಯಲ್ಲಿ ಅವರೊಂದಿಗೆ ಇದ್ದ ವ್ಯಕ್ತಿಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

ಗಾಯಗೊಂಡಿದ್ದ ಜೋತಾ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಅವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು. ಔಷಧ ಖರೀದಿಸಲು ತಮ್ಮ ಸಹಚರನೊಂದಿಗೆ ಮೆಡಿಕಲ್ ಸ್ಟೋರ್ ಗೆ ತೆರಳಿದಾಗ ಈ ಗುಂಡಿನ ದಾಳಿ ನಡೆದಿದೆ ಎಂದು ವರದಿಯಾಗಿದೆ.

ಮೆಡಿಕಲ್ ಸ್ಟೋರ್ ಮಾಲೀಕ ಅಶ್ವಿನಿ ಕುಮಾರ್ ಗುಂಡು ಹಾರಿಸಿದ್ದಾರೆ ಎಂದು ಆರೋಪಿಸಲಾಗಿದೆ. ಗುಂಡಿನ ದಾಳಿಗೆ ಕಾರಣವಾದ ಸನ್ನಿವೇಶಗಳು ಮತ್ತು ಮೆಡಿಕಲ್ ಸ್ಟೋರ್ ಮಾಲೀಕರ ಮೇಲಿನ ಆರೋಪಗಳು ಲಭ್ಯವಿರುವ ಮಾಹಿತಿಯಲ್ಲಿ ಸ್ವತಂತ್ರವಾಗಿ ದೃಢಪಟ್ಟಿಲ್ಲ. ವರದಿಗಳ ಪ್ರಕಾರ, ವೈದ್ಯಕೀಯ ಮಳಿಗೆಯಲ್ಲಿ ಗುಂಡಿನ ದಾಳಿ ನಡೆದಾಗ ಜೋತಾ ಫೇಸ್‌ಬುಕ್‌ನಲ್ಲಿ ಲೈವ್ ಪ್ರಸಾರ ಮಾಡುತ್ತಿದ್ದರು ಎನ್ನಲಾಗಿದೆ. ಜೋತಾ ಹಾಗೂ ಅಂಗಡಿ ಮಾಲೀಕರ ನಡುವೆ ತೀವ್ರ ವಾಗ್ವಾದ ನಡೆದಿದೆ. ವಿಡಿಯೋದಲ್ಲಿ ಮಾಲೀಕ ಪಿಸ್ತೂಲ್ ಹಿಡಿದಿರುವುದು ಕಂಡುಬಂದಿದೆ. "ನನ್ನನ್ನು ಕೊಲ್ಲು, ನನ್ನನ್ನು ಕೊಲ್ಲು" ಎಂದು ಜೋತಾ ಮಾಲೀಕರಿಗೆ ಪದೇ ಪದೇ ಹೇಳುತ್ತಿದ್ದರು. "ನೀವು ಯಾಕೆ ಪಿಸ್ತೂಲ್ ಇಟ್ಟುಕೊಂಡಿದ್ದೀರಿ?" ಎಂದು ಮಾಲೀಕರನ್ನು ಪ್ರಶ್ನಿಸಿದ್ದಾರೆ. ಪೊಲೀಸರಿಗೆ ಕರೆ ಮಾಡಲು ಮತ್ತು ಹೆಚ್ಚಿನ ಜನರನ್ನು ಕರೆಸಿಕೊಳ್ಳಲು ಅವರು ತಮ್ಮ ಸಹಚರರಿಗೆ ಹೇಳುತ್ತಿರುವುದು ಕೂಡ ಕೇಳಿಬಂದಿದೆ. ವಿಡಿಯೋದಲ್ಲಿ, ಸಿಸಿಟಿವಿ ದೃಶ್ಯಾವಳಿಗಳನ್ನು ತೋರಿಸುವಂತೆ ಜೋತಾ ಅಂಗಡಿಯಲ್ಲಿದ್ದವರನ್ನು ಕೇಳುತ್ತಿರುವುದು ಕೇಳಿಸುತ್ತದೆ. ಆಗ ಅಂಗಡಿ ಮಾಲೀಕ ಅಲ್ಲಿದ್ದ ವೃದ್ಧ ವ್ಯಕ್ತಿಯನ್ನು ತೋರಿಸಿ, ತನ್ನಿಂದ 'ಮಾದಕ ದ್ರವ್ಯ'ಗಳನ್ನು (ಡ್ರಗ್ಸ್) ಪಡೆದಿದ್ದೀರಾ ಎಂದು ಕೇಳಿದನು. ಅದಕ್ಕೆ ಜೋತಾ, "ಹೌದು, ನಮ್ಮ ಬಳಿ ರೆಕಾರ್ಡಿಂಗ್ ಇದೆ" ಎಂದು ಉತ್ತರಿಸಿದ್ದಾರೆ.ಸುಮಾರು ನಾಲ್ಕು ನಿಮಿಷಗಳ ಕಾಲ ವಾಗ್ವಾದ ಮುಂದುವರಿದ ನಂತರ ಅಂಗಡಿ ಮಾಲೀಕ ಗುಂಡು ಹಾರಿಸಿದ್ದು, ಜೋತಾ ಮೃತಪಟ್ಟಿದ್ದಾರೆ. ಅವರ ಮೊಬೈಲ್ ಫೋನ್ ಕೆಳಗೆ ಬಿತ್ತು ಮತ್ತು ಲೈವ್ ರೆಕಾರ್ಡಿಂಗ್ ಸ್ಥಗಿತಗೊಂಡಿತು. ಅಂಗಡಿ ಮಾಲೀಕರು ಪರಾರಿಯಾಗಿದ್ದಾರೆ.

## ಪಶ್ಚಿಮ ಬಂಗಾಳದಲ್ಲಿ ಭುಗಿಲೆದ್ದ ರಾಜಕೀಯ ವಿವಾದ!

**ಕೋಲ್ಕತ್ತ:** ದುರ್ಗಾ ಪೂಜೆಗೂ ಮುನ್ನ ಪಶ್ಚಿಮ ಬಂಗಾಳದಲ್ಲಿ ರಾಜಕೀಯ ವಿವಾದವೊಂದು ಭುಗಿಲೆದ್ದಿದೆ. ಹಿಂದೂ ಮಾಲೀಕತ್ವದ ಅಂಗಡಿಗಳಿಂದಲೇ ಬಿರಿಯಾನಿ ಮತ್ತು ಪೂಜೆಗೆ ಸಂಬಂಧಿಸಿದ ವಸ್ತುಗಳನ್ನು ಖರೀದಿಸುವಂತೆ ಕರೆ ನೀಡುವ ಪೋಸ್ಟರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿರುವುದೇ ಈ ವಿವಾದಕ್ಕೆ ಕಾರಣ. ಈ ಪೋಸ್ಟರ್‌ಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ವಿರೋಧ ಪಕ್ಷಗಳು ಪೊಲೀಸರನ್ನು ಒತ್ತಾಯಿಸಿವೆ. ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ನೊಂದಿಗೆ ಗುರುತಿಸಿ ಕೊಂಡಿರುವ 'ಹಿಂದೂ ಜಾಗರಣ ಮಂಚ್' ಎಂಬ ಸಂಘಟನೆಯು ಸಿಲಿಗುರಿಯಲ್ಲಿ ಈ ಪೋಸ್ಟರ್‌ಗಳನ್ನು ಅಳವಡಿಸಿದೆ. ತಮ್ಮ ಅಭಿಯಾನವನ್ನು ಸಮರ್ಥಿಸಿಕೊಂಡಿರುವ ಸಂಘಟನೆಯು, ಇವು ಕೇವಲ ಮನವಿಯೇ ಹೊರತು ಆದೇಶವಲ್ಲ ಎಂದು ಸ್ಪಷ್ಟಪಡಿಸಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪೋಸ್ಟರ್‌ವೊಂದರಲ್ಲಿ ಬಿರಿಯಾನಿ ತಿನ್ನುವುದರಿಂದ ಯಾರೂ ನಿಮ್ಮನ್ನು ತಡೆಯುತ್ತಿಲ್ಲ. ಖಂಡಿತವಾಗಿಯೂ ಬಿರಿಯಾನಿ ತಿನ್ನಿ, ಆದರೆ ಹಿಂದೂ ಅಂಗಡಿಗಳಿಂದಲೇ ಖರೀದಿಸಿ" ಎಂಬ ಸಂದೇಶವಿದೆ. ಆಹಾರ ಖರೀದಿಯನ್ನು ಧರ್ಮದೊಂದಿಗೆ ಜೋಡಿಸುವ ಈ ಪ್ರಯತ್ನಕ್ಕೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದು, ರಾಜಕೀಯ ನಾಯಕರಿಂದ ತೀವ್ರ ಟೀಕೆಗಳು ವ್ಯಕ್ತವಾಗಿವೆ.

## ಬೇರೆ ಅರಮನೆಗೆ ಶಿಫ್ಟ್ ಆಗ್ತಿದ್ದಾರೆ ಸೌದಿ ಕ್ರೌನ್ ಪ್ರಿನ್ಸ್!

**ಯೆಮೆನ್:** ಇರಾನ್ ಬೆಂಬಲಿತ ಹೌತಿ ಬಂಡುಕೋರರು ಸೌದಿ ಅರೇಬಿಯಾದ ನಾಗರಿಕ ಹಾಗೂ ಸಾರಿಗೆ ಮೂಲಸೌಕರ್ಯಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳನ್ನು ತೀವ್ರಗೊಳಿಸಿರುವ ಹಿನ್ನೆಲೆಯಲ್ಲಿ, ಸೌದಿ ಕ್ರೌನ್ ಪ್ರಿನ್ಸ್ ಮತ್ತು ಪ್ರಧಾನಿ ಮೊಹಮ್ಮದ್ ಬಿನ್ ಸಲ್ಮಾನ್ ಭದ್ರತೆಯನ್ನು ಹೆಚ್ಚಿಸಲಾಗಿದೆ. ಅಮೆರಿಕದ ಪ್ರಸಿದ್ಧ ಪತ್ರಿಕೆ



ಹೌತಿ ಕ್ಷಿಪಣಿ ದಾಳಿಗಳ ಭೀತಿ:

ವಾಲ್ ಸ್ಟ್ರೀಟ್ ಜರ್ನಲ್ ವರದಿಯ ಪ್ರಕಾರ, ಸಂಭಾವ್ಯ ದಾಳಿಗಳ ಮುನ್ನೆಚ್ಚರಿಕೆಯಾಗಿ 41 ವರ್ಷದ ಕ್ರೌನ್ ಪ್ರಿನ್ಸ್ ಅವರನ್ನು ಭೂಗತ ಬಂಕರ್‌ಗಳನ್ನು ಹೊಂದಿರುವ ಅತ್ಯಂತ ಭದ್ರತೆಯುಳ್ಳ ಅರಮನೆಗಳ ನಡುವೆ ನಿರಂತರವಾಗಿ ಸ್ಥಳಾಂತರಿಸಲಾಗುತ್ತಿದೆ. ರಾಷ್ಟ್ರೀಯ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ರಕ್ತದಾನ ಮಾಡಿದ ಬಳಿಕ ಕ್ರೌನ್ ಪ್ರಿನ್ಸ್ ಸಾರ್ವಜನಿಕವಾಗಿ ಎಲ್ಲಿಯೂ ಕಾಣಿಸಿಕೊಂಡಿಲ್ಲ. ಭದ್ರತಾ ಬೆದರಿಕೆಗಳು ಹೆಚ್ಚಾಗಿರುವುದರಿಂದ ಅತ್ಯಂತ ವಿಶ್ವಾಸಾರ್ಹ ಮತ್ತು ವಿಶೇಷವಾಗಿ ಆಯ್ಕೆ ಮಾಡಲಾದ ಭದ್ರತಾ ಸಿಬ್ಬಂದಿಯ ಕಾವಲಿನಲ್ಲಿ ಅವರನ್ನು ರಹಸ್ಯ ಸ್ಥಳಗಳಲ್ಲಿ ಇರಿಸಲಾಗಿದೆ. ಹೌತಿಗಳ ಕ್ಷಿಪಣಿ ದಾಳಿಯನ್ನು ಹೊಡೆದುರುಳಿಸುವ 'ಇಂಟರ್‌ಸೆಪ್ಟರ್ ಕ್ಷಿಪಣಿ'ಗಳ ಕೊರತೆ ಎದುರಾಗುತ್ತಿರುವ ಹಿನ್ನೆಲೆಯಲ್ಲಿ, ಸೌದಿ ವಾಯುಪಡೆಯು ತನ್ನ ಪ್ರಮುಖ ಏರ್ ಡಿಫೆನ್ಸ್ ಬ್ಯಾಟರಿಗಳನ್ನು ರಾಜಮನೆತನದ ಅರಮನೆಗಳು ಮತ್ತು ಪ್ರಮುಖ ಇಂಧನ ಘಟಕಗಳ ರಕ್ಷಣೆಗೆ ಮರುನಿಯೋಜಿಸಿದೆ ಎಂದು ತಿಳಿದುಬಂದಿದೆ. ರಕ್ತದಾನ ಮಾಡಿದ ನಂತರ 41 ವರ್ಷದ ಯುವರಾಜರು ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. 'ವಾಲ್ ಸ್ಟ್ರೀಟ್ ಜರ್ನಲ್' ವರದಿ ಮಾಡಿರುವಂತೆ, ಅವರನ್ನು ಬಿಗಿ ಭದ್ರತೆ ಮತ್ತು ಸುರಕ್ಷಿತ ಬಂಕರ್‌ಗಳನ್ನು ಹೊಂದಿರುವ ಅರಮನೆಗಳ ನಡುವೆ ಸ್ಥಳಾಂತರಿಸಲಾಗುತ್ತಿದೆ. ಸೌದಿ ಅರೇಬಿಯಾ ಮತ್ತು ಯೆಮೆನ್‌ನ ಹೌತಿ ಬಂಡುಕೋರರ ನಡುವಿನ ಸಂಘರ್ಷ ತೀವ್ರಗೊಳ್ಳುತ್ತಿದ್ದು, ಭದ್ರತಾ ಬೆದರಿಕೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ, ವಿಶೇಷವಾಗಿ ಆಯ್ಕೆ ಮಾಡಲಾದ ಭದ್ರತಾ ತಂಡವೊಂದು ಅವರಿಗೆ ರಕ್ಷಣೆ ನೀಡುತ್ತಿದೆ.

# ದರ್ಶನ್‌ಗೆ ಕಂಟಕವಾಗ್ತಾರಾ ದೋಸ್ತಿಗಳು?



ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಟ ಚಿಕ್ಕಣ್ಣ ಹಾಗೂ ನಟ ಯಶಸ್ ಸೂರ್ಯ ಅವರನ್ನು ಘಟನೆ ನಡೆದ ದಿನ (ಜೂನ್ 8, 2024) ಆರ್‌ಆರ್ ನಗರದ ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿ ನಟ ದರ್ಶನ್ ಅವರೊಂದಿಗೆ ಪಾರ್ಟಿಯಲ್ಲಿದ್ದ ಕಾರಣ ಇವರನ್ನು ಪ್ರಮುಖ ಸಾಕ್ಷಿಗಳನ್ನಾಗಿ ಪರಿಗಣಿಸಲಾಗಿದೆ. ಹಾಗಾಗಿ, ಮಂಗಳವಾರ ಬೆಂಗಳೂರಿನ 59ನೇ ಅಅಊ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯಲು ಹಾಜರಾಗಿದ್ದ ನಟ ಚಿಕ್ಕಣ್ಣ ತೀವ್ರ ಆತಂಕ ಮತ್ತು ಗಾಬರಿಯಿಂದಾಗಿ ಸಾಕ್ಷಿ ಹೇಳುವಾಗ ತಡಬಡಿಸಿದ್ದಾರೆ. ಮತ್ತೊಬ್ಬ ಪ್ರಮುಖ ಸಾಕ್ಷಿಯಾದ ನಟ ಯಶಸ್ ಸೂರ್ಯ ಅವರು ನ್ಯಾಯಾಲಯದ ಕಟಕಟೆಯಲ್ಲಿ ನಿಂತು ಘಟನೆಯ ದಿನ ನಡೆದ ಪಾರ್ಟಿಯ ಕುರಿತು ತಮ್ಮ ಹೇಳಿಕೆಯನ್ನು ದಾಖಲಿಸಿದ್ದಾರೆ. ಈ ಬೆನ್ನಲ್ಲೇ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸರ್ಕಾರಿ ಅಭಿಯೋಜಕರು ಕೋರ್ಟ್‌ಗೆ ಮನವಿ ಮಾಡಿದ್ದಾರೆ.

**ಕೋರ್ಟ್‌ನಲ್ಲಿ ಗಾಬರಿ ಬಿದ್ದ ನಟ ಚಿಕ್ಕಣ್ಣ:**

ನ್ಯಾಯಾಲಯದ ಕಟಕಟೆಯಲ್ಲಿ ಸಾಕ್ಷಿ ಹೇಳಲು ನಿಂತ ನಟ ಚಿಕ್ಕಣ್ಣ ಅವರು ತೀವ್ರ ಆತಂಕಕ್ಕೆ ಒಳಗಾಗಿ ಮಾತನಾಡಲು ತಡಬಡಿಸಿದರು. ಇದನ್ನು ಗಮನಿಸಿದ ನ್ಯಾಯಾಧೀಶರು ಅವರಿಗೆ ಸ್ವಲ್ಪ ಸಮಯ ವಿಶ್ರಾಂತಿ ತೆಗೆದುಕೊಳ್ಳುವಂತೆ ಸೂಚಿಸಿದರು. ಆದರೂ ಚಿಕ್ಕಣ್ಣ ಅವರು ತಮಗೆ ತೀವ್ರ ಟೆನ್ಷನ್ ಆಗುತ್ತಿದೆ ಎಂದು ಹೇಳಿ ಪೂರ್ಣ ಹೇಳಿಕೆ ನೀಡಲು ಹಿಂದೇಟು ಹಾಕಿದರು. ಅದರಂತೆ, ಚಿಕ್ಕಣ್ಣ ಅವರ ಒತ್ತಡ ಮತ್ತು ಆತಂಕದ ಪರಿಸ್ಥಿತಿಯನ್ನು ಪರಿಗಣಿಸಿದ

## ಕೋರ್ಟ್‌ನಲ್ಲಿ ಗಾಬರಿ ಬಿದ್ದ ಚಿಕ್ಕಣ್ಣ, ಯಶಸ್ ಸೂರ್ಯ ಹೇಳಿದ್ದೇನು?

ನ್ಯಾಯಾಲಯವು ಅವರ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

**ದರ್ಶನ್‌ಗೆ ಕಂಟಕವಾಗ್ತಾರಾ ನಟ ಯಶಸ್ ಸೂರ್ಯ?**

ನ್ಯಾಯಾಲಯದ ಮುಂದೆ ಹಾಜರಾದ ನಟ ಯಶಸ್ ಸೂರ್ಯ ಅವರು, ತಮಗೆ ನಟ ದರ್ಶನ್ ಅವರೊಂದಿಗೆ ಹಲವು ವರ್ಷಗಳ ಒಡನಾಟವಿದೆ. 2010ರ ಚಿಂಗಾರಿ ಸಿನಿಮಾದಿಂದ ಹಿಡಿದು ಕುರುಕ್ಷೇತ್ರ, ಚಕ್ರವರ್ತಿ, ಒಡೆಯ ಹಾಗೂ ಗರಡಿ ಚಿತ್ರಗಳಲ್ಲಿ ಒಟ್ಟಿಗೆ ಕೆಲಸ ಮಾಡಿರುವುದಾಗಿ ತಿಳಿಸಿದರು. ಮುಂದುವರೆದು, ಘಟನೆ ನಡೆದ ದಿನ ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿ ದರ್ಶನ್ ಅವರೊಂದಿಗೆ ಮುಂಬರುವ ಹೊಸ ಸಿನಿಮಾವೊಂದರ ಕುರಿತು ಚರ್ಚಿಸಲು ಭೇಟಿಯಾಗಿ ಊಟ ಮಾಡಿದ್ದೆವು. ಅಲ್ಲಿ ಕೇವಲ ಸಿನಿಮಾಗಳಿಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಮಾತ್ರ ಚರ್ಚೆಯಾಗಿತ್ತೇ ಹೊರತು ಬೇರೇನೂ ನಡೆದಿಲ್ಲ. ಊಟ ಮುಗಿದ ತಕ್ಷಣವೇ ನಾನು ಅಲ್ಲಿಂದ ಹೊರಟುಹೋಗಿದ್ದೆ ಎಂದುಹೇಳಿದ್ದರು.

ಏತನ್ಮಧ್ಯೆ, ಕೊಲೆ ಪ್ರಕರಣದ ಮತ್ತೊಬ್ಬ ಆರೋಪಿ ಪವನ್, ರೇಣುಕಾಸ್ವಾಮಿಯನ್ನು ಬೆಂಗಳೂರಿಗೆ ಕರೆತಂದಿರುವ ವಿಷಯವನ್ನು ಪಾರ್ಟಿ ವೇಳೆ ದರ್ಶನ್‌ಗೆ ತಿಳಿಸಲು ಬಂದು ಹೋಗಿದ್ದ ಎಂದು ಪೊಲೀಸರು ಹೇಳಿಕೆ ನೀಡಲು ತಿಳಿಸಿದ್ದರು. ಆದರೆ, "ಆ ಸಮಯದಲ್ಲಿ ನಾನು ಫೋನ್‌ನಲ್ಲಿ ಮಾತನಾಡುತ್ತಿದ್ದಿದ್ದರಿಂದ ಪವನ್ ಬಂದು ಹೋಗಿದ್ದು ನನ್ನ ಗಮನಕ್ಕೆ ಬಂದಿಲ್ಲ" ಎಂದು ಯಶಸ್ ಸೂರ್ಯ ಸ್ಪಷ್ಟಪಡಿಸಿದರು. ಇನ್ನು, ಯಶಸ್ ಸೂರ್ಯ ಅವರ ಈ ಹೇಳಿಕೆಯ ಬೆನ್ನಲ್ಲೇ, ಸರ್ಕಾರಿ ಅಭಿಯೋಜಕರು ಯಶಸ್ ಸೂರ್ಯ ಅವರನ್ನು ಭಾಗಶಃ ಹಾಸ್ಟೈಲ್ ವಿಟ್ನೆಸ್ (ಸಾಕ್ಷಿ ನುಡಿಯಲು ವಿಮುಖರಾದವರು) ಎಂದು ಪರಿಗಣಿಸುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ. ಅದರಂತೆ, ಬುಧವಾರದ ವಿಚಾರಣೆಯಲ್ಲಿ ಸರ್ಕಾರಿ ವಕೀಲರು ಯಶಸ್ ಸೂರ್ಯ ಅವರಿಗೆ ಪಾಟೀ ಸವಾಲು ನಡೆಸಲಿದ್ದಾರೆ.

# ರಣಬಾಲಿ ಬಿಡುಗಡೆಗೂ ಮುನ್ನ ತಮಿಳುನಾಡು ಮುಖ್ಯಮಂತ್ರಿ ಭೇಟಿ ಮಾಡಿದ ರಶ್ಮಿಕಾ ಮಂದಣ್ಣ, ವಿಜಯ್ ದೇವರಕೊಂಡ!

ರಣಬಾಲಿ ಚಿತ್ರದ ಬಿಡುಗಡೆಗೂ ಮುನ್ನ, ರಶ್ಮಿಕಾ ಮಂದಣ್ಣ ಮತ್ತು ವಿಜಯ್ ದೇವರಕೊಂಡ ಅವರು ತಮಿಳುನಾಡು ಮುಖ್ಯಮಂತ್ರಿ ವಿಜಯ್ ಅವರನ್ನು ಭೇಟಿಯಾದರು ಮತ್ತು ಆ ಭೇಟಿಯ ಚಿತ್ರಗಳನ್ನು ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ.




ರಶ್ಮಿಕಾ ತಮ್ಮ ಪೋಸ್ಟ್‌ನಲ್ಲಿ, 'ಬಹಳ ದೀರ್ಘಕಾಲದ ನಂತರ ನಾನು ವಿಜಯ್ ಸರ್ ಅವರನ್ನು ಭೇಟಿಯಾದೆ. ನೆನಪಿರುವ ಕಾಲದಿಂದಲೂ ಅವರ ದೊಡ್ಡ ಅಭಿಮಾನಿಯಾಗಿರುವುದರಲ್ಲೇ ಆರಂಭವಾಗಿ, ಅವರೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿ, ಇಂದು ಅವರು ಮುಖ್ಯಮಂತ್ರಿಯಾಗಿರುವ ರೀತಿಯನ್ನು ಕಂಡು ಗೌರವಿಸುವವರೆಗೆ – ಅವರ ಈ ಪಯಣ ನಿಜಕ್ಕೂ ಅದ್ಭುತವಾಗಿದೆ!' ಎಂದಿದ್ದಾರೆ. ಮತ್ತೊಂದೆಡೆ, ವಿಜಯ್ ದೇವರಕೊಂಡ, 'ಅತ್ಯಂತ ಆತ್ಮೀಯರಾದ ' ದಳಪತಿ' ವಿಜಯ್ ಸರ್ ಅವರೊಂದಿಗೆ ಅತ್ಯುತ್ತಮ ಸಮಯವನ್ನು ಕಳೆದಿದ್ದೇನೆ. ಸುದೀರ್ಘ ದಿನದ ಕೆಲಸದ ನಂತರವೂ, ಅವರು ನಮ್ಮನ್ನು ಅಪಾರ ಪ್ರೀತಿಯಿಂದ ಬರಮಾಡಿಕೊಂಡರು ಹಾಗೂ ಜೀವನ, ಕೆಲಸ ಮತ್ತು ಪ್ರಪಂಚದ ಕುರಿತು ತಮ್ಮ ವೈಯಕ್ತಿಕ ಒಳನೋಟಗಳನ್ನು ಹಂಚಿಕೊಂಡರು. ಕೇವಲ ಒಂದೇ ಭೇಟಿಯಲ್ಲಿ ಅವರು ನನಗೆ ಅತ್ಯಂತ ಪ್ರಿಯರಾಗಿಬಿಟ್ಟಿದ್ದಾರೆ. ಮುಂದಿನ ಭೇಟಿಯವರೆಗೂ, ನನ್ನ ಪ್ರೀತಿ ಮತ್ತು ಗೌರವಗಳು' ಎಂದು ಬರೆದಿದ್ದಾರೆ. 'ರಣಬಾಲಿ' ಚಿತ್ರವು ಅಕ್ಟೋಬರ್ 16 ರಂದು ಬಿಡುಗಡೆಯಾಗಲಿದೆ. ಮೈತ್ರಿ ಮೂವಿ ಮೇಕರ್ಸ್ ಇತ್ತೀಚೆಗೆ ಈ ಪಿರಿಯಡ್ ಆಕ್ಷನ್ ಡ್ರಾಮಾ ಚಿತ್ರದ ಟ್ರೈಲರ್ ಅನಾವರಣಗೊಳಿಸಿದ್ದು, ಇದರ ಮೂಲಕ ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ಕೆಮಿಸ್ಟ್ರಿ ಅಭಿಮಾನಿಗಳಿಗೆ ಹಬ್ಬದೂಟ ಬಡಿಸಿದಂತಾಗಿದೆ.

ರಾಹುಲ್ ಸಂಕೃತ್ಯನ್ ನಿರ್ದೇಶನದ ಈ ಚಿತ್ರವು 1876–78ರ ಮದ್ರಾಸ್ ಕ್ಷಾಮದ ಹಿನ್ನೆಲೆಯಲ್ಲಿ ಸಾಗುತ್ತದೆ ಮತ್ತು ಬ್ರಿಟಿಷ್ ಆಳ್ವಿಕೆಯಿಂದ ತಮ್ಮ ಹಳ್ಳಿಯನ್ನು ರಕ್ಷಿಸಿಕೊಳ್ಳಲು ಒಬ್ಬ ವ್ಯಕ್ತಿ ನಡೆಸುವ ಹೋರಾಟವನ್ನು ಇದು ಚಿತ್ರಿಸುತ್ತದೆ. 3 ನಿಮಿಷ 47 ಸೆಕೆಂಡುಗಳ ಈ ಟ್ರೈಲರ್, ಚಿತ್ರದ ಪ್ರಮುಖ ಪಾತ್ರಗಳನ್ನು ಪರಿಚಯಿಸುವುದಲ್ಲದೆ, ಕಥೆಯು ನಡೆಯುವ ಗ್ರಾಮೀಣ ರಾಯಲಸೀಮೆ ಪ್ರದೇಶದ ಹಿನ್ನೆಲೆಯನ್ನು ಹಾಗೂ ಕಥಾಹಂದರಕ್ಕೆ ಚಾಲನೆ ನೀಡುವ ಸಂಘರ್ಷದ ಝಲಕ್‌ಗಳನ್ನು ಅನಾವರಣಗೊಳಿಸುತ್ತದೆ. ವಿಜಯ್ ದೇವರಕೊಂಡ ಅವರು 'ಸಿಂಗನಮಲ' ಎಂಬ ಕಾಲ್ಪನಿಕ ಹಳ್ಳಿಯ ಕುದುರೆ ಸವಾರ ಹಾಗೂ ಹೋರಾಟಗಾರನಾದ 'ಸಿಂಗನಮಲ ಬೊಬ್ಬಿಲಿ ರಣಬಾಲಿ' ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಶ್ಮಿಕಾ ಅವರು ನಾಯಕನ ಪತ್ನಿ 'ಜಯಮ್ಮ'ನಾಗಿ ನಟಿಸಿದ್ದರೆ, ಅರ್ನಾಲ್ಡ್ ವೋಸ್ಲೂ ಬ್ರಿಟಿಷ್ ಕಮಿಷನರ್ 'ಸರ್ ಥಿಯೋಡರ್ ಹೆಕ್ಟರ್' ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.



# ಸ್ಯಾಂಡಲ್‌ವುಡ್‌ನಲ್ಲಿ ಮತ್ತೊಂದು ವಿಚ್ಛೇದನ

## 7 ವರ್ಷದ ದಾಂಪತ್ಯಕ್ಕೆ ಅಂತ್ಯವಾಡಿದ ಕನ್ನಡದ ಕಿರುತೆರೆ ನಟಿ!

ಕನ್ನಡ ಕಿರುತೆರೆ ನಟಿ ಐಶ್ವರ್ಯಾ ಪಿಸ್ಸೆ ತನ್ನ ಪತಿಯಿಂದ ವಿಚ್ಛೇದನ ಪಡೆದುಕೊಂಡಿದ್ದಾರೆ. 'ಅನುರೂಪ', 'ಪುನರ್ ವಿವಾಹ' ಸೇರಿದಂತೆ ಹಲವು ಯಶಸ್ವಿ ಧಾರಾವಾಹಿಗಳಲ್ಲಿ ನಟಿಸಿರುವ ಐಶ್ವರ್ಯ ಪಿಸ್ಸೆ ತಮ್ಮ ದಾಂಪತ್ಯ ಜೀವನಕ್ಕೆ ಅಧಿಕೃತವಾಗಿ ಅಂತ್ಯ ಹಾಡಿರುವುದಾಗಿ ಸಾಮಾಜಿಕ ಜಾಲತಾಣದ ಮೂಲಕ ಬಹಿರಂಗಪಡಿಸಿದ್ದಾರೆ. 7 ವರ್ಷಗಳ ಹಿಂದೆ ನಟಿ ಹರಿ ವಿನಯ್ ಅವರನ್ನು ವಿವಾಹವಾಗಿದ್ದರು. ನನ್ನ ವೈಯಕ್ತಿಕ ಜೀವನದ ಸುತ್ತ ಹರಡುತ್ತಿರುವ ವದಂತಿಗಳಿಗೆ ಅಂತ್ಯ ಹಾಡುವ ಉದ್ದೇಶದಿಂದ ಈ ವಿಷಯದ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ. ನಾನು ಮತ್ತು ನನ್ನ ಪತಿ ಕಳೆದ ಒಂದೂವರೆ ವರ್ಷದಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದೇವೆ. ಸಾಕಷ್ಟು ಯೋಚನೆ ಮತ್ತು ಪರಸ್ಪರ ಒಪ್ಪಿಗೆಯೊಂದಿಗೆ, ನಾವು ಪರಸ್ಪರ ಒಪ್ಪಿಗೆಯ ವಿಚ್ಛೇದನ ಪಡೆದಿದ್ದೇವೆ. ಇದು ನಮ್ಮಿಬ್ಬರ ವೈಯಕ್ತಿಕ ನಿರ್ಧಾರವಾಗಿದ್ದು, ಈ ಹಂತದಲ್ಲಿ ನಮಗೆ ಅಗತ್ಯವಿರುವ ಖಾಸಗಿತನ ಮತ್ತು ನೆಮ್ಮದಿಯನ್ನು ಗೌರವಿಸಿ, ನಮ್ಮ ಆಯ್ಕೆಯನ್ನು ಎಲ್ಲರೂ ಮಾನ್ಯ ಮಾಡಬೇಕೆಂದು ವಿನಂತಿಸುತ್ತೇನೆ ಎಂದು ಬರೆದುಕೊಂಡಿದ್ದಾರೆ.

ಅಲ್ಲದೆ, ವೀಕ್ಷಣೆ ಹಾಗೂ ಲೈಕ್ಸ್‌ಗಳಿಗಾಗಿ ಆಧಾರರಹಿತ ಸುಳ್ಳು ಸುದ್ದಿಗಳನ್ನು ಅಥವಾ ಹಳೆಯ ದೃಶ್ಯಗಳನ್ನು ಬಳಸಿ ತಪ್ಪು ಸಂದೇಶಗಳನ್ನು ಹಬ್ಬಿಸಬಾರದು ಎಂದು ಎಚ್ಚರಿಸಿದ್ದು, ಇಂತಹ ಕೃತ್ಯಗಳು ಮುಂದುವರಿದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ನಟಿಯ ಈ ಅಚ್ಚರಿಯ ನಿರ್ಧಾರಕ್ಕೆ ಅವರ ಅಭಿಮಾನಿಗಳು ಕಾಮೆಂಟ್‌ಗಳ ಮೂಲಕ ಧೈರ್ಯ ತುಂಬುತ್ತಿದ್ದಾರೆ.

# ಸನ್ನಿ ಡಿಯೋಲ್ ಅವರ ಸೂರ್ಯ ಚಿತ್ರಕ್ಕೆ ಬಿಡುಗಡೆಯ ದಿನಾಂಕ ನಿಗದಿ

ಸನ್ನಿ ಡಿಯೋಲ್ ಅವರ ಹೊಸ ಚಿತ್ರ, "ಸೂರ್ಯ" ಸಿನಿಮಾದ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. ಮಲಯಾಳಂ ಚಲನಚಿತ್ರ ನಿರ್ಮಾಪಕ ಎಂ ಪದ್ಮಕುಮಾರ್ (ವಾಸ್ತವಂ, ಶಿಕ್ಕರ್, ಜಲಮ್, ಜೋಸೆಫ್ ಮತ್ತು ಮಾಮಾಂಗಂ) ಅವರ ಮೊದಲ ಬಾಲಿವುಡ್ ನಿರ್ದೇಶನದ ಚಿತ್ರ ಇದಾಗಿದೆ.

"ಸೂರ್ಯ", ಪದ್ಮಕುಮಾರ್ ಅವರ ಮಲಯಾಳಂ ಚಿತ್ರ ಜೋಸೆಫ್ ನ ರಿಮೇಕ್ ಆಗಿದ್ದು, ಜೋಜು ಜಾರ್ಜ್, ದಿಲೀಶ್ ಪೋತನ್, ಇರ್ಷಾದ್, ಆತ್ಮೀಯ ರಾಜನ್, ಜಾನಿ ಆಂಟೋನಿ, ಸುಧಿ ಕೊಪ್ಪ, ಮಾಳವಿಕಾ ಮೆನನ್ ಮತ್ತು ಮಾಧುರಿ ಬ್ರಗಾಂಜಾ ನಟಿಸಿದ್ದಾರೆ. ಈ ಚಿತ್ರ ನಿವೃತ್ತ ಪೊಲೀಸ್ ಅಧಿಕಾರಿಯ ಕಥೆಯನ್ನು ಹೇಳುತ್ತದೆ, ಅವನು ತನ್ನ ಮಾಜಿ ಪತ್ನಿಯ ಅನಿರೀಕ್ಷಿತ ಸಾವಿನ ನಂತರ ಆಕಸ್ಮಿಕವಾಗಿ ಅಪರಾಧ ಪ್ರಕರಣದಲ್ಲಿ ಭಾಗಿಯಾಗುತ್ತಾನೆ. 80 ರಷ್ಟು ಚಿತ್ರೀಕರಣವನ್ನು ಪೂರ್ಣಗೊಳಿಸಿದ ನಂತರ, ಸನ್ನಿ



ಇತರ ಚಿತ್ರಗಳೊಂದಿಗೆ ಬಿಡುವಿಲ್ಲದ ವೇಳಾಪಟ್ಟಿಯಿಂದಾಗಿ ಎರಡು ವರ್ಷಗಳ ಕಾಲ ಚಿತ್ರೀಕರಣ ಮಾಡಲು ಸಾಧ್ಯವಾಗಲಿಲ್ಲ. ಈಗ ಸೂರ್ಯ ನವೆಂಬರ್ 20 ರಂದು ಬಿಡುಗಡೆಯಾಗುತ್ತಿದೆ.

# 4ನೇ ಟಿ20ಗೆ 152 ಸಿಕ್ಸರ್‌ಗಳ ಸಿಡಿಲಬ್ಬರದ ಬ್ಯಾಟರ್ ಕಣಕ್ಕಿಳಿಸಲು ಮುಂದಾದ ಭಾರತ!

ಭಾರತ ಮತ್ತು ವೆಸ್ಟ್ ಇಂಡೀಸ್ ತಂಡಗಳು 5 ಪಂದ್ಯಗಳ ಟಿ20 ಸರಣಿಯನ್ನು ಆಡುತ್ತಿವೆ. ಈಗಾಗಲೇ ಮೂರು ಪಂದ್ಯಗಳು ಮುಕ್ತಾಯಗೊಂಡಿವೆ. ಇದರಲ್ಲಿ ಭಾರತ 2 ಪಂದ್ಯಗಳನ್ನು ಗೆದ್ದುಕೊಂಡಿದ್ದರೆ, ವೆಸ್ಟ್ ಇಂಡೀಸ್ 1 ಪಂದ್ಯವನ್ನು ಗೆದ್ದಿದೆ. ಮೊದಲ ಪಂದ್ಯದಲ್ಲಿ ಟೀಮ್ ಇಂಡಿಯಾ 171 ರನ್‌ಗಳ ಗುರಿಯನ್ನು ಸುಲಭವಾಗಿ ಚೇಸ್ ಮಾಡಿ 8 ವಿಕೆಟ್‌ಗಳಿಂದ ಪಂದ್ಯವನ್ನು ಗೆದ್ದುಕೊಂಡಿತ್ತು. ನಂತರ ಎರಡನೇ ಪಂದ್ಯದಲ್ಲಿ ಭಾರತ ನೀಡಿದ್ದ 249 ರನ್‌ಗಳ ಗುರಿಯನ್ನು ವೆಸ್ಟ್ ಇಂಡೀಸ್ ತಂಡ ಯಶಸ್ವಿಯಾಗಿ ರನ್ ಚೇಸ್ ಮಾಡಿ 6 ವಿಕೆಟ್‌ಗಳಿಂದ ಗೆಲುವು ಸಾಧಿಸಿತ್ತು. ಭಾನುವಾರ ನಡೆದಿದ್ದ ಮೂರನೇ ಪಂದ್ಯದಲ್ಲಿ ಭಾರತ 223 ರನ್ ಗಳಿಸಿ 14 ರನ್‌ಗಳಿಂದ ಪಂದ್ಯ ಜಯಿಸಿತ್ತು.

ಇದೀಗ ಉಭಯ ತಂಡಗಳ ನಡುವಿನ 4ನೇ ಪಂದ್ಯ ಅ.14 ರಂದು ನಡೆಯಲಿದೆ. ಈ ಪಂದ್ಯಕ್ಕೆ ಹೈದರಾಬಾದ್‌ನ ರಾಜೀವ್ ಗಾಂಧಿ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ಆತಿಥ್ಯ ವಹಿಸಿಕೊಳ್ಳುತ್ತಿದೆ. ಸರಣಿಯಲ್ಲಿ ಈಗಾಗಲೆ ಎರಡು ಪಂದ್ಯ ಗೆದ್ದು 2–1 ರಿಂದ ಮುನ್ನಡೆ ಸಾಧಿಸಿರುವ ಭಾರತ ಈ ಪಂದ್ಯವನ್ನೂ ಗೆದ್ದು ಸರಣಿ ವಶಪಡಿಸಿಕೊಳ್ಳುವುದರ ಮೇಲೆ ಕಣ್ಣಿಟ್ಟಿದೆ. ಇದಕ್ಕಾಗಿ ನಾಳೆಯ ಪಂದ್ಯದಲ್ಲಿ ಪ್ರಮುಖ ಬದಲಾವಣೆಗೆ ಮುಂದಾಗಿದ್ದು ಸ್ಫೋಟಕ ಹಿಟ್ಟರ್‌ನನ್ನು ಕಣಕ್ಕಿಳಿಸುವ ಬಗ್ಗೆ ಯೋಚಿಸುತ್ತಿದೆ. ಈ ಸರಣಿಗಾಗಿ ಆಯ್ಕೆ ಮಾಡಿರುವ ತಂಡದಲ್ಲಿ ಸ್ಫೋಟಕ ಹಿಟ್ಟರ್ ವೈಭವ್ ಸೂರ್ಯವಂಶಿ ಸಹ ಸ್ಥಾನ ಪಡೆದುಕೊಂಡಿದ್ದಾರೆ. ಆದರೆ, ಪ್ಲೇಯಿಂಗ್ ಇಲೆವೆನ್ ನಲ್ಲಿ ಅವಕಾಶ ಸಿಕ್ಕಿಲ್ಲ. ಇದೀಗ ನಾಲ್ಕನೇ ಪಂದ್ಯದಲ್ಲಿ ವೈಭವ್ ಅವರನ್ನು ಕಣಕ್ಕಿಳಿಸುವ ಸಾಧ್ಯತೆಗಳು ಹೆಚ್ಚಿವೆ. ಕಾರಣ ಈಗಾಗಲೇ ಮೂರು ಪಂದ್ಯಗಳನ್ನು ಆಡಿರುವ ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ ಒಂದು ಪಂದ್ಯದಲ್ಲಿ ಮಾತ್ರ ಅರ್ಧಶತಕ ಸಿಡಿಸಿದ್ದು ಬಿಟ್ಟರೆ ಉಳಿದ ಎರಡು ಪಂದ್ಯಗಳಲ್ಲಿ ಫ್ಲಾಪ್ ಆಗಿದ್ದರು. ಇದರಿಂದಾಗಿ 4ನೇ ಪಂದ್ಯಕ್ಕೆ ಅವರಿಗೆ ವಿಶ್ರಾಂತಿ ನೀಡಿ ವೈಭವ್‌ಗೆ ಅವಕಾಶ ನೀಡುವ ಬಗ್ಗೆ ತಂಡದ ಆಡಳಿತ ಮಂಡಳಿ ಯೋಚಿಸುತ್ತಿದೆ.

**ಭಾರತದಲ್ಲಿ ಪದಾರ್ಪಣೆ ನಿರೀಕ್ಷೆಯಲ್ಲಿ ವೈಭವ್:** 15 ವರ್ಷದ ಸ್ಫೋಟಕ ಹಿಟ್ಟರ್ ವೈಭವ್ ಸೂರ್ಯವಂಶಿ ಅವರು ಈ ವರ್ಷ ಜುಲೈ ತಿಂಗಳಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯ ಮೂಲಕ ಅಂತರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಆದಾಗ್ಯ, ಈ ಸರಣಿಯಲ್ಲಿ ಅವರ ನಿರೀಕ್ಷಿತ ಮಟ್ಟದಲ್ಲಿ ಪ್ರದರ್ಶನ ನೀಡಲು ಸಾಧ್ಯವಾಗಲಿಲ್ಲ. ನಂತರ ನಡೆದ ಜಿಂಬಾಬ್ವೆ ವಿರುದ್ಧದ ಸರಣಿಯಲ್ಲಿ ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ ಮಿಂಚಿ ಪ್ಲೇಯರ್ ಆಫ್ ದಿ ಸಿರಿಸ್ ಪಡೆದುಕೊಂಡಿದ್ದರು.



**ಭಾರತ ಸಂಭಾವ್ಯ ತಂಡ**

**ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್ / ವೈಭವ್ ಸೂರ್ಯವಂಶಿ, ಇಶಾನ್ ಕಿಶನ್ (ವಿ.ಕೀ), ಶ್ರೇಯಸ್ ಅಯ್ಯರ್ (ನಾಯಕ), ತಿಲಕ್ ವರ್ಮಾ, ನಿತೀಶ್ ಕುಮಾರ್ ರೆಡ್ಡಿ, ನಮನ್ ಧೀರ್, ಅಕ್ಷರ್ ಪಟೇಲ್, ಮಯಾಂಕ್ ಯಾದವ್, ಅರ್ಷದೀಪ್ ಸಿಂಗ್, ಪ್ರಿನ್ಸ್ ಯಾದವ್.**

ಇದಾದ ಬಳಿಕ ಏಷ್ಯನ್ ಗೇಮ್ಸ್‌ನಲ್ಲೂ ಕಾಣಿಸಿಕೊಂಡಿದ್ದರು. ಆದರೆ ವೈಭವ್ ತವರಿನಲ್ಲಿ ಭಾರತ ತಂಡದ ಪರ ಇದುವರೆಗೂ ಒಂದೇ ಒಂದು ಪಂದ್ಯ ಆಡಿಲ್ಲ. ಒಂದು ವೇಳೆ ವೆಸ್ಟ್ ಇಂಡೀಸ್ ವಿರುದ್ಧದ ನಾಲ್ಕನೇ ಪಂದ್ಯದಲ್ಲಿ ಅವರಿಗೆ ಆಡುವ ಅವಕಾಶ ಸಿಕ್ಕರೆ ತವರಿನಲ್ಲಿ ಮೊದಲ ಅಂತರಾಷ್ಟ್ರೀಯ ಪಂದ್ಯವಾಗಿರಲಿದೆ.

**ವೈಭವ್ ಸೂರ್ಯವಂಶಿ ಟಿ20 ದಾಖಲೆ:** ಟಿ20 ಕ್ರಿಕೆಟ್‌ನಲ್ಲಿ ವೈಭವ್ ಸೂರ್ಯವಂಶಿ ಉತ್ತಮ ಅಂಕಿಅಂಶ ಹೊಂದಿದ್ದಾರೆ. ಅವರು ಇಲ್ಲಿಯವರೆಗೆ 42 ಪಂದ್ಯಗಳನ್ನು ಆಡಿದ್ದಯ 42ರ ಸರಾಸರಿಯಲ್ಲಿ 1723 ರನ್‌ಗಳಿಸಿದ್ದಾರೆ. ಇದರಲ್ಲಿ 4 ಶತಕ ಮತ್ತು 8 ಅರ್ಧಶತಕಗಳು ಸೇರಿವೆ 144 ಹೈಸ್ಕೋರ್ ಆಗಿದೆ. ಈ ಅವಧಿಯಲ್ಲಿ 152 ಸಿಕ್ಸರ್ ಗಳನ್ನು ಸಿಡಿಸಿದ್ದಾರೆ. ಅಂತರಾಷ್ಟ್ರೀಯ ಟಿ20 ದಾಖಲೆ ನೋಡುವುದಾದರೆ, ಇದುವರೆಗೆ 8 ಪಂದ್ಯಗಳನ್ನು ಆಡಿ 30.75ರ ಸರಾಸರಿಯಲ್ಲಿ 246 ರನ್‌ಗಳಿಸಿದ್ದಾರೆ. ಇದರಲ್ಲಿ 2 ಅರ್ಧಶತಕ ಸೇರಿವೆ.

**ವೆಸ್ಟ್ ಇಂಡೀಸ್ ತಂಡ:** ಶಾಯ್ ಹೋಪ್ (ನಾ/ವಿ,ಕೀ), ಕಾಮಿಲ್ ಪೂರನ್, ಶಿಮ್ರಾನ್ ಹೆಟ್ಮೆಯರ್, ರೋವ್ಮನ್ ಪೊವೆಲ್, ಶೆರ್ಫೇನ್ ರುದರ್‌ಫೋರ್ಡ್, ಕ್ವೆಂಟಿನ್ ಸ್ಯಾಂಪ್ಸನ್, ಕೀಮೋ ಪಾಲ್, ರೋಸ್ಟನ್ ಚೇಸ್, ಶಮರ್ ಸ್ಪ್ರಿಂಗರ್, ಶಮರ್ ಜೋಸೆಫ್, ಗುಡಾಕೇಶ್ ಮೋತಿ.

# ಭಾರತ VS ಶ್ರೀಲಂಕಾ ಏಕದಿನ ಪಂದ್ಯ ಸ್ಥಳಾಂತರ; ಬಿಸಿಸಿಐ ಹೇಳಿದ್ದೇನು!

ಶ್ರೀಲಂಕಾ ತಂಡ ಡಿಸೆಂಬರ್‌ನಲ್ಲಿ ಭಾರತ ಪ್ರವಾಸ ಕೈಗೊಳ್ಳಲಿದೆ. ಎರಡೂ ತಂಡಗಳು ಮೂರು ಪಂದ್ಯಗಳ ಏಕದಿನ ಸರಣಿಯನ್ನು ಆಡಲಿದ್ದು, ನಂತರ ಮೂರು ಪಂದ್ಯಗಳ ಟಿ20ಐ ಸರಣಿಯನ್ನು ಆಡಲಿವೆ. ಏಕದಿನ ಸರಣಿಯ ಮೊದಲ ಪಂದ್ಯ ಡಿಸೆಂಬರ್ 13 ರಂದು ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿದೆ. ಆದರೆ ದೆಹಲಿಯಲ್ಲಿ ನಡೆಯಬೇಕಿದ್ದ ಮೊದಲ ಏಕದಿನ ಪಂದ್ಯವನ್ನು ಸ್ಥಳಾಂತರಿಸಲಾಗುತ್ತದೆ ಎಂಬ ಸುದ್ದಿಗಳು ಹರಿದಾಡಲಾರಂಭಿಸಿದ್ದು ಇದಕ್ಕೆ ಸ್ವತಃ ಸ್ಪಷ್ಟನೆ ನೀಡಿದೆ.



ದೆಹಲಿಯಿಂದ ಮೊದಲ ಏಕದಿನ ಪಂದ್ಯವನ್ನು ಅಹ್ಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣಕ್ಕೆ ಸ್ಥಳಾಂತರಿಸುವುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸುದ್ದಿಗಳು ಹರಿದಾಡಲಾರಂಭಿಸಿದ್ದವು. ಕೂಡಲೇ ಇದಕ್ಕೆ ಪ್ರತಿಕ್ರಿಯೆ ನೀಡಿರುವ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಇದೊಂದು ಸುಳ್ಳು ಮಾಹಿತಿಯಾಗಿದೆ ಎಂದು ಸ್ಪಷ್ಟನೆ ನೀಡಿದ್ದಾರೆ. ಬಿಸಿಸಿಐ ಅಂತಹ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಈ ಪಂದ್ಯವನ್ನು ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲೇ ನಡೆಸಲಾಗುತ್ತದೆ ಎಂದಿದ್ದಾರೆ.

ಸುದ್ದಿ ಸಂಸ್ಥೆ ಎಎನ್‌ಐ ಜೊತೆ ಮಾತನಾಡಿದ ಅವರು, ದೆಹಲಿಯಲ್ಲಿ ನಡೆಯಲಿರುವ ಭಾರತ–ಶ್ರೀಲಂಕಾ ಏಕದಿನ ಪಂದ್ಯವನ್ನು ಅಹಮದಾಬಾದ್‌ಗೆ ಸ್ಥಳಾಂತರಿಸುವ ಸುದ್ದಿ ನಿಜವಲ್ಲ. ಬಿಸಿಸಿಐ ಅಂತಹ ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ. ವೇಳಾಪಟ್ಟಿಗೆ ಸಂಬಂಧಿಸಿದ ಯಾವುದೇ ಮಾಹಿತಿಗಾಗಿ ಅಧಿಕೃತ ಬಿಸಿಸಿಐ ಪ್ರಕಟಣೆಗಳನ್ನು ಗಮನಿಸುವಂತೆ ನಾವು ವಿನಂತಿಸುತ್ತೇವೆ. ಜೊತೆಗೆ, ದ್ವಿಪಕ್ಷೀಯ ಪಂದ್ಯಗಳನ್ನು ನಡೆಸಲು ನಿರ್ದಿಷ್ಟ ನೀತಿಯನ್ನು ಅನುಸರಿಸಿ ಸ್ಥಳಗಳನ್ನು ನಿಗದಿಪಡಿಸಲಾಗುತ್ತದೆ ಎಂದು ಹೇಳಿದರು.

**ಪಂದ್ಯ ಸ್ಥಳಾಂತರ ಸುದ್ದಿ ಹರಡಲು ಕಾರಣ ಏನು?** ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನವೀಕರಣ ಕಾರ್ಯ ನಡೆಯುತ್ತಿರುವ ಕಾರಣ ಭಾರತ–ಶ್ರೀಲಂಕಾ ಏಕದಿನ ಪಂದ್ಯವನ್ನು ದೆಹಲಿಯಿಂದ ಸ್ಥಳಾಂತರಿಸಲಾಗಿದೆ ಎಂಬ ವರದಿಗಳು ಬಂದವು. ಇದರಲ್ಲಿ ಪಿಚ್, ಔಟ್‌ಫೀಲ್ಡ್ ಮತ್ತು ಒಳಚರಂಡಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಆಧುನೀಕರಿಸಲಾಗುತ್ತಿದೆ. ಈ ಕೆಲಸದ ಕಾರಣದಿಂದಾಗಿ ಪಂದ್ಯವನ್ನು ಸ್ಥಳಾಂತರಿಸಬಹುದು ಎಂಬ ವದಂತಿಗಳಿದ್ದವು, ಆದರೆ ಬಿಸಿಸಿಐ ಈ ವರದಿಗಳನ್ನು ಸಂಪೂರ್ಣವಾಗಿ ಸುಳ್ಳು ಎಂದು ತಳ್ಳಿಹಾಕಿದೆ ಮತ್ತು ಪಂದ್ಯವನ್ನು ದೆಹಲಿಯಲ್ಲಿ ನಡೆಸಲಾಗುವುದು ಎಂದು ಸ್ಪಷ್ಟಪಡಿಸಿದೆ.

**ಶ್ರೀಲಂಕಾ ಪ್ರವಾಸ ವೇಳಾಪಟ್ಟಿ:** ಈ ವರ್ಷದ ಡಿಸೆಂಬರ್‌ನಲ್ಲಿ ಶ್ರೀಲಂಕಾ ತಂಡ ಭಾರತ ಪ್ರವಾಸ ಕೈಗೊಳ್ಳಲಿದ್ದು, ಡಿಸೆಂಬರ್ 13 ರಂದು ದೆಹಲಿಯಲ್ಲಿ ಮೊದಲ ಏಕದಿನ ಪಂದ್ಯ ನಡೆಯಲಿದೆ. ಇದರ ನಂತರ, ಮುಂದಿನ ಎರಡು ಪಂದ್ಯಗಳು ಡಿಸೆಂಬರ್ 16 ರಂದು ಬೆಂಗಳೂರಿನಲ್ಲಿ ಮತ್ತು ಡಿಸೆಂಬರ್ 19 ರಂದು ಅಹಮದಾಬಾದ್‌ನಲ್ಲಿ ನಡೆಯಲಿವೆ. ದಕ್ಷಿಣ ಆಫ್ರಿಕಾ, ಜಿಂಬಾಬ್ವೆ ಮತ್ತು ನಮೀಬಿಯಾದಲ್ಲಿ ನಡೆಯಲಿರುವ 2027ರ ಏಕದಿನ ವಿಶ್ವಕಪ್‌ಗಾಗಿ ತಂಡವನ್ನು ಸಿದ್ಧಪಡಿಸಲು ಈ ಸರಣಿ ಉಭಯ ತಂಡಗಳ ಪಾಲಿಗೆ ಮಹತ್ವ ಪಡೆದುಕೊಂಡಿದೆ. ಏಕದಿನ ಸರಣಿ ನಂತರ, ಉಭಯ ತಂಡಗಳ ನಡುವಿನ ಮೊದಲ ಟಿ20 ಪಂದ್ಯವು ಡಿಸೆಂಬರ್ 22 ರಂದು ರಾಜ್‌ಕೋಟ್‌ನಲ್ಲಿ ನಡೆಯಲಿದ್ದು, ಮುಂದಿನ ಎರಡು ಟಿ20 ಪಂದ್ಯಗಳು ಡಿಸೆಂಬರ್ 24 ರಂದು ಕಟಕ್‌ನಲ್ಲಿ ಮತ್ತು ಡಿಸೆಂಬರ್ 27 ರಂದು ಪುಣೆಯಲ್ಲಿ ನಡೆಯಲಿವೆ.

# 'ಪಕ್ವವಾಗಿಲ್ಲದ ಆಟಗಾರರೇ ತಂಡದಲ್ಲಿದ್ದಾರೆ': ಫೀಲ್ಡಿಂಗ್ ಸಾಮರ್ಥ್ಯದ ಕುರಿತು ಭಾರತದ ಮಾಜಿ ಕೋಚ್ ಆರ್ ಶ್ರೀಧರ್!



ಕಳೆದ ಒಂದೆರಡು ವರ್ಷಗಳಲ್ಲಿ ಭಾರತದ ಫೀಲ್ಡಿಂಗ್ ಗುಣಮಟ್ಟ ಕುಸಿದಿದೆ ಎಂಬ ಸತ್ಯವನ್ನು ಅಲ್ಲಗಳೆಯುವಂತಿಲ್ಲ. ಸುಲಭವಾದ ಕ್ಯಾಚ್‌ಗಳನ್ನು ಕೈಚೆಲ್ಲುವುದರಿಂದ ಹಿಡಿದು ಸುಲಭವಾಗಿ ಬೌಂಡರಿಗಳನ್ನು ಬಿಟ್ಟುಕೊಡುವವರೆಗೆ, ಭಾರತೀಯ ಫೀಲ್ಡರ್‌ಗಳ ಪ್ರದರ್ಶನ ನಿರೀಕ್ಷಿತ ಮಟ್ಟದಲ್ಲಿಲ್ಲ. ಮೈದಾನದಲ್ಲಿನ ಇಂತಹ ತಪ್ಪುಗಳು ಭಾರತದ ಸೋಲಿನಲ್ಲಿಯೂ ಪ್ರಮುಖ ಪಾತ್ರ ವಹಿಸಿವೆ. ಈ ವಿಷಯದ ಕುರಿತು ಮಾತನಾಡಿದ ಭಾರತದ ಮಾಜಿ ಫೀಲ್ಡಿಂಗ್ ಕೋಚ್ ಆರ್ ಶ್ರೀಧರ್, ತಂಡಕ್ಕೆ ಸೇರ್ಪಡೆಯಾಗುವ ಹೊಸ ಆಟಗಾರರು ಫೀಲ್ಡಿಂಗ್ ಕೌಶಲ್ಯದ ವಿಷಯದಲ್ಲಿ 'ಅಪಕ್ವ'ರಾಗಿಯೇ ಬರುತ್ತಿದ್ದಾರೆ ಎಂದು ಅವರು ಹೇಳಿದರು. 'ಕ್ರಿಕೆಟ್–21'ನ 2026ರ ಟಿ20ಐ ಪಂದ್ಯಗಳ ಅಂಕಿಅಂಶಗಳ ಪ್ರಕಾರ, ಭಾರತದ ಫೀಲ್ಡಿಂಗ್ ಗುಣಮಟ್ಟ ಕುಸಿತ ಕಂಡಿದೆ. ಭಾರತವು ಬರೋಬ್ಬರಿ 58 ಕ್ಯಾಚ್‌ಗಳನ್ನು ಕೈಚೆಲ್ಲಿದ್ದು, ಶೇ 73.4ರಷ್ಟು ಕ್ಯಾಚ್ ಹಿಡಿಯುವ ದಕ್ಷತೆಯೊಂದಿಗೆ ಅಗ್ರ 10 ರಾಷ್ಟ್ರಗಳ ಪೈಕಿ ಒಂಬತ್ತನೇ ಸ್ಥಾನದಲ್ಲಿದೆ. ಭಾರತೀಯ ಫೀಲ್ಡರ್‌ಗಳು 129 ರನ್‌ಗಳನ್ನು ತಡೆಗಟ್ಟಿದ್ದರೂ, ಕ್ಯಾಚ್ ಕೈಚೆಲ್ಲಿದ ಘಟನೆಗಳು ಮತ್ತು ಗ್ರೌಂಡ್–ಫೀಲ್ಡಿಂಗ್‌ನಲ್ಲಿನ ತಪ್ಪುಗಳಿಂದಾಗಿ 226 ರನ್‌ಗಳು ಹೋಗಿವೆ. ಇದರ ಪರಿಣಾಮವಾಗಿ 97 ರನ್‌ಗಳ ನಿವ್ವಳ ಕೊರತೆ ಉಂಟಾಗಿದೆ.

ಅಲ್ಲದೆ, 14 ರನ್–ಔಟ್‌ಗಳನ್ನು ಯಶಸ್ವಿಯಾಗಿ ಪೂರೈಸಿದ್ದರೂ, ಭಾರತವು 19 ರನ್–ಔಟ್ ಅವಕಾಶಗಳನ್ನು ಕೈಚೆಲ್ಲುವ ಮೂಲಕ ಈ ವಿಷಯದಲ್ಲಿ ಎಲ್ಲಾ ತಂಡಗಳಿಗಿಂತ ಮುಂದಿದೆ. ಇದರೊಂದಿಗೆ, ಭಾರತೀಯ ವಿಕೆಟ್–ಕೀಪರ್‌ಗಳು ಐದು ಸ್ಟಂಪಿಂಗ್ ಅವಕಾಶಗಳ ಪೈಕಿ ಎರಡನ್ನು ಕೈಬಿಟ್ಟಿದ್ದಾರೆ ಎಂಬ ಅಂಶವನ್ನೂ ಗಮನಿಸಬೇಕು. ನ್ಯೂಜಿಲೆಂಡ್‌ನಲ್ಲಿ ಪಂದ್ಯಗಳು ಸ್ಥಳೀಯ ಸಮಯದ ಪ್ರಕಾರ ರಾತ್ರಿ 8 ಗಂಟೆಗೆ ಆರಂಭವಾಗಲಿರುವುದರಿಂದ, ತೀವ್ರ ಚಳಿ ಇರುವಾಗ ಫೀಲ್ಡರ್‌ಗಳು ಮೈದಾನಕ್ಕಿಳಿಯಬೇಕಾಗುತ್ತದೆ.

'ಫೀಲ್ಡಿಂಗ್ ವಿಷಯದಲ್ಲಿ, ಅದರ ನಿರ್ವಹಣೆ ಹಾಗೂ ಅದಕ್ಕೆ ಸಂಬಂಧಿಸಿದ ಸಂಸ್ಕೃತಿಯನ್ನು ರೂಪಿಸುವ ವಿಚಾರದಲ್ಲಿ ಅದು ಈಗ ಖಂಡಿತವಾಗಿಯೂ ಹಿನ್ನೆಲೆಗೆ ಸರಿದಿದೆ ಎಂದು ನನಗೆ ಅನ್ನಿಸುತ್ತದೆ. ಭಾರತೀಯ ತಂಡದ ಬ್ಯಾಟಿಂಗ್ ಶೈಲಿಯಲ್ಲಿ ಒಂದು ಸ್ಪಷ್ಟವಾದ ಸಂಸ್ಕೃತಿ ಎದ್ದು ಕಾಣುವುದನ್ನು ನಾವು ನೋಡಬಹುದು. ಅದೇ ರೀತಿ, ವೇಗದ ಬೌಲರ್‌ಗಳನ್ನು ಬಳಸಿಕೊಳ್ಳುವ ವಿಧಾನದಲ್ಲೂ, ವಿಶೇಷವಾಗಿ ಏಕದಿನ ಪಂದ್ಯಗಳಲ್ಲಿ, ಒಂದು ಸ್ಪಷ್ಟವಾದ ಸಂಸ್ಕೃತಿ ಕಂಡುಬರುತ್ತದೆ. ಉದಾಹರಣೆಗೆ, ಶುಭಮನ್ ಗಿಲ್ ಅವರು ಚೆಂಡನ್ನು ಪಿಚ್‌ನ ಮೇಲೆ ಬಲವಾಗಿ ಅಪ್ಪಳಿಸುವಂತೆ ಬೌಲ್ ಮಾಡುವುದನ್ನು ಇಷ್ಟಪಡುತ್ತಾರೆ' ಎಂದರು.

'ಆದರೆ ಫೀಲ್ಡಿಂಗ್ ವಿಷಯದಲ್ಲಿ ಆ ಗುಣ ಕಾಣುತ್ತಿಲ್ಲ. ತಂಡಕ್ಕೆ ಸೇರ್ಪಡೆಯಾಗುತ್ತಿರುವ ಹೊಸ ಆಟಗಾರರ ಫೀಲ್ಡಿಂಗ್ ಕೌಶಲವು ಇನ್ನೂ ಪರಿಪೂರ್ಣವಾಗಿಲ್ಲ ಎಂಬುದು ನಿಜಕ್ಕೂ ಆತಂಕಕಾರಿ ವಿಷಯ. ಅವರಲ್ಲಿ ಕೆಲವರು ವೇಗದ ಬೌಲರ್‌ಗಳು, ಇನ್ನು ಕೆಲವರು ಬ್ಯಾಟರ್‌ಗಳು. ಆದರೆ ತಂಡಕ್ಕೆ ಬರುವ ಯಾರೇ ಆಗಲಿ, ಅವರು ಕೊಹ್ಲಿ, ಸೂರ್ಯ ಅಥವಾ ಶ್ರೇಯಸ್ ಅವರಂತಹ (ಆ ತಲೆಮಾರಿನ ಆಟಗಾರರಂತಹ) ಶ್ರೇಷ್ಠ ಫೀಲ್ಡರ್‌ಗಳಂತೆ ಕಂಡುಬರುತ್ತಿಲ್ಲ. ಏಕೆಂದರೆ, ಅವರು ಕೇವಲ ಒಂದೇ ಒಂದು ಕೌಶಲದ ಮೇಲೆ – ಅಂದರೆ ಬ್ಯಾಟಿಂಗ್ ಮೇಲೆ – ಹೆಚ್ಚು ಗಮನಹರಿಸಿ ಬೆಳೆದುಬಂದಿರುವಂತೆ ತೋರುತ್ತದೆ' ಎಂದು ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್ ಏರ್ಪಡಿಸಿದ್ದ ಸಂವಾದವೊಂದರಲ್ಲಿ ಶ್ರೀಧರ್ ಹೇಳಿದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news